**Sri H. R. ABDUL GAFFAR** (Deputy Minister for Finance).—I beg to lay on the Table the Finance Accounts of the State of Mysore for the year 1963-64 in pursuance of Clause (2) of Article 151 of the Constitution of India.

---

## BUDGET ESTIMATES FOR 1965-66

### General Discussion—*Continued.*

**ಶ್ರೀ ಬಿ. ಕೆ. ಪುಟ್ಟಯ್ಯ** (ಮೈಸೂರು ಸಿಟಿ ನಾರ್ತ್).—ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ವ್ಯವಸಾಯ ಇಲಾಖೆ ಹಾಗೂ ವಿದ್ಯಾಭ್ಯಾಸ ವಿಚಾರವಾಗಿ ನಾನು ಮಾತನಾಡಿದೆನು. ಈ ದಿವಸ ಫಾರೆಸ್ಟ್ ಇಲಾಖೆ ಬಗ್ಗೆ ಕೆಲವು ಅಂಶಗಳನ್ನು ಸರಕಾರದ ಗಮನಕ್ಕೆ ತರಲು ಬಯಸುತ್ತೇನೆ. ಸ್ವಾಮಿ, 1956ನೇ ಇಸವಿಯಲ್ಲಿ 1,40,957 ಎಕರೆ ಸಾಗುವಳಿ ಜಮೀನು ಇದ್ದಿತು. ಈಗ ಅದು 4,57,703 ಎಕರೆಯಷ್ಟು ಸಾಗುವಳಿಯಾಗಿದೆ ಎಂದು ಹಣಕಾಸಿನ ಸಚಿವರ ಭಾಷಣದಲ್ಲಿ ಹೇಳಿದೆ. ಮೂರನೇ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ 1,06,000 ಎಕರೆ ಪ್ಲಾಂಟೇಶನ್ ಆಗಿದೆ ಎಂದು ತಮ್ಮ ರಿಪೋರ್ಟಿನಲ್ಲಿ ಹೇಳುತ್ತೀರಿ. ಆದರೆ ವರಮಾನ 1957ನೇ ಇಸವಿಯಲ್ಲಿ 334 ಲಕ್ಷ ರೂ. ಇದ್ದುದು ಈಗ 370 ಲಕ್ಷ ರೂಪಾಯಿಗೆ ಏರಿದೆ. ಈ ಅಂಕಿ ಅಂಶಗಳನ್ನೂ ಅವರು ಕೊಟ್ಟಿರತಕ್ಕ ವರಮಾನವನ್ನೂ ನೋಡಿದರೆ ಅವುಗಳಲ್ಲಿ ಅಜಗಜಾಂತರ ವ್ಯತ್ಯಾಸ ಇದೆ. ಸರಕಾರ ಫಾರೆಸ್ಟ್ ಇಲಾಖೆಯಲ್ಲಿ ಕಳ್ಳತನದ ಸಾಗಾಣಿಕೆಗೆ ಅವಕಾಶಕೊಟ್ಟಿದೆ ಎನ್ನುವುದು ಇದರಿಂದ ವೇದ್ಯವಾಗುತ್ತದೆ. ಉದಾಹರಣೆ ಹೇಳುವುದಾದರೆ ಪ್ರತಿಯೊಂದು ಕೂಪನ್ನು ಮೂರು ನಾಲ್ಕುಸಾರಿ ಉಪಯೋಗಿಸಿದಂಥ ಸಂದರ್ಭ ಕಂಡುಬಂದಿದೆ. ಇದಲ್ಲದೆ ಮರ, ಸೌದೆ ಸಾಗಿಸುತ್ತಾರೆ ಎನ್ನುವುದು ನಮ್ಮ ಕಿವಿಗೆ ಮುಟ್ಟಿದೆ. ಸರಕಾರ ಎಚ್ಚರಿಕೆಯಿಂದ ಕೆಲಸ ಮಾಡುತ್ತಾ ಇಲ್ಲ ಎನ್ನುವುದಕ್ಕೆ ಗಮನ ಹರಿಸಲು ಪ್ರಯತ್ನ ಮಾಡುತ್ತೇನೆ.

ಹಾಗೆಯೇ ಕೋ-ಆಪರೇಟಿವ್ ರೈಸ್‌ಮಿಲ್ಸ್ ಮಾಡುತ್ತೇವೆಂದು ಭಾಷಣದಲ್ಲಿ ಹೇಳಿದ್ದಾರೆ. ಇದರ ಬಗ್ಗೆ ಹೇಳುವುದಾದರೆ ನಿಜವಾಗಿಯೂ ಸರಕಾರ ಯಾವುದನ್ನು ಮಾಡಬೇಕೋ ಅದನ್ನು ಮಾಡುತ್ತಿಲ್ಲ. ಯಾವುದನ್ನು ಮಾಡಬಾರದೋ ಅದನ್ನು ಮಾಡುತ್ತಿದೆ. ವ್ಯಾಪಾರಿ ಮನೋಭಾವಕ್ಕೆ ಇಳಿಯುವ ದೃಷ್ಟಿಯಿಂದ ಆಹಾರ ಅಭಾವ ಹೆಚ್ಚು ಮಾಡುವುದಕ್ಕೆ ಸರಕಾರ ಪ್ರಯತ್ನ ಮಾಡುವ ದಾರಿಯಲ್ಲಿ ಹೋಗುತ್ತಿದೆ.

**Sri C. J. MUCKANNAPPA** (Sira).—Sir, I am bringing to the notice of the Hon'ble Chair, that the representative of Akashvani is using his transistor radio in the opposition lounge and hearing the cricket match commentary. The Chair has prohibited so many things in the viscinity of the Assembly hall. May I ask how this is allowed, Sir? Even walking sticks are not allowed. I want a ruling about this.

**Mr. SPEAKER.**—In olden days walking sticks were not allowed in the House of Commons, because it was dangerous. Transistor radios did not exist then. I will ascertain the fact and give a ruling if necessary.

**ಶ್ರೀ ಬಿ. ಕೆ. ಪುಟ್ಟಯ್ಯ.**—ಸರಕಾರ ಎಕಾನಮಿ ಮೆಜರ್ಸ್ ತೆಗೆದುಕೊಳ್ಳುವ ಬಗ್ಗೆ ದೀರ್ಘವಾಗಿ ಆಳವಾಗಿ ವಿವರ ಕೊಟ್ಟಿದೆ. 100ಕ್ಕೆ 30ರಷ್ಟು ಭಾಗ ಕೆಲಸಗಾರರು ಜಾಸ್ತಿ ಇದ್ದಾರೆ, ಇಷ್ಟನ್ನು ಖೋತಾ ಮಾಡಲು ಸಾಧ್ಯವಿದೆ ಎಂದು ಹೇಳಿದ್ದಾರೆ. ಅಲ್ಲದೆ ಎನ್. ಜಿ. ಓ. ಗಳಿಗೆ ಹೆಚ್ಚಿಗೆ ಸಂಬಳ ಕೊಡುವುದಕ್ಕಾಗುವುದಿಲ್ಲ ಎಂದು ಸಹ ಹೇಳಿದ್ದಾರೆ. ನಾವು ಈ ಅಂಶವನ್ನು ಸರಕಾರದ ಗಮನಕ್ಕೆ ಕಳೆದ ಮೂರು ವರ್ಷಗಳಿಂದ ತಂದಿದ್ದೇವೆ. ಅನ್‌ನೆಸೆಸರೀ ಎಸ್ಟಾಬ್ಲಿಶ್‌ಮೆಂಟ್ ಇದೆ ಎಂದು ನಾವು ಪದೇ ಪದೇ ಹೇಳಿದ್ದೇವೆ. ಹಾಗೆ ನಾವು ಹೇಳಿದರೂ ಕೂಡ ಇಲ್ಲ ಎಂದು ಹೇಳಿದ್ದಾರೆ. ಈಗ ಅದನ್ನು ತಾವೇ ಭಾಷಣದಲ್ಲಿ ಹೇಳಿದ್ದನ್ನು ನೋಡಿದರೆ ನಾವು ಹೇಳುವುದಕ್ಕೆ ಬೆಲೆ ಇಲ್ಲ ತಾವು ಹೇಳುವುದು ನಿಜ ಎಂಬ ಅರ್ಥ ಬರುವ ರೀತಿಯಲ್ಲಿ ಹೇಳಿದ್ದಾರೆ. ಇದರಲ್ಲಿ ಒಂದು ಒಳ್ಳೇ ಅಭಿಪ್ರಾಯ ವ್ಯಕ್ತಪಡಿಸಿರುವುದು ಅಂದರೆ, ಇರತಕ್ಕವರಲ್ಲಿ ಯಾರನ್ನೂ ತೆಗೆದು ಹಾಕುವುದಿಲ್ಲ ಎಂದು

ಹೇಳಿರುವುದು. ಸದ್ಯಕ್ಕೆ ಹೊಸದಾಗಿ ನೇಮಕಮಾಡುವುದಿಲ್ಲ ಎಂದು ಸಹ ಹೇಳಿದ್ದಾರೆ. ಹಾಗಾದರೆ ಸ್ಟೇಟ್ ಲೆವೆಲ್ ರಿಕ್ರೂಟಿಂಗ್ ಕಮಿಟಿ, ಪಿ. ಎಸ್. ಸಿ. ಇವುಗಳನ್ನು ಏತಕ್ಕೆ ರದ್ದುಮಾಡ ಬಾರದು ಎಂದು ಹೇಳುತ್ತೇನೆ. ಇನ್ನುಮುಂದೆ ಹೆಚ್ಚಾಗಿ ನೇಮಕವಾಡುವುದಿಲ್ಲ ಅಂದಮೇಲೆ ಪಿ. ಎಸ್. ಸಿ. ನಲ್ಲಿ ನಾಲ್ಕುಜನ ಅಧಿಕಾರಿಗಳು ಏತಕ್ಕೆ ಬೇಕು ? ಸಾವಿರಾರು ರೂಪಾಯಿ ಸಂಬಳದ ಸದಸ್ಯರು ಅಲ್ಲಿ ಏತಕ್ಕೆಬೇಕು ? ಅಲ್ಲಿರುವ ಸದಸ್ಯರ ಸಂಖ್ಯೆ ಏಕೆ ಕಡಿಮೆಮಾಡಬಾರದು ? ಎಸ್ಟಾಬ್ಲಿಶ್‌ಮೆಂಟ್‌ಗಾಗಿ ಕೋಟ್ಯಾಂತರ ರೂಪಾಯಿ ಖರ್ಚಾಗುತ್ತಿದೆ ಎಂದು ಪದೇ ಪದೇ ನಾವು ಹೇಳಿದ್ದೇವೆ. ಈಗ ಅದನ್ನು ಸರಕಾರ ಗಮನಕ್ಕೆ ತೆಗೆದುಕೊಂಡಿರುವುದು ಸಂತೋಷ. ಎನ್. ಜಿ. ಓ. ಗಳಿಗೆ ಸೂಕ್ತಪರಿಹಾರ ಈಗಲಾದರೂ ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಕೈಗಾರಿಕೆಯ ಬಗ್ಗೆ ಸ್ವಲ್ಪ ಹೇಳುತ್ತೇನೆ. ಹೀಗೆ ಈ ಕಾರ್ಖಾನೆಗಳ ಬಗ್ಗೆ ಅವರು ಒಂದು ದೀರ್ಘವಾದ ಹೇಳಿಕೆಯನ್ನು ಕೊಟ್ಟಿದ್ದರೂ ಕೆಲವೇ ಕಾರ್ಖಾನೆಗಳ ಬಗ್ಗೆ ಅಂದರೆ ಕೆಲವು ಖಾಸಗೀ ಮತ್ತು ಕೆಲವು ಸರ್ಕಾರಿ ಕಾರ್ಖಾನೆಗಳ ಬಗ್ಗೆ ಕೆಲವು ವಿವರಗಳನ್ನು ಮಾತ್ರ ಕೊಟ್ಟಿದ್ದಾರೆ. ಆದರೆ ಈ ಕೈಗಾರಿಕಾ ಕ್ಷೇತ್ರದಲ್ಲಿನ್ನೂ ಆಗಬೇಕಾದ ಬಹು ಮುಖ್ಯವಾದ ಕೆಲಸಗಳು ಬಹಳ ಇವೆ. ಸರ್ಕಾರದವರು ಒಂದು ರಾಜಕೀಯದ ದೊಡ್ಡ ಒತ್ತಡಕ್ಕೆ ಸಿಕ್ಕಿ ಅವರು ಇವುಗಳ ಅಭಿವೃದ್ಧಿಯ ಕಡೆಗೆ ಅಷ್ಟಾಗಿ ಗಮನ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಆದಾಗ್ಯೂ ಸರ್ಕಾರದವರು ವಿವೇಚನ ಇಲ್ಲದೆ ಈ ಕಾರ್ಖಾನೆಗಳನ್ನು ತೆರೆಯುವುದಕ್ಕೆ ಲೈಸನ್ಸ್‌ಸುಗಳನ್ನು ಕೊಡುವುದಕ್ಕೆ ಪ್ರಾರಂಭಮಾಡಿದ್ದಾರೆ. ಇವುಗಳಿಗೆ ಎಲ್ಲಿ ಲೈಸನ್ಸ್ ಕೊಡಬೇಕೋ ಅಲ್ಲಿ ಕೊಡದೆ ಕೊಡಬಾರದ ಸ್ಥಳದಲ್ಲಿ ಲೈಸನ್ಸ್ ಕೊಡುತ್ತಿರುವುದರಿಂದ ಇವು ಲಾಭದಾಯಕ ರೀತಿಯಲ್ಲಿ ಕೆಲಸಮಾಡುವುದಕ್ಕಾಗಿಲ್ಲವೆಂಬ ನಾನು ಹೇಳತ್ತೇನೆ. ಈಗ ಎಲ್ಲಿ ಸರ್ಕಾರದವರು ಈ ಕೆಲವು ಕಾರ್ಖಾನೆಗಳನ್ನು ನಡೆಸುವುದಕ್ಕೆ ಲೈಸನ್ಸ್ ಕೊಟ್ಟಿದ್ದಾರೋ ಅಲ್ಲಿ ಸರಿಯಾದ ಕೆಲಸಗಾರರು ಸಿಕ್ಕದೆ ಅನೇಕ ಮಿಲ್ಲುಗಳಲ್ಲಿ ಈ ದಿನ ಬಹಳ ನಷ್ಟವಾಗುತ್ತಿದೆ, ಉದಾಹರಣೆಗೆ, ಆ ಬೆಳಗೊಳದ ಪೇಪರ್ ಮಿಲ್ ಒಂದು. ಈ ಮಿಲ್ಲು ಈ ದಿವಸ ರಾಸಿನಲ್ಲಿ ನಡೆಯುತ್ತಿರುವ ವಿಷಯ ತಮಗೆಲ್ಲರಿಗೂ ಗೊತ್ತಿದೆ. ಹೀಗೆ ಇವರು ಈ ಕೈಮಗ್ಗದ ಬಗ್ಗೆಯೂ ಒಂದು ವಿಷಯವನ್ನು ತಿಳಿಸಿದ್ದಾರೆ. ಆದರೆ ಸರ್ಕಾರದವರು ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ನಾವು ಈ ಸರ್ಕಾರದವರು ಕೊಡತಕ್ಕ ಅಂಕಿ ಅಂಶಗಳನ್ನು ಎಷ್ಟರಮಟ್ಟಿಗೆ ನಂಬಬಹುದು ಎಂಬುದನ್ನು ತಾವೆಲ್ಲರೂ ಆಲೋಚನೆ ಮಾಡಬೇಕಾದ ವಿಷಯ. ಈ ಕೈಮಗ್ಗಗಳಿಂದ ಈ ಮೂರನೆ ಯೋಜನೆಯಲ್ಲ 428 ಕೋಟಿ ಗಜ ಬಟ್ಟೆಯನ್ನು ತಯಾರಿಸುವುದಾಗಿ ಅಂಕಿ ಅಂಶಗಳನ್ನು ಕೊಟ್ಟು ಇವರು ಇದುವರೆಗೂ ತಯಾರಿಸಿರತಕ್ಕ ಬಟ್ಟೆ ಎಷ್ಟು ಎಂದರೆ ಕೇವಲ 325 ಕೋಟಿ ಗಜ ಮಾತ್ರ, ಅಂದರೆ ಇವರು ತಮ್ಮ ಟಾರ್ಗೆಟ್ಟಿನ ಶೇಕಡ 72 ರಷ್ಟನ್ನು ಮಾತ್ರ ರೀಚಾಗಿದ್ದಾರೆಂಬುದು ಇದರಿಂದಲೇ ವೇದ್ಯವಾಗುತ್ತದೆ. ಇನ್ನು ಶೇಕಡ 28 ರಷ್ಟನ್ನು ಇವರು ರೀಚಾಗಿಲ್ಲ. ನಮ್ಮ ಪ್ಲಾನಿನಲ್ಲಿ ಕೆಲಸಕಾರ್ಯಗಳು ಈ ರೀತಿ ನಡೆಯುತ್ತಿವೆ, ಇದರಿಂದ ಸರ್ಕಾರದಲ್ಲಿ ಕೆಲಸ ಕಾರ್ಯಗಳು ಯಾವ ರೀತಿ ನಡೆಯುತ್ತಿವೆ ಎಂಬುದು ಇದರಿಂದ ವೇದ್ಯವಾಗುತ್ತದೆ. ಇನ್ನು ಪವರಲೂಮಿನ ಬಗ್ಗೆಯೂ ಹೀಗೆ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ ನಮ್ಮಲ್ಲಿ 2,000 ಮಗ್ಗಗಳನ್ನು ಹಾಕುವುದಕ್ಕೆ ಅವಕಾಶವಿದ್ದರೂ ಇಲ್ಲಿಯವರೆಗೆ ಹಾಕಿರತಕ್ಕದ್ದು ಕೇವಲ 1,200 ಮಾತ್ರ ಈ ಪೈಕಿ ಒಂದು ನೂರಾದರೂ ಸರಿಯಾಗಿ ಕೆಲಸಮಾಡುತ್ತಿಲ್ಲ. ಸರ್ಕಾರ ದವರು ಇವು ಎಲ್ಲ ಸರಿಯಾಗಿ ನಡೆಯುವುದಲ್ಲವೋ ಆರಿಸಿ ಅಲ್ಲಿಗೆ ಲೈಸನ್ಸ್ ಕೊಡುತ್ತಿದ್ದಾರೆ. ಇಂಥ ಒಂದು ಬಾಬಿಗೆ ಲಕ್ಷಾಂತರ ರೂಪಾಯಿಗಳನ್ನು ಒದಗಿಸಿದ್ದಾರೆ, ಇದಕ್ಕೆ ಬದಲಾಗಿ ಈ ಉದ್ಯಮವನ್ನು ಖಾಸಗೀ ವಲಯಕ್ಕೆ ಬಿಟ್ಟುಕೊಟ್ಟಿದ್ದರೆ ಬಹಳ ಅನುಕೂಲವಿತ್ತು ಸರ್ಕಾರಕ್ಕೂ ಖರ್ಚು ಉಳಿಯುತ್ತಿತ್ತು ಸರ್ಕಾರದವರು ಇಂಥ ಯೋಜನೆಗಳಲ್ಲಿ ಕೋಟ್ಯಾಂತರ ಹಣವನ್ನು ಚೆಲ್ಲಿ ದೇಶದ ಸಂಪತ್ತನ್ನು ಹಾಳುಮಾಡುತ್ತಿದ್ದಾರೆಂದು ಹೇಳಿ ನನಗೆ ಹೆಚ್ಚು ಅವಕಾಶವಿಲ್ಲದ್ದರಿಂದ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್ (ಮೈಸೂರು ನಗರ).—ಸ್ವಾಮಿ ಅಧ್ಯಕ್ಷರೇ, ನಾನು ಈ ಅಂದಾಜು ಪಟ್ಟಿಯ ಮೇಲೆ ಮಾತನಾಡುತ್ತಾ ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಅರ್ಥ ಸಚಿವರು ಮಾಡಿರತಕ್ಕ ಭಾಷಣ ಬಹಳ ಅಮೂಲ್ಯವಾದುದು ಇದು ದೇಶದ ಆರ್ಥಿಕ ಪರಿಸ್ಥಿತಿಯನ್ನು ತಿಳಿಸತಕ್ಕ ಒಂದು ಕೈಗನ್ನಡಿಯೋಪಾದಿಯಲ್ಲಿದೆ. ಅವರು ಇಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ಇಲ್ಲಿ ಸದಸ್ಯರು ಬಹಳ ಎಚ್ಚರಿಕೆಯಿಂದ ಪರಿಶೀಲಿಸಿದ್ದೇ ಆದರೆ ಅದರಿಂದ ದೇಶಕ್ಕೆ ಬಹಳ ಒಳ್ಳೆಯದಾಗಲೀ ಎಂಬ ಭಾವನೆಯಿಂದ ಅವರು ಇಷ್ಟೆಲ್ಲವನ್ನೂ ತಿಳಿಸಿದ್ದಾರೆಂದು ನಾನು ಭಾವಿಸುತ್ತೇನೆ. ದೇಶದ ಹಣಕಾಸಿನ ಪರಿಸ್ಥಿತಿ ಹೇಗಿದೆ ಯಾವ ಯಾವ ಸೆಕ್ಟಾರಿನಲ್ಲಿ ಎಷ್ಟೆಷ್ಟು ಹಣವನ್ನು ಹಾಕಲಾಗಿದೆ ಅಲ್ಲಿಯ ಕೆಲಸಕಾರ್ಯಗಳು ಎಷ್ಟರಮಟ್ಟಿಗೆ

(ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್)

ನಡೆಯುತ್ತಿವೆ ಎಂಬುದನ್ನೆಲ್ಲಾ ಅವರು ಬಹಳ ಚೆನ್ನಾಗಿ ವಿವರಿಸಿದ್ದಾರೆ. ಇಲ್ಲಿ ಈ ಪ್ರತಿಯೊಂದರ ಬಗ್ಗೆ ಪ್ರತಿಯೊಂದು ವಿಷಯದಲ್ಲೂ ಒಬ್ಬೊಬ್ಬ ಸದಸ್ಯರು ಏನೇನು ಹೇಳುತ್ತಾರೋ ಅದನ್ನೆಲ್ಲಾ ಈ ಒಂದೊಂದು ಬಾಬಿನ ಮಂತ್ರಿಗಳು ತಮ್ಮ ತಮ್ಮ ಜವಾಬ್ದಾರಿಯನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸುವುದಕ್ಕೆ ಪ್ರಯತ್ನಪಟ್ಟಿದ್ದರೆ ಇಲ್ಲಿ ನಡೆಯತಕ್ಕ ಟೀಕೆಗಳಲ್ಲಿ ಅರ್ಧಕ್ಕೆ ಅರ್ಧ ಕಡಮೆಯಾಗುತ್ತಿದ್ದವು ಎಂಬುದಾಗಿ ನಾನು ಭಾವಿಸಿಕೊಂಡಿದ್ದೇನೆ. ಅಷ್ಟೇ ಅಲ್ಲದೆ ಅವರು ಟೀಕೆಗಳನ್ನು ತಪ್ಪಿಸಿಕೊಂಡು ಅದರ ಬದಲು ಶಾಭಾಸಗಿರಿಯನ್ನು ಅವರು ಪಡೆಯಬಹುದಾಗಿತ್ತೆಂದು ಹೇಳಲಚ್ಛಿಸುತ್ತೇನೆ. ನಾವು ಈ ದಿವಸ ದೇಶಾಭಿವೃದ್ಧಿಯ ಬಗ್ಗೆ ಎಷ್ಟೋ ಪ್ಲಾನುಗಳನ್ನು ಮಾಡಿದ್ದೇವೆ. ಅವುಗಳನ್ನು ಯಾವ ರೀತಿ ಮುಂದುವರಿಸಬೇಕು ಎಂಬ ವಿಚಾರದಲ್ಲಿ ಆರ್ಥಿಕ ಸಚಿವರು ಒಂದು ಸಮೀಕ್ಷೆ ಮಾಡಿ ವಿಚಾರಗಳನ್ನೆಲ್ಲಾ ತಿಳಿಸಿ ಕೊಟ್ಟಿದ್ದಾರೆ. ಇದನ್ನು ಹಾಗೆ ಆಲೋಚನೆ ಮಾಡಿನೋಡಿದರೆ ಯೋಜನೆ ಕಡೆಗೆ ಯಾರೊಬ್ಬರೂ ಗಮನ ಕೊಡದೆ ಎಲ್ಲರೂ ತಮತಮಗೆ ತಿಳಿದಂತೆ ಕೆಲಸ ಮಾಡುವುದಕ್ಕೆ ಹೊರಟಿದ್ದಾರೇನೋ ಎಂದು ಇದರಿಂದ ಅರ್ಥವಾಗುತ್ತದೆ. ಇನ್ನು ಶ್ರೀಮಾನ್ ಬಿ. ಡಿ. ಜತ್ತಿಯವರು ಮುಂದಿನ ಸಾಲಿನಲ್ಲಿ ನಮ್ಮ ಹಣಕಾಸಿನ ಅಡಳಿತದಲ್ಲಿ ಸುಮಾರು 4 ಕೋಟಿ ರೂಪಾಯಿಗಳು ಖೋತಾ ಬೀಳಬಹುದೆಂದು ತಿಳಿಸಿರುತ್ತಾರೆ. ಆದರೆ ಈ ದಿವಸ ಅವರು ಹಣಕಾಸಿನ ಆಯೋಗದವರಲ್ಲಿಗೆ ಹೋಗಿ ಅವರ ಮುಂದೆ ಸಾಕಷ್ಟು ಸಾಕ್ಷ್ಯಸಾಹಿತ್ಯಗಳನ್ನು ಕೊಟ್ಟು ಅವರಿಂದ ನಮ್ಮ ರಾಜ್ಯಕ್ಕೆ ಹೆಚ್ಚಿನ ಹಣದ ಸಹಾಯವನ್ನು ಪಡೆಯಲು ಹೋಗಿದ್ದಾರೆ. ಆದ್ದರಿಂದ ನಾನೀಗ ಇದರ ಬಗ್ಗೆ ಹೆಚ್ಚೇನು ಹೇಳುವುದಕ್ಕೆ ಇಷ್ಟ ಪಡದೆ ಕೇವಲ ಒಂದು ಮಾತನ್ನು ಮಾತ್ರ ಹೇಳಬೇಕೆಂದಿದ್ದೇನೆ. ಆದರೆ ಮಾನ್ಯ ಆರ್ಥಿಕ ಸಚಿವರು ಆಯವ್ಯಯಪಟ್ಟಿಯನ್ನು ತಯಾರಿಸತಕ್ಕ ಕಾಲದಲ್ಲಿ ಕೆಲವು ಆದಾಯದ ಬಾಬುಗಳನ್ನು ಅಸೆಸ್‌ಮಾಡದೆ ಸುಮಾರು 4 ಕೋಟಿ ರೂಪಾಯಿಗಳ ಆದಾಯವನ್ನು ಕೈಬಿಟ್ಟಿದ್ದಾರೆ. ಅದರೆ ಇದನ್ನು ಲೆಕ್ಕಕ್ಕೆ ತಗೆದುಕೊಳ್ಳಬೇಕೋ ಬೇಡವೋ ಅದು ಗೊತ್ತಾಗುತ್ತಿಲ್ಲ. ಅಂತೂ ಇದನ್ನು ಹಾಗೆ ಕೈಬಿಟ್ಟರೆ ದೇಶಕ್ಕೆ ಬಹಳ ಅನ್ಯಾಯವಾಗುತ್ತದೆ. ಅವರು ಸರಥಾರ್ಜ ಬಾಬನ್ನು ಲೆಕ್ಕಕ್ಕೇ ತೆಗೆದುಕೊಳ್ಳದೆ ದೇಶದ ಆದಾಯ ಕಡಿಮೆಯಾಗಿದೆ ಎಂದು ಹೇಳಿದ್ದಾರೆ. ದೇಶದಿಂದ ವರಮಾನ ತರತಕ್ಕ ಪ್ರತಿಯೊಂದು ಸಂಪನ್ಮೂಲದ ಬಾಬನ್ನು ಕ್ರೋಢೀಕರಿಸಿ ಮಾಡಿದ್ದರೆ ಈ ನಷ್ಟವಾಗುತ್ತಿರಲಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ದೇಶದ ವರಮಾನವನ್ನು ಹೆಚ್ಚಿಸಲು ಹೇಗೆ ಅವಕಾಶವಿತ್ತು ಎಂಬುದನ್ನು ತಿಳಿಸುವುದಕ್ಕೆ ನಾನು ಒಂದೆರಡು ವಿಷಯಗಳನ್ನು ಸಭೆಯ ಮುಂದಿಡಲು ಅಪೇಕ್ಷೆ ಮಾಡುತ್ತೇನೆ. ಶ್ರೀಮಾನ್ ಪಾಟೀಲರವರು ಮಾತನಾಡುತ್ತಾ ಕಳೆದ 18 ವರ್ಷಗಳಿಂದ ಜನರ ಮೇಲೆ ಆರ್ಥಿಕದ ಹೊರೆ ಬಹಳವಾಗಿ ಬಿದ್ದಿದ್ದರೂ ನಮ್ಮ ಯೋಜನೆಗಳೊಂದೂ ಸರಿಯಾಗಿ ಕೆಲಸ ಮಾಡಿಲ್ಲ ಎಂಬುದಾಗಿ ತಿಳಿಸಿದ್ದಾರೆ. ಹೀಗೆ ಈ ಯೋಜನೆಗಳ ಮೇಲೆ ನೂರಾರು ಕೋಟಿ ರೂಪಾಯಿಗಳನ್ನು ಹಾಕಿದ್ದರೂ ಅವು ಎಷ್ಟು ಪ್ರಯೋಜನವನ್ನು ದೇಶಕ್ಕೆ ನೀಡಬೇಕಾಗಿತ್ತೊ ಅಷ್ಟನ್ನು ನೀಡದಿರುವುದರಿಂದ ನಮ್ಮ ಈ ಯೋಜನೆಗಳಲ್ಲಿ ಏನೋ ದೋಷವಿರಬೇಕೆಂದು ನನಗೂ ಅನಿಸುತ್ತಿದೆ. ಈ ಬಗ್ಗೆ ಬೇಕಾದಷ್ಟು ಕೆಲಸಗಳು ನಡೆದಿವೆ, ಹಣವೂ ಖರ್ಚಾಗಿದೆ. ಆದರೆ ಜನರಿಗೆ ಮಾತ್ರ ದೊರೆಯಬೇಕಾಗಿದ್ದ ಪ್ರತಿಫಲ ದೊರೆಯಲಿಲ್ಲ ಎಂದರೆ ಏನರ್ಥ ? ನಾವು ಈ ದಿವಸ ನಮ್ಮ ರಾಜ್ಯದಲ್ಲಿ ವಿದ್ಯಾಭ್ಯಾಸದ ಬಾಬಿಗೆ ಹೆಚ್ಚು ಹಣವನ್ನು ಖರ್ಚುಮಾಡುತ್ತಿದ್ದೇವೆ. ಅದರ ಹಾಗೆ ಅವಕಾಶ ಕೊಟ್ಟು ದೇಶದಲ್ಲಿರತಕ್ಕ ವಿದ್ಯಾವಂತ ಜನರಿಗೆ ನಾವು ಉದ್ಯೋಗಗಳನ್ನು ದೊರಕಿಸಿ ಕೊಡದಿದ್ದರೆ ಇದರಿಂದಾದ ಪ್ರಯೋಜನವೇನು ? ಹೀಗಾಗೇ ದಿನಂಪ್ರತಿ ನಮ್ಮಲ್ಲಿ ಈ ವಿದ್ಯಾವಂತ ನಿರುದ್ಯೋಗಿಸಂಖ್ಯೆ ಜಾಸ್ತಿಯಾಗುತ್ತಿದೆ. ವಿದ್ಯಾವಂತರಲ್ಲದವರ ಸಂಖ್ಯೆ ಬೇರೆ ಇದೆ. ಆದರೆ ವಿದ್ಯಾವಂತರಲ್ಲಿ ಅದರಲ್ಲೂ ಟೆಕ್ನಿಕಲ್ ವಿದ್ಯಾಭ್ಯಾಸ ಮಾಡಿರತಕ್ಕವರು ಡಿಪ್ಲೊಮಾ ಹೋಲ್ಡರುಗಳೂ ಕೂಡ ನಿರುದ್ಯೋಗಿಗಳಾಗಿ ತಿರುಗುವಂಥ ಪರಿಸ್ಥಿತಿ ಉಂಟಾಗಿದೆ ಎಂದು ನಾನು ಕೇಳುತ್ತಿದ್ದೇನೆ. ಆದ್ದರಿಂದ ಈ ವಿಚಾರವನ್ನು ಸರ್ಕಾರದವರು ದೀರ್ಘವಾಗಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಆದರೆ ಇದನ್ನು ಈ ಮೂರನೇ ಯೋಜನೆಯಲ್ಲಿ ಮಾಡಬೇಕಾಗಿತ್ತು. ಅದು ಆಗಲಿಲ್ಲ, ಇದನ್ನು ನಾಲ್ಕನೇ ಯೋಜನೆಯ ಹೊತ್ತಿಗಾದರೂ ಈ ತೊಂದರೆಯನ್ನು ನಿವಾರಣೆ ಮಾಡಬೇಕೆಂದು ಹೇಳುತ್ತೇನೆ.

ಸ್ವಾಮಿ, ದೇಶದಲ್ಲಿ ಹಣವನ್ನು ಖರ್ಚುಮಾಡುವುದಕ್ಕೆ ಯಾರ ಅಭ್ಯಂತರವೂ ಇಲ್ಲ. ಆದರೆ ಆಗಬೇಕಾದ ಕೆಲಸ ಕಾರ್ಯಗಳು ಒಂದು ನಿಯೋಜಿತ ರೀತಿಯಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಬೆಳೆಯುವಂತೆ ಆಗಬೇಕು, ಇದು ಬಹಳ ಮುಖ್ಯವಾದ ವಿಷಯ; ದುಡ್ಡು ಖರ್ಚಾಗುವುದು ಆಗುತ್ತೆ. ಆದರೆ ನಿಯೋಜಿತ ರೀತಿಯಲ್ಲಿ ಆಗುತ್ತಿಲ್ಲ. ಅದರಿಂದ ಬರತಕ್ಕ ಪ್ರತಿಫಲ ಖೋತ ಆಗಿದೆ. ನಾವು ನಮ್ಮ

ಯೋಜನೆಗೆ ತಕ್ಕಂತೆ ಕೆಲಸಕಾರ್ಯಗಳನ್ನು ಅಳವಡಿಸಿಕೊಳ್ಳತಕ್ಕದ್ದು ಬಹಳ ಮುಖ್ಯವಾದ ವಿಚಾರ. ಆದರೆ ಇಲ್ಲಿಯವರೆಗೂ ಇದನ್ನು ಯಾರೂ ಪರಿಶೀಲನೆಮಾಡಿ ನೋಡಿಲ್ಲವೆಂದು ನಾನು ಹೇಳುತ್ತೇನೆ.

2-00 P.M.

ಏಕೆಂದರೆ, ಇವತ್ತಿನ ಆರ್ಥಿಕ ಪರಿಸ್ಥಿತಿ ನೋಡಿದರೆ 18 ವರ್ಷಗಳಿಂದ ಯೋಜನೆಗಳು ಆದರೂ ಕೂಡ ನಮ್ಮ ಆರ್ಥಿಕ ಪರಿಸ್ಥಿತಿ ಉತ್ತಮವಾಗಲಿಲ್ಲವಲ್ಲಾ ಎಂದು ಯೋಚನೆ ಮಾಡುತ್ತಾ ಇದ್ದೇವೆ. ನನಗಾದರೂ ಅನಿಸುತ್ತದೆ, ಒಂದೆರಡು ವಿಷಯಗಳನ್ನು ಮಾತ್ರ ಅವರು ಗಮನದಲ್ಲಿಟ್ಟುಕೊಂಡಿದ್ದರೆ ಅದು ಸಾಧ್ಯವಾಗುತ್ತಾ ಇತ್ತು ಎಂದು ಕಾಣುತ್ತದೆ. ಅಗ್ರಿಕಲ್ಚರಲ್ ಎಕಾನಮಿಯಲ್ಲಿದ್ದಂತಹ ದೇಶವನ್ನು ಪ್ರಗತಿ ಮಾರ್ಗಕ್ಕೆ ತೆಗೆದುಕೊಂಡು ಬಂದು ಅದನ್ನು ಇಂಡಸ್ಟ್ರಿಯಲ್ ಎಕಾನಮಿಗೆ ಮಾಡಬೇಕೆಂದು ಪ್ರಯತ್ನ ಮಾಡುತ್ತಾ ಇದ್ದೇವೆ. ಆ ರೀತಿ ಮಾಡಿದರೆ ಮಾತ್ರ ನಮ್ಮ ದೇಶ ಮುಂದುವರಿಯುವುದಕ್ಕೆ ಸಾಧ್ಯ. ಯಾವ ಕ್ಷೇತ್ರದಲ್ಲಿ ಕಡಿಮೆಯಾಗಿದೆ ಅದನ್ನು ಬಾಕಿ ಕ್ಷೇತ್ರ ಪ್ರಗತಿಯಿಂದ ಕೂಡಿಸಿದರೆ ಮಾತ್ರ ಆ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸುವುದಕ್ಕೆ ಆಗುತ್ತದೆ. ಇವತ್ತು ವ್ಯವಸಾಯವನ್ನೇ ತೆಗೆದುಕೊಂಡರೂ ಕೂಡ ವ್ಯವಸಾಯಗಾರರಿಗೆ ಆಗಬೇಕಾದ ಸೌಲಭ್ಯಗಳನ್ನು ಒದಗಿಸಬೇಕಾದರೆ ದೇಶದ ಸಂಪತ್ತನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ, ಅದಿಲ್ಲದೇ ಕೇವಲ ರೈತನಿಂದ ಬರತಕ್ಕ ಕಂದಾಯ ಒಂದನ್ನೇ ತೆಗೆದುಕೊಂಡರೆ ಅದರಿಂದ ರೈತರು ಮುಂದುವರಿಯುವುದಕ್ಕೆ ಸಾಧ್ಯವಾಗುವುದಿಲ್ಲ. ದೇಶ ಮುಂದುವರಿಯುವುದಕ್ಕೆ ಸಾಧ್ಯವಾಗುವುದಿಲ್ಲ ಆದ್ದರಿಂದ ದೇಶದ ಪ್ರಗತಿಯನ್ನು ಸಾಧಿಸಬೇಕಾದರೆ ಹೇಗೆ ಮಾಡಿಕೊಂಡು ಹೋಗಬೇಕೆಂದು ಯೋಚನೆ ಮಾಡಿ. ಅದಕ್ಕೆ ಮುಖ್ಯವಾಗಿ ಬೇಕಾದ್ದು ವಿದ್ಯುಚ್ಛಕ್ತಿ, ಅದರಿಂದ ಕೈಗಾರಿಕೆಗಳನ್ನು ಬೆಳೆಸಿಕೊಂಡು ಹೋಗಬೇಕು. ಈ ಎರಡು ಕ್ಷೇತ್ರದಿಂದ ಬಂದ ಆದಾಯವನ್ನು ದೇಶದಲ್ಲಿ ಎಲ್ಲಾ ಜನಗಳಿಗೂ ಉಪಯೋಗಮಾಡತಕ್ಕ ವ್ಯವಸ್ಥೆಯನ್ನು ಮಾಡುವುದೇ ಈ ಯೋಜನೆಗಳ ಒಂದು ಉದ್ದೇಶ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಇವತ್ತು ಏನಾಗುತ್ತಾ ಇದೆ ಎಂದರೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಶ್ರೀಮಾನ್ ಜತ್ತಿಯವರ ಭಾಷಣವನ್ನು ಓದಿದರೇ ಸರಿಯಾಗುತ್ತದೆ ಎಂದು ಕಾಣುತ್ತದೆ. ವ್ಯವಸಾಯ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸುವುದಕ್ಕೆ ನೀರಾವರಿ ಯೋಜನೆಗಳನ್ನು ಹೆಚ್ಚಾಗಿ ಮಾಡಿ ಹಣವನ್ನು ಖರ್ಚು ಮಾಡುತ್ತಾ ಇದ್ದೇವೆ. ಆದರೆ ಹಣ ಖರ್ಚಾಗುವುದು ಮುಖ್ಯವಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಹಣ ಖರ್ಚಾದರೂ ಕೂಡ ಪರಿಣಾಮಕಾರಿಯಾದ ರೀತಿಯಲ್ಲಿ ಅದರ ಸೌಲಭ್ಯ ಜನಕ್ಕೆ ತಲುಪುತ್ತಾ ಇಲ್ಲ ಎಂಬುದು ನಮಗೆ ಗೊತ್ತಾಗುತ್ತಾ ಇದೆ. ಮಾನ್ಯ ಹಣಕಾಸಿನ ಮಂತ್ರಿಗಳು ಹೇಳುವುದನ್ನು ತೆಗೆದುಕೊಳ್ಳುವುದಾದರೆ:

The construction of irrigation projects and creation of irrigation power are not an end in themselves. Unless the irrigation potential created is utilised the money spent for construction of projects would be in vain. ಎಂದು ಹೇಳುತ್ತಾರೆ. ಇದನ್ನು 3ನೇ ಯೋಜನೆಯ 4ನೇ ವರ್ಷದಲ್ಲಿ ಈಗಲಾದರೂ ಯೋಚನೆ ಮಾಡಿದರಲ್ಲಾ ಎಂದು ಅನಿಸುತ್ತದೆ. ಈ ವಿಚಾರದಲ್ಲಿ ಇನ್ನೊಂದು ಮಾತನ್ನು ಹೇಳಬಹುದಾದರೆ ಇವತ್ತು ನಮ್ಮ ದೇಶದಲ್ಲಿ ಅನೇಕ ಜಲಾಶಯಗಳನ್ನು ನಿರ್ಮಾಣ ಮಾಡಿದ್ದೇವೆ. ಕೆರೆಗಳನ್ನು ಕಟ್ಟಿದ್ದೇವೆ. ಆದರೆ ಯಾವ ಮಟ್ಟದಲ್ಲಿ ಕೆಲಸಕಾರ್ಯಗಳು ಆಗಬೇಕೋ ಅಷ್ಟಾಗಿಲ್ಲ ಎನ್ನುವುದಕ್ಕೆ ಅಂಕಿಅಂಶ ಇದೆ. ಮೂರನೇ ಪಂಚವಾರ್ಷಿಕ ಯೋಜನೆಯ ಅಂತ್ಯದೊಳಗಾಗಿ ಸುಮಾರು 25·14 ಲಕ್ಷ ಎಕರೆ ಆಗಬೇಕೆಂದು ಗೊತ್ತುಮಾಡಿಕೊಂಡಿದ್ದೇವೆ. ಇವತ್ತು ಪೊಟೆನ್ಷಿಯಲ್ ಎಷ್ಟಾಗಿದೆ ಎಂದರೆ 7 ಲಕ್ಷ ಚಿಲ್ಲರೆ ಮಾತ್ರ ಆಗಿದೆ. ಅದರಲ್ಲಿ 5 ಲಕ್ಷ ಮಾತ್ರ ಉಪಯೋಗವಾಗಿದೆ. 25 ಲಕ್ಷ ಚಿಲ್ಲರೆಗೆ ಆಗತಕ್ಕ ಕೆಲಸ ಕಾರ್ಯಗಳನ್ನು ಮಾಡಿ 5 ಲಕ್ಷ ಎಕರೆ ಉಪಯೋಗವನ್ನು ಪಡೆದಿದ್ದೇವೆ ಎಂದರೆ ಇನ್ನು 20 ಲಕ್ಷ ಎಕರೆಗೆ ಮಾಡಿದಂತಹ ಕಾರ್ಯ ದಂಡವಾಗುವುದಿಲ್ಲವೇ ಅಥವಾ ವ್ಯರ್ಥವಾಗುವುದಿಲ್ಲವೇ ? ಅದರ ಉಪಯೋಗ ಬರುವುದಿಲ್ಲವೇ ಎಂಬುದನ್ನು ಯೋಚನೆ ಮಾಡಬೇಕು. ಅದರ ಉಪಯೋಗ ತಕ್ಷಣ ಬರುವುದಿಲ್ಲ ಎಂದು ಒಪ್ಪಿಕೊಂಡರೂ ಕೂಡ ಅಷ್ಟುಮಟ್ಟಿಗೆ ನಮ್ಮ ಯೋಜನೆ ಸರಿಯೇ ತಪ್ಪೇ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. 25 ಲಕ್ಷ ಎಕರೆ ಉಪಯೋಗ ಮಾಡಿಕೊಳ್ಳುತ್ತೇವೆ ಎಂದರೆ ಅಷ್ಟು ಉಪಯೋಗವಾಗಲೇ ಬೇಕು. ಅದಕ್ಕೆ ಪ್ರತಿಫಲ ಬರಲೇ ಬೇಕು. ಆದರೆ ಬಂದಿರತಕ್ಕ ಪ್ರತಿಫಲ 5 ಲಕ್ಷ ಎಕರೆ ಮಾತ್ರ ಇನ್ನು 20 ಲಕ್ಷ ಎಕರೆಗೆ ಇದುವರೆಗೂ ಖರ್ಚು ಮಾಡಿರತಕ್ಕ ಹಣವನ್ನು ಲೆಕ್ಕ ಹಾಕಿದರೆ 83 ವರೆ ಕೋಟಿ ರೂಪಾಯಿ ಆಗುತ್ತದೆ. ಇದರ ಲೆಕ್ಕ ಹಾಕಿದರೆ ಇನ್ನೂ 10-15 ಲಕ್ಷ ಎಕರೆಯಷ್ಟಾದರೂ ಉಪಯೋಗ ಮಾಡಿಕೊಳ್ಳಲಕ್ಕೆ ಬರುತ್ತದೆ

(ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್)

ಈ ಸಂದರ್ಭದಲ್ಲಿ ಕೃಷ್ಣಾ-ಗೋದಾವರಿ ನೀರಿನ ಬಗ್ಗೆ ಗೊತ್ತು ಮಾಡಿದಂತಹ ಗುಲ್‌ಹಾಟಿ ಕಮಿಷನ್ ಅವರು ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕೆ ಸರ್ಕಾರದವರು ಎಷ್ಟು ಮಟ್ಟಿಗೆ ನಿಗಾಕೊಟ್ಟಿದ್ದಾರೋ ಗೊತ್ತಿಲ್ಲ. ಬಹುಶಃ ನಿಗಾ ಕೊಡುವುದಾದರೆ ಅದರಿಂದ ಎಷ್ಟು ಉಪಯೋಗವಾಗುತ್ತದೆ ಎಂಬುದನ್ನು ಅರಿತುಕೊಳ್ಳಲಿಕ್ಕೆ ಬರುತ್ತದೆ. ಅವರು ಈ ಬಗ್ಗೆ ಯೂಟಿಲೈಸೇಷನ್, ಕ್ರಿಯೇಷನ್ ಆಫ್ ಪೊಟೆನ್‌ಷಿಯಲ್ ವಿಚಾರವಾಗಿ ಒಂದು ಕಡೆ ಈ ರೀತಿ ಹೇಳುತ್ತಾರೆ :

> "The Commission recommends strongly that an immediate review be made of the developments undertaken since 1951, in each State, in order to ascertain how the construction of the engineering works can be expedited to attain the optimum rate of development on each work. Such additional funds (including foreign exchange) and such personnel, as may be required should be allocated to these projects in preference to any new projects. New projects should be sanctioned only if men, material and money are available surplus to the requirements of the projects already undertaken."

ಇದರ ಅರ್ಥ ಏನೆಂದರೆ 32 ಯೋಜನೆಗಳನ್ನು ಇವತ್ತು ಒಂದೇ ಸಾರಿ ಕಾರ್ಯ ಕ್ಷೇತ್ರಕ್ಕೆ ತೆಗೆದು ಕೊಂಡಿದ್ದೇವೆ. ಇವತ್ತು ಹಣದ ಕೊರತೆಯಿಂದ ಯಾವ ಕಡೆಯಲ್ಲೂ ಪೂರ್ಣವಾಗಿ ಕೆಲಸವಾಗುತ್ತಾ ಇಲ್ಲ. ಈಗಾಗಲೇ ಇಷ್ಟೆಲ್ಲಾ ಹಣ ಖರ್ಚಾದರೂ ಕೂಡ ಏಕೆ ಇದರ ಸೌಲಭ್ಯ ಬರುತ್ತಾ ಇಲ್ಲ ಎಂದು ಯೋಚನೆ ಮಾಡುವುದಾದರೆ ಅದಕ್ಕೆ ಕಾರಣ ಇಲ್ಲಿದೆ. ಎಲ್ಲಾ ಕಡೆಯಲ್ಲೂ ಕೆಲಸ ಕಾರ್ಯ ಗಳನ್ನು ಶುರು ಮಾಡುವುದರಿಂದ ಎಲ್ಲಾ ಕಡೆಯಲ್ಲೂ ಎಷ್ಟು ಕೆಲಸ ಆಗಬೇಕೋ ಅಷ್ಟು ಆಗಿಲ್ಲ ಹಣ ಮಾತ್ರ ಖರ್ಚಾಗುತ್ತಾ ಇದೆ. ರಿವೈಸ್ಡ್ ಎಸ್ಟಿಮೇಟ್ಸ್ ಪದೇ ಪದೇ ಆಗುತ್ತಾ ಹೋಗುತ್ತದೆ. ಎರಡು ವರ್ಷದಲ್ಲಿ ಆಗಬೇಕಾದ ಕೆಲಸ 5 ವರ್ಷವಾದರೂ ಆಗುತ್ತಿಲ್ಲ. ಅದರಿಂದಾಗಿ ಯಾರಿಗೆ ಉಪಯೋಗವಾಗಬೇಕೋ ಅವರಿಗೆ ಅದರ ಉಪಯೋಗ ದೊರೆಯುತ್ತಾ ಇಲ್ಲ. ಹಣ ಖರ್ಚಾಗುತ್ತಾ ಇದೆ. ಪಿ. ಡಬ್ಲ್ಯೂ. ಡಿ. ಸೆಕ್ಷನ್‌ನಲ್ಲಿ ಈ ರೀತಿ ಆಗುತ್ತಿರುವುದನ್ನು ಬಹಳ ಮುಖ್ಯವಾಗಿ ಗಮನಿಸ ಬೇಕಾಗಿದೆ. ಯೋಜನೆಗಳನ್ನು ಮಾಡುವಾಗ ಯಾವ ಯಾವ ಯೋಜನೆಗೆ ಎಷ್ಟು ಹಣವನ್ನು ಖರ್ಚು ಮಾಡುವುದಕ್ಕೆ ಶಕ್ತಿ ಇದೆ ಎಂಬುದನ್ನು ಯೋಚನೆ ಮಾಡಿ ಎಲ್ಲಿ ನಿಜವಾಗಿಯೂ ಕೆಲಸಕಾರ್ಯಗಳು ಆಗಬೇಕು ಅದಕ್ಕೆ ಪ್ರಯಾರಿಟಿ ನಿಗದಿ ಮಾಡಿಕೊಳ್ಳಬೇಕಾಗುತ್ತದೆ, ಯಾವುದು ಮುಂಚೆ ಮಾಡಬೇಕು ಯಾವುದು ನಿಧಾನವಾಗಿ ಮಾಡಬೇಕು ಎಂಬುದನ್ನು ಯೋಚನೆ ಮಾಡಿ ಇರತಕ್ಕ ಹಣವನ್ನು ಪೂರ್ಣವಾಗಿ ಒಂದು ಯೋಜನೆಗೆ ಉಪಯೋಗ ಮಾಡಿದರೆ ಅದರಿಂದ ಆಗತಕ್ಕ ಕೆಲಸಕಾರ್ಯಗಳು ಬೇಗ ಆಗಿ ಪ್ರತಿಫಲ ಬರಲಿಕ್ಕೆ ಶುರುವಾಗುತ್ತದೆ. ಹೀಗೆ ಮೂರು ಯೋಜನೆಗಳಲ್ಲಿ ಎಷ್ಟು ಕೆಲಸ ಕಾರ್ಯಗಳನ್ನು ಮುಗಿಸಲಿಕ್ಕೆ ಆಗುತ್ತದೆ ಎಂಬುದನ್ನು ಗಮನದಲ್ಲಿ ಇಟ್ಟುಕೊಳ್ಳಬಹುದು.

ಶ್ರೀ ಎನ್. ನಂಜೇಗೌಡ (ಕೃಷ್ಣರಾಜಪೇಟೆ).—ಸ್ವಾಮಿ ಸಭಾಪತಿಗಳೇ, ನಾನು ಪದೇ ಪದೇ ಇದೇ ಬಡ್ಜೆಟ್ ಸೆಷನ್‌ನಲ್ಲಿ ಕನ್ನಡದಲ್ಲಿ ಈ ಬಡ್ಜೆಟ್ ಪ್ರತಿಗಳನ್ನು ಒದಗಿಸಿಕೊಡಬೇಕು, ಇದು ಕನ್ನಡ ರಾಜ್ಯ ಎಂದು ಅರಿಕೆ ಮಾಡಿಕೊಂಡಾಗ್ಯೂ ಸಹ ಈ ಸಾರಿಯೂ ಇಂಗ್ಲಿಷ್‌ನಲ್ಲೇ ಪ್ರತಿಗಳನ್ನು ಒದಗಿಸಿರುವುದರಿಂದ ಈ ಸಭೆಯ ಕೆಲವು ಸದಸ್ಯರಿಗೆ ಇದನ್ನು ಅಭ್ಯಾಸ ಮಾಡುವುದಕ್ಕೆ ತೊಂದರೆ ಯಾಗಿದೆ ಎಂದು ಈ ಸಮಯದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಸ್ವಾಮಿ, ಈಗ ಮಂಡಿಸಿರತಕ್ಕ ಬಡ್ಜೆಟ್ಟು ಹೇಗೆ ಇದೆ ಎಂದರೆ ನಮ್ಮ ಹಳ್ಳಿಯಲ್ಲಿ ಒಂದು ಗಾದೆ ಹೇಳುತ್ತಾರೆ: ಅದೇನೆಂದರೆ ಕಾಲು ಸಣ್ಣ, ಕೈ ಸಣ್ಣ, ಹೊಟ್ಟೆ ದುಮ್ಮಣ್ಣ ಎಂದು. ಇದು ಹೇಗೆಂದರೆ ನಮ್ಮಲ್ಲಿ ಪ್ಲಾನ್ ಬಹಳ ಜಾಸ್ತಿ ಇದೆ, ಜನಗಳಲ್ಲಿ ದೇಶಪ್ರೇಮ ಕಡಿಮೆಯಾಗಿದೆ, ಅಧಿಕಾರಿಗಳಲ್ಲಿ ನಿಷ್ಠೆ ಇಲ್ಲ, ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ, ಇದರ ಮಧ್ಯೆ ನೂರಾರು ಪ್ಲಾನುಗಳು ಬಂದು ಹಣದ ಅಭಾವದಿಂದ ಆ ನಮ್ಮ ಪ್ಲಾನ್‌ಗಳೆಲ್ಲಾ ಫೇಲ್ ಆಗುವುದಕ್ಕೆ ಅವಕಾಶವಾಗಿದೆ. ಈ ರೀತಿ ಆಯಶಸ್ವಿಯಾಗುವುದಕ್ಕೆ ಕಾರಣವೇನು ಎಂದು ಹೇಳುತ್ತೇನೆ. ವಿಶ್ವೇಶ್ವರಯ್ಯ ಯೋಜನೆ ಎಂದು ತಯಾರು ಮಾಡಿದ್ದಾರೆ. ಇದಕ್ಕೆ ಕೊಟ್ಟಿರತಕ್ಕ ಸಾಲ ಎಷ್ಟು, ಅದರಿಂದ ಎಷ್ಟು ಕೈಗಾರಿಕೆಗಳು ನಡೆಯುತ್ತಿವೆ, ಅದರಿಂದ ಜನತೆಗೆ ಏನಾದರೂ ಪ್ರಯೋಜನವಾಗಿದೆಯೋ ಎಂದು

ಯಾರಾದರೂ ಅಂಕಿ ಅಂಶಗಳನ್ನು ಕಂಡು ಹಿಡಿದಿದ್ದಾರೆಯೆ? ಹಾಗೆ ಮಾಡದೆ ಸಾಲ ಕೊಡುತ್ತ ಹೋದರೆ ಸಣ್ಣ ಕೈಗಾರಿಕೆಗಳು ಹೆಚ್ಚುತ್ತವೆ ಎನ್ನುವುದು ಸರ್ಕಾರದ ಅಭಿಪ್ರಾಯವೇ? ಈ ಯೋಜನೆಗೆ ಒದಗಿಸಿರುವ ಹಣ ಸರಿಯಾಗಿ ಉಪಯೋಗವಾಗುತ್ತಿಲ್ಲ ಎನ್ನುವುದನ್ನು ಸರ್ಕಾರ ಮನಗಂಡು ಆದಷ್ಟು ಜಾಗ್ರತೆ ಈಗಿನ ಪದ್ಧತಿಯನ್ನು ಬದಲಾವಣೆ ಮಾಡಿ ಕೈಗಾರಿಕೆ ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಕುರಿ ಪೋಷಕ ಸಂಘಗಳನ್ನು ಮಾಡಿದ್ದಾರೆ. ರೈತನಾದವನು ತನ್ನ ಕುರಿಗಳ ಉಣ್ಣೆಯನ್ನು ಸೊಸೈಟಿಗೆ ಕೊಡುತ್ತಾನೆ. ಆದರೆ ಅಲ್ಲಿಂದ ಕಂಬಳಿ ತಯಾರಾಗಿ ರೈತನಿಗೆ ಕೊಡುವಾಗ ಅವನು ಕೊಟ್ಟ ಉಣ್ಣೆಯಿಂದ ತಯಾರಾದ ಪದಾರ್ಥಗಳು ಸಿಕ್ಕದೆ ಹದ ಮಾಡಿದ ಚರ್ಮದಿಂದ ತೆಗೆದ ಉಣ್ಣೆಯ ಪದಾರ್ಥಗಳನ್ನು ಕೊಡುತ್ತಾರೆ. ಹೀಗಾಗಿ ಜನಗಳಲ್ಲಿ ಅಪಪ್ರಚಾರವಾಗಿ ಈ ಯೋಜನೆ ಯಶಸ್ವಿಯಾಗದೆ ಇರುವುದಕ್ಕೆ ಕಾರಣವಾಗಿದೆ. ಸರ್ಕಾರದವರು ಕೂಡಲೇ ಗಮನ ಕೊಟ್ಟು ಸಂಬಂಧಪಟ್ಟ ಇಲಾಖೆಯವರಿಂದ ಪರಿಶೀಲನೆ ನಡೆಸಿ ರೈತನಿಗೆ ಆತನು ಕೊಟ್ಟ ಉಣ್ಣೆಯ ಪದಾರ್ಥಗಳೇ ಬರುವಂತೆ ಮಾಡಬೇಕು ಎಂದು ಹೇಳುತ್ತೇನೆ.

ನೀರಾವರಿ ಬಾವಿಗಳ ವಿಚಾರವಾಗಿ ನಾನು ಎರಡು ಸಾರಿ ಇದೇ ಸಭೆಯಲ್ಲಿ ಹೇಳಿದ್ದೇನೆ. ಇದಕ್ಕಾಗಿ ಕೊಟ್ಟಿರುವ ಹಣ ನ್ಯಾಯವಾಗಿ ಬಾವಿಗಳಿಗಾಗಿ ಉಪಯೋಗಿಸಲ್ಪಟ್ಟಿದೆಯೇ, ಅದರ ಪ್ರಯೋಜನ ಪೂರ್ತಿಯಾಗಿ ರೈತನಿಗೆ ಸಿಕ್ಕಿದೆಯೇ ಎನ್ನುವುದನ್ನು ಪರಿಶೀಲನೆ ಮಾಡಬೇಕು ಎಂದು ಹೇಳಿದೆ. ನನ್ನ ತಾಲ್ಲೂಕಿನ ವಿಚಾರವಾಗಿ ಹೇಳುವುದಾದರೆ 96 ಬಾವಿಗಳಾಗಿ ದುಡ್ಡನ್ನು ಕೊಟ್ಟಿದ್ದರೂ ಕೇವಲ ಆರು ಬಾವಿಗಳು ಮಾತ್ರ ಆಗಿವೆ. ಉಳಿದ 90 ಬಾವಿಗಳಿಗೆ ದುಡ್ಡು ಖರ್ಚಾಗಿದ್ದರೂ ಹಾಗೆಯೇ ಇವೆ. ಈ ದುಡ್ಡನ್ನು ಯಾರು ತೆಗೆದುಕೊಂಡಿದ್ದಾರೆ, ಅವರಿಂದ ಕಂತುಗಳು ಬಂದಿವೆಯೇ ಎಂಬುದನ್ನು ನೋಡಬೇಕು. ಇದು ಯಾವುದನ್ನೂ ನೋಡದೆ ಇಷ್ಟು ದುಡ್ಡನ್ನು ಒದಗಿಸಿದರೆ ಅದನ್ನು ಸರಿದೂಗಿಸುವುದಕ್ಕೆ ಸಾಧ್ಯವೇ ಎಂಬುದನ್ನು ಸಂಬಂಧಪಟ್ಟ ಇಲಾಖೆಯವರು ನಿಗಾ ಕೊಡಬೇಕು.

ಮಾನವ ಶಕ್ತಿಯನ್ನು ಉಪಯೋಗಿಸುವ ಯೋಜನೆ ವಿಷಯ ಎರಡು ವರ್ಷಗಳಿಂದ ಹೇಳುತ್ತಿದ್ದಾರೆ. ಇದು ಯಶಸ್ವಿಯಾಗಿದೆಯೇ ? ಜನಗಳು ಇದು ತಮ್ಮಿಂದ ಆಗಬೇಕಾದ ಕೆಲಸ, ಅದನ್ನು ಮಾಡಿಕೊಳ್ಳಬೇಕು ಎಂದು ಮುಂದೆ ಬಂದಿದ್ದಾರೆಯೇ? ಅದಕ್ಕಾಗಿ ಒದಗಿಸಿರುವ ದುಡ್ಡು ಏನಾಗಿದೆ? ಬಜೆಟ್ಟಿನಲ್ಲಿ ಹಣವನ್ನು ತೋರಿಸುತ್ತೇವೆ, ಅದು ಖರ್ಚಾಗಿದೆಯೇ ಅದರಿಂದ ದೇಶಕ್ಕೆ ಒಳ್ಳೆಯದಾಗುತ್ತಿದೆಯೇ ಎನ್ನುವುದನ್ನು ಸ್ವಲ್ಪ ವಿಮರ್ಶೆ ಮಾಡಬೇಕು. ಈ ಯೋಜನೆಗಾಗಿ ಒದಗಿಸಿರುವ ಹಣವನ್ನು ಬೇರೆ ವಿಧದಲ್ಲಿ ಸಣ್ಣ ನೀರಾವರಿ ಕೆಲಸಗಳಿಗೆ ಖರ್ಚು ಮಾಡಬೇಕೆಂದು ಹೇಳಿ ಈ ಬಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಂಡರೆ ಅದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ.

ಸಣ್ಣ ನೀರಾವರಿ ಯೋಜನೆಯ ಕೆಲಸ ವಿದ್ಯುಚ್ಛಕ್ತಿ ಮತ್ತು ಪಂಪ್‌ಸೆಟ್‌ಗಳನ್ನು ಒದಗಿಸುವುದು ಬಹಳ ಮುಖ್ಯವಾದುದು. ಇವು ಮೂರೂ ದೇಶದ ಆಹಾರಭಾವವನ್ನು ನೀಗುವುದಕ್ಕೆ ಮೊದಲ ಮೆಟ್ಟಲುಗಳು ಎಂದು ಹೇಳುತ್ತೇನೆ. ಉಳಿದ ಎಲ್ಲ ಯೋಜನೆಗಳನ್ನೂ ಕೈಬಿಟ್ಟು ಈ ಮೂರಕ್ಕೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಟ್ಟರೆ ದೇಶದಲ್ಲಿರುವ ಆಹಾರಭಾವವನ್ನು ನೀಗುವುದಕ್ಕೆ ಅವಕಾಶವಾಗುತ್ತದೆ. ಈ ವರ್ಷದ ಆಯವ್ಯಯದಲ್ಲಿ ಹೊಸ ನೀರಾವರಿ ಕಲಸಗಳನ್ನು ತೆಗೆದುಕೊಂಡಿಲ್ಲ. ಈಗ ಉಳಿದಿರುವ ಕೆಲಸಗಳಿಗೆ ಹತ್ತು ಕೋಟಿ ರೂಪಾಯಿಗಳು ಬೇಕು ಎಂದು ಕೇಳಿದ್ದೇನೆ. ಅದಕ್ಕೆ ಒಂದು ಕೋಟಿ ರೂಪಾಯಿ ಮಾತ್ರ ಒದಗಿಸಿದ್ದಾರೆ. ಹೀಗಾಗಿ ನಾವು ಹಾಕಿದ ಬಂಡವಾಳಕ್ಕೆ ಪ್ರತಿಫಲ ಬರುತ್ತಿಲ್ಲ. ಸರ್ಕಾರದಿಂದ ಹಣವನ್ನು ಕೊಟ್ಟು ಕೆಲಸ ಮಾಡುವುದರಲ್ಲಿ 10-15 ವರ್ಷ ನಿಧಾನವಾದರೆ ಯೋಜನೆಗಳನ್ನು ಪೂರೈಸುವುದು ಹೇಗೆ ಮತ್ತು ಆಹಾರಪರಿಸ್ಥಿತಿಯನ್ನು ಸರಿದೂಗಿಸುವುದು ಹೇಗೆ? ಇದಕ್ಕೆ ಗಮನ ಕೊಡಬೇಕೆಂದು ಹೇಳುತ್ತೇನೆ. ಹಳೆಯ ಕೆಲಸಗಳನ್ನೇ ಮುಗಿಸುವುದಕ್ಕೆ ಆಗದೆ ಇದ್ದರೆ ಹೊಸ ಕೆಲಸಗಳನ್ನು ಹೇಗೆ ತೆಗೆದುಕೊಳ್ಳುವುದು ? ಆದುದರಿಂದ ಮಂತ್ರಿಮಂಡಲದಲ್ಲಿ ಈ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಂಡು ಸಣ್ಣ ನೀರಾವರಿಗೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ.

ವಿದ್ಯುಚ್ಛಕ್ತಿಯ ವಿಷಯ. ಪಂಪ್‌ಸೆಟ್ಟುಗಳನ್ನು ಹಾಕಬೇಕು, ನೀರಾವರಿಯನ್ನು ಜಾಸ್ತಿ ಮಾಡಬೇಕು, ಆದರಿಂದ ಹೆಚ್ಚು ಬೆಳೆ ತೆಗೆಯುವುದಕ್ಕೆ ಅವಕಾಶವಿದೆ ಎಂದು ಎಲ್ಲ ಕಡೆಯೂ ಪ್ರಚಾರ ಮಾಡುತ್ತಿದ್ದಾರೆ? ಹಳ್ಳಿಯ ಜನಗಳಿಗೆ ಬಾವಿಗಳಿಗೆ ಕೆಲವು ಕಡೆ ದುಡ್ಡು ಕೊಟ್ಟಿರುತ್ತಾರೆ. ಪಂಪ್‌ಸೆಟ್ಟುಗಳಿಗಾಗಿ ವಿದ್ಯುಚ್ಛಕ್ತಿ ಇಲಾಖೆಗೆ ದುಡ್ಡು ಕಟ್ಟಿದ ಮೇಲೆ, ಪಂಪ ಹೌಸ್ ಕಟ್ಟಿ, ಅದಕ್ಕೆ ಬೇಕಾದ ಯಂತ್ರಗಳನ್ನು ತೆಗೆದುಕೊಂಡು ಬನ್ನಿ ಎಂದು ನಿರ್ಬಂಧಗಳನ್ನು ಹಾಕುತ್ತಾರೆ. ಇನ್ನು ಕಂಬಗಳನ್ನು ಹಾಕಿರುವುದಿಲ್ಲ, ಲೈನ್ ಎಳೆದಿರುವುದಿಲ್ಲ ಅಷ್ಟರಲ್ಲಿಯೇ ಯಂತ್ರಗಳನ್ನು ತಂದರೆ ಹೇಗೆ

(ಶ್ರೀ ಎನ್. ನಂಜೇಗೌಡ)

ಎಂದು ಯೋಚನೆ ಮಾಡುತ್ತಾರೆ. ಸರ್ಕಾರದಿಂದ ಸಾಲ ತೆಗೆದುಕೊಂಡು ಯಂತ್ರಗಳನ್ನು ಕೊಂಡುಕೊಳ್ಳಬೇಕಾದರೆ ಆರು ತಿಂಗಳಾದರೂ ಸಾಲ ಮಂಜೂರಾಗುವುದಿಲ್ಲ. ಇದರಿಂದ ಬಹಳ ತೊಂದರೆಯಾಗುತ್ತಿದೆ. ಆದುದರಿಂದ ದಯವಿಟ್ಟು ವಿದ್ಯುಚ್ಛಕ್ತಿ, ಪಂಪ್‌ಸೆಟ್ ಮತ್ತು ಸಣ್ಣ ನೀರಾವರಿ ಕೆಲಸ ಇವು ಮೂರಕ್ಕೂ ಗಮನ ಕೊಟ್ಟು ಅವು ಜಾಗ್ರತೆಯಾಗಿ ಫಲ ಕೊಡುವಂತೆ ಪ್ರಾಧಾನ್ಯತೆಯನ್ನು ಕೊಡಬೇಕೆಂದು ಹೇಳುತ್ತೇನೆ. ರಾಷ್ಟ್ರೀಯ ವಿಸ್ತರಣಾ ಯೋಜನೆ ಮತ್ತು ಉಳಿದ ಕಾರ್ಯಕ್ರಮಗಳಿಗೆ ಕೊಡುವ ಹಣವನ್ನು ಖೋತಾ ಮಾಡಿ ಈ ಮೂರು ಕೆಲಸಗಳಿಗೆ ಕೊಡುವುದರಿಂದ ಹೆಚ್ಚಿನ ಸಹಾಯ ದೊರೆತು ನೀರಾವರಿ ಕೆಲಸ ಮುಂದುವರಿಯುತ್ತದೆ ಎಂದು ಸಲಹೆ ಮಾಡುತ್ತೇನೆ.

ಹಳ್ಳಿಗಳಲ್ಲಿ ವಾಸ ಮಾಡತಕ್ಕ ಸಣ್ಣ ನೌಕರರ ಕಷ್ಟ ಹೇಳತೀರದು. ಅವರಿಗೆ ವಾಸಕ್ಕೆ ಮನೆಗಳಿಲ್ಲ. ಅವರು ಎಲ್ಲಿ ಇರಬೇಕು? ಮೊದಲೇ ಆಹಾರಾಭಾವ ಇದೆ. ಇಂಥದ್ದರಲ್ಲಿ ಅವರು ವಾಸ ಮಾಡುವುದಕ್ಕೆ ಮನೆಗಳಿಲ್ಲದೆ ಇದ್ದರೆ ಹೇಗೆ? ಡಾಕ್ಟರುಗಳಾಗಲೀ, ರೆವೆನ್ಯೂ ಇನ್‌ಸ್ಪೆಕ್ಟರಾಗಲೀ, ಉಪಾಧ್ಯಾಯರಾಗಲೀ, ಯಾರೇ ಆಗಲಿ ಮನೆಗಳಿಲ್ಲದೆ ಇದ್ದರೆ ಅಂಥ ಕಡೆಗೆ ಹೋಗುವುದಿಲ್ಲ. ಅಂಥ ಕಡೆಗಳಿಗೆ ಯಾರನ್ನು ವರ್ಗ ಮಾಡಿದರೂ ಅವರು ಬೇರೆ ಕಡೆಗೆ ವರ್ಗ ಮಾಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಯಾವ ಯಾವ ಇಲಾಖೆಯವರಿಗೆ ಎಲ್ಲೆಲ್ಲಿ ಎಷ್ಟೆಷ್ಟು ಮನೆಗಳು ಬೇಕು ಎನ್ನುವುದನ್ನು ತಿಳಿದುಕೊಂಡು ಹೌಸಿಂಗ್‌ಬೋರ್ಡ್ ಮೂಲಕ ಹಳ್ಳಿಗಳಲ್ಲಿ ವಾಸಕ್ಕೆ ಯೋಗ್ಯವಾದ ಮನೆಗಳನ್ನು ಕಟ್ಟಿಸಿ ಕೊಡುವುದರಿಂದ ಅಲ್ಲಿ ಕೆಲಸಕ್ಕೆ ಹೋಗುವಂಥ ನೌಕರರಿಗೂ ಅನುಕೂಲವಾಗುತ್ತದೆ, ಸರ್ಕಾರಕ್ಕೂ ಸಹ ಬಾಡಿಗೆಯ ರೂಪದಲ್ಲಿ ಖರ್ಚು ಮಾಡುವ ಹಣಕ್ಕೆ ಪ್ರತಿಫಲ ಬರುತ್ತದೆ. ಈ ವಿಚಾರಕ್ಕೂ ಸರ್ಕಾರ ಗಮನ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಆಹಾರದ ವಿಷಯದಲ್ಲಿ ಒಂದು ಮಾತನ್ನು ಹೇಳುತ್ತಿದ್ದೇನೆ ಸ್ವಾಮಿ? ಈಗ ಜಿಲ್ಲೆಯಿಂದ ಜಿಲ್ಲೆಗೆ ಆಹಾರ ಧಾನ್ಯಗಳು ಹೋಗಕೂಡದು ಎಂದು ನಿರ್ಬಂಧವನ್ನು ಹಾಕಿರುವುದು ಒಳ್ಳೆಯದು. ಹಾಗೆ ಮಾಡದೆ ಇದ್ದ ಪಕ್ಷದಲ್ಲಿ ಆಹಾರಧಾನ್ಯಗಳೆಲ್ಲ ಕೇರಳಕ್ಕೋ ಅಥವಾ ಮಹಾರಾಷ್ಟ್ರಕ್ಕೋ ಹೋಗಿಬಿಡುತ್ತಿದ್ದವು. ನಿರ್ಬಂಧವನ್ನು ಹಾಕಿರುವುದರಿಂದ ಅಹಾರ ಎಲ್ಲಿ ಹೆಚ್ಚಾಗಿದೆಯೋ ಅಲ್ಲಿ ಅದರ ಬೆಲೆಗಳು ಕಡಿಮೆಯಾಗಿವೆ ಮತ್ತು ಕಡಿಮೆ ಧಾನ್ಯಗಳಿರುವ ಕಡೆ ಬೆಲೆಗಳು ಹೆಚ್ಚಾಗಿವೆ. ಹೆಚ್ಚು ಆಹಾರ ಬೆಳೆಯುವ ಕಡೆಯಿಂದ ಕೊರತೆ ಇರುವ ಕಡೆಗಳಿಗೆ ಸರ್ಕಾರ ಧಾನ್ಯಗಳನ್ನು ತೆಗೆದುಕೊಂಡು ಬಂದು ಸರಬರಾಜು ಮಾಡುವುದಕ್ಕೆ ಅವಕಾಶವಿದೆ. ಆದರೆ ಒಂದು ವಿಷಯದಲ್ಲಿ ಮಾತ್ರ ರೈತನಿಗೆ ನಿಜವಾದ ತೊಂದರೆಯಾಗುತ್ತಿದೆ. ನಾಲ್ಕು ಕ್ವಿಂಟಾಲ್ ಬತ್ತವನ್ನು ಎಲ್ಲಿಗಾದರೂ ತೆಗೆದುಕೊಂಡು ಹೋಗಬೇಕಾದರೆ ಅವನು ಡೆಪ್ಯುಟಿ ಕಮಿಷನರ ಹತ್ತಿರ ಬರಬೇಕು. ರೈತರು 30—40 ಮೈಲಿ ದೂರದಿಂದ ಜಿಲ್ಲಾ ಮುಖ್ಯ ಸ್ಥಳಗಳಿಗೆ ಬರಬೇಕು. ಡೆಪ್ಯುಟಿ ಕಮಿಷನರು ವಾರದಲ್ಲಿ ಎರಡು ದಿವಸ ಸಹ ಹೆಡ್ ಕ್ವಾರ್ಟರಿನಲ್ಲಿ ಇರುವುದಕ್ಕಾಗುವುದಿಲ್ಲ. ಪ್ರವಾಸದಲ್ಲಿರುತ್ತಾರೆ. ಮೂರು ನಾಲ್ಕು ಕ್ವಿಂಟಾಲ್ ಬತ್ತ ಅಥವಾ ಅಕ್ಕಿಗೆ ಡೆಪ್ಯುಟಿ ಕಮಿಷನರ ಹತ್ತಿರ ಹೋಗಬೇಕು ಎಂದರೆ ಜನರಿಗೆ ತೊಂದರೆಯಾಗುತ್ತದೆ. ಆದುದರಿಂದ ದಯವಿಟ್ಟು ಆತನು ಸರ್ಕಾರಕ್ಕೆ ಕೊಡಬೇಕಾದ ಧಾನ್ಯವನ್ನು ಕೊಟ್ಟಿದ್ದ ಪಕ್ಷದಲ್ಲಿ ತಾಲ್ಲೂಕು ಅಮಲ್ದಾರ್‌ರವರು ಐದು ಕ್ವಿಂಟಾಲ್‌ವರೆಗೆ ಸಾಗಿಸುವುದಕ್ಕೆ ಪರ್ಮಿಷನ್ ಕೊಡಲು ಏಕೆ ಆಜ್ಞೆ ಮಾಡಬಾರದು ಎಂದು ಕೇಳುತ್ತೇನೆ. ಇದರಿಂದ ಸಣ್ಣ ಸಣ್ಣ ಹಿಡುವಳಿದಾರರಿಗೆ ಅನುಕೂಲವಾಗಿ ಅವರು ನಾಲ್ಕೈದು ಕ್ವಿಂಟಾಲ್ ಬತ್ತವನ್ನು ತೆಗೆದುಕೊಂಡು ಹೋಗುವುದಕ್ಕೆ ಸಹಾಯವಾಗುತ್ತದೆ. ಇದನ್ನು ಸರ್ಕಾರ ಪರಿಶೀಲನೆ ಮಾಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಸಭಾಪತಿಯವರೇ, ನಮ್ಮ ಮುಂದೆ ಮಂಡಿಸಿರತಕ್ಕ 1965-66ನೇ ಆಯುವ್ಯಯದ ಅಂದಾಜನ್ನು ನಾನು ಸ್ವಾಗತಿಸುತ್ತೇನೆ. ಒಂದು ಸಂತೋಷದ ಸಂಗತಿ ಏನೆಂದರೆ, ನಾಲ್ಕು ಕೋಟಿ ರೂಪಾಯಿಗಳು ನಮಗೆ ಖೋತಾ ಆದರೂ ಸರ್ಕಾರದವರು ಸದ್ಯಕ್ಕೆ ಬೇರೆ ಯಾವ ತೆರಿಗೆಯನ್ನೂ ಹಾಕುವುದಿಲ್ಲವೆಂಬುದಾಗಿ ಹಣಕಾಸಿನ ಸಚಿವರು ಹೇಳಿರುವುದು ತುಂಬಾ ಸಂತೋಷವಾಗಿದೆ. ನಿನ್ನೆ ದಿವಸ ಮಾತನಾಡಿದಂಥ ಶ್ರೀಮಾನ್ ಎಂ. ಆರ್ ಪಾಟೀಲ್ ಅವರು ಆಹಾರ ಧಾನ್ಯಗಳ ವಿಚಾರದಲ್ಲಿ ಬಹಳ ಒಳ್ಳೆಯ ಸಲಹೆಗಳನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ನಾನಾದರೂ ಹೇಳುತ್ತೇನೆ ಸುಮಾರು 18 ವರ್ಷಗಳ ಕಾಲದಿಂದಲೂ ಈಗಿರತಕ್ಕ ಆಹಾರ ಅಭಾವವನ್ನು ಪೂರೈಸಬೇಕು ಎನ್ನುವ ದೃಷ್ಟಿಯಿಂದ ರಾಜ್ಯ ಸರ್ಕಾರವೇ ಆಗಲಿ ಕೇಂದ್ರ ಸರ್ಕಾರವೇ ಆಗಿರಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಹೆಚ್ಚು ಆಹಾರವನ್ನು ಬೆಳೆಯಬೇಕು, ಕೆರೆಕಟ್ಟೆಗಳನ್ನು ಕಟ್ಟಬೇಕು ರೈತರಿಗೆ ಸಾಕಷ್ಟು ಇರ್ರಿಗೇಷನ್ ಪಂಪುಸೆಟ್ಟುಗಳನ್ನು ಸಕಾಲಕ್ಕೆ

ದೊರಕಿಸಿಕೊಡಬೇಕು, ದೊಡ್ಡ ದೊಡ್ಡ ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಿ ನೀರನ್ನು ಯಥೇಚ್ಛವಾಗಿ ಕೊಡಬೇಕು. ಇವೆಲ್ಲ ಸೌಕರ್ಯಗಳನ್ನು ಕೊಡುವುದರ ಮೂಲಕ ದೇಶದಲ್ಲಿ ಈಗಿನ ಆಹಾರಾಭಾವ ವನ್ನು ತಪ್ಪಿಸಬೇಕೆಂದು ಸರ್ಕಾರದವರು ಬೇಕಾದಷ್ಟು ಹಣವನ್ನು ಏನು ಖರ್ಚು ಮಾಡುತ್ತಾರೋ ಇದು ಬರೀ ಖರ್ಚಿನಲ್ಲಿಯೇ ಕಾಲ ಕಳೆಯುತ್ತಿದ್ದಾರೆಯೇ ಹೊರ್ತು ಅದರ ಪ್ರತಿಫಲ ಜನತೆಗೆ ಆಗುತ್ತಿಲ್ಲ. ಏಕೆ ಈ ರೀತಿಯಾಗಿದೆ ಏನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಇದನ್ನು ಬರೀ ಏನೋ ಒಂದು ದೃಷ್ಟಿಯಿಂದ ಸದಸ್ಯರು ಮಾತನಾಡುತ್ತಾರೆಂಬ ಪ್ರಶ್ನೆಯಲ್ಲ. ಎಲ್ಲಿ ಲೋಪದೋಷಗಳಿವೆ, ಏತಕ್ಕಾಗಿ ಈ ರೀತಿಯಾಗುತ್ತಿದೆ ಎನ್ನುವುದನ್ನು ಪುನರ್ಪರಿಶೀಲನೆ ಮಾಡಬೇಕಾಗುತ್ತದೆ. ಈಗ ಎಷ್ಟೋ ಹಣವನ್ನು ಖರ್ಚು ಮಾಡಿದರೂ ಕೂಡ ರೈತರಿಗೆ ಅದರ ಉಪಯೋಗ ಮುಟ್ಟುತ್ತಾ ಇಲ್ಲ. ಬರೀ ಸಿಬ್ಬಂದಿ ವರ್ಗಕ್ಕೆ, ಕೆಲಸಕ್ಕೆ ಬಾರದೇ ಇರತಕ್ಕ ಇಲಾಖೆಗಳಿಗೆ ಎಷ್ಟೋ ಹಣವನ್ನು ಖರ್ಚು ಮಾಡುತ್ತಿದ್ದಾರೆ. ನಿಜವಾಗಿ ರೈತರಿಗೆ ಅದರ ಉಪಯೋಗ ಸಿಗುತ್ತಾ ಇಲ್ಲ. ಇವತ್ತು ವ್ಯವಸಾಯ ಇಲಾಖೆ ಇದೆ. ಇದು ನಿದ್ದೆ ಮಾಡುತ್ತಾ ಇದೆ. ಅನೇಕ ಕಡೆಗಳಲ್ಲಿ ಫಾರಂಗಳಿವೆ. ರೈತ ಒಂದು ಒಳ್ಳೆಯ ಬೀಜವನ್ನು ಬೆಳೆಯಬೇಕು ಒಳ್ಳೆಯ ಬೀಜ, ತಳಿಗಳನ್ನು ತರಬೇಕೆಂದು ಫಾರಂಗಳಿಗೆ ಹೋದರೆ ಅಲ್ಲಿ ಬೀಜಗಳು ಒಳ್ಳೆಯದು ಸಿಗುವುದಿಲ್ಲ. ಇವರು ಯಾವ ತಳಿಗಳನ್ನು ಬೆಳೆಸುತ್ತಾರೋ, ಸಿಬ್ಬಂದಿ ಕೆಲಸವೇನು ಮಾಡುತ್ತಾರೋ ಅದು ದೇವರಿಗೇ ಗೊತ್ತು. ಈ ಖಾತೆ ಹೊಂದಿರತಕ್ಕ ಸಚಿವರಿಗೇ ಗೊತ್ತು. ಒಟ್ಟಿನಲ್ಲಿ ಅದರ ಪ್ರಯೋಜನ ರೈತರಿಗೆ ನಿಜವಾಗಿ ಮುಟ್ಟುತ್ತಾ ಇಲ್ಲ ಸುಮ್ಮನೆ ವೃಥಾ ಖರ್ಚಿನಲ್ಲಿಯೇ ಕಾಲ ಕಳೆಯುತ್ತಿದ್ದಾರೆ. ಇನ್ನು ಮತ್ತೆ ಪುನಃ ಕಂದಾಯದ ಹೊರೆಯನ್ನು ರೈತರ ಮೇಲೆ ಹಾಕಬೇಕೆಂಬ ದೃಷ್ಟಿಯಲ್ಲಿ ಇವರು ಈಗ ಯೋಚನೆ ಮಾಡುತ್ತಿದ್ದಾರೆ. ಶ್ರೀ ವರ್ಮಾ ಪಾಟೀಲವರು ನಾವು ಆಹಾರ ಧಾನ್ಯಗಳನ್ನು ಹೆಚ್ಚಿಗೆ ಬೆಳೆದು ತೃಪ್ತಿಕರವಾಗಿರಬೇಕಾ ದರೆ ಈ ರೀತಿಯಾದ ತೆರಿಗೆಗಳನ್ನು ರೈತರ ಮೇಲೆ ಹೇರುವುದನ್ನು ಬಿಡಬೇಕು, ಕಂದಾಯ ವಜಾ ಮಾಡಬೇಕು, 3-4 ಸಾವಿರ ರೂಪಾಯಿಗಳ ವರಮಾನ ಬರುವವರಿಗೆ ವರಮಾನ ತೆರಿಗೆ ಹಾಕ ಬೇಕೆಂಬುದಾಗಿ ಹೇಳಿದರು. ಅದು ಬಹಳ ಸೂಕ್ತವಾದುದೆಂಬುದಾಗಿ ನಾನು ಅಭಿಪ್ರಾಯ ಪಡು ತ್ತೇನೆ. ಕಂದಾಯ ಹಾಕುವುದನ್ನು ಕ್ಲೀನಾಗಿ ವಜಾ ಮಾಡತಕ್ಕದ್ದು ಸರಿಯೆಂಬುದಾಗಿ ನಾನು ಹೇಳುತ್ತೇನೆ. ಆಗಲಾದರೂ ರೈತನಾದವನು ಹಿಂದಿನಿಂದಲೂ ಹೇರಿಕೊಂಡು ಬಂದಂಥ ಕಂದಾಯ ವನ್ನು ಸರ್ಕಾರದವರು ಈಗ ತೆಗೆದಿದ್ದಾರೆ, ಇನ್ನು ಮುಂದಾದರೂ ವ್ಯವಸಾಯ ಚೆನ್ನಾಗಿ ಮಾಡಿ ಹೆಚ್ಚಿಗೆ ಸಂಪಾದನೆ ಮಾಡಿ ದೇಶಕ್ಕೆ ಯಥೇಚ್ಛವಾಗಿ ಅನ್ನವನ್ನು ಒದಗಿಸಬೇಕು ಎಂದು ಪ್ರಯತ್ನ ಮಾಡೋಣವೆಂದು ಹೇಳುವುದಕ್ಕೆ ಅನುಕೂಲವಾಗುತ್ತದೆ. ಆ ಒಂದು ಮನೋಭಾವನೆ ಅವನಲ್ಲಿ ಉಂಟಾಗುತ್ತದೆ ಎಂಬುದಾಗಿ ನಾನು ಹೇಳುತ್ತೇನೆ. ರೈತನಾದವನಿಗೆ ಈ ತೆರಿಗೆಗಳ ಹೊರೆಯಿಂದ ಬಹಳ ಬೇಜಾರಾಗಿದೆಯೋ ಏನೋ ಎಂದು ಹೇಳಬಹುದು. ಏಕೆಂದರೆ ಸರ್ಕಾರದವರು ನಾನಾ ತೆರಿಗೆಗಳನ್ನು ರೈತರ ಮೇಲೆ ಹಾಕುವುದರಲ್ಲಿ ಬೇರೆ ಬೇರೆ ಮಾರ್ಗಗಳನ್ನು ಹೂಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಅನೇಕ ಜನ ವಿದ್ಯಾವಂತರು ವ್ಯವಸಾಯಕ್ಕೆ ಹೋಗದೆ ಬೇರೆ ಬೇರೆ ಸರ್ಕಾರೀ ಉದ್ಯಮಗಳಿಗೆ ಹೋಗುತ್ತಿದ್ದಾರೆ. ಸಾಮಾನ್ಯ ತಿಳುವಳಿಕೆ ಇರುವವರು ಮಾತ್ರ ವ್ಯವ ಸಾಯ ಕಸುಬಿನಲ್ಲಿಯೇ ಇದ್ದಾರೆ. ನಿಜವಾಗಿ ವ್ಯವಸಾಯ ಮುಂದುವರಿಯಬೇಕಾದರೆ ಸ್ವಲ್ಪ ಮಟ್ಟಿಗಾದರೂ ವಿದ್ಯಾವಂತರಾಗಿರಬೇಕಾದುದು ಸಹಜ. ಹೊಸ ಹೊಸ ವಿಧಾನಗಳನ್ನು ಕಂಡು ಹಿಡಿದು ವ್ಯವಸಾಯ ಅಭಿವೃದ್ಧಿಗೆ ಸರ್ಕಾರ ಪ್ರಯತ್ನ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಕಾರುಗಳ ವಿಚಾರ ಹೇಳಿದರು. ಕಾರುಗಳಿಗೆ ಏಕೆ 500 ರೂಪಾಯಿಗಳವರೆಗೆ ತೆರಿಗೆ ಹಾಕಬಾರದು. ದೇಶದಲ್ಲಿ ಸುಮಾರು 10-12 ಸಾವಿರ ವಕೀಲರುಗಳಿರಬಹುದು. ಕೆಲಸಕ್ಕೆ ಬಾರದೇ ಇರುವವರು ವಕೀಲ ವೃತ್ತಿಗೆ ಹೋಗುತ್ತಿದ್ದಾರೆಂದು ನಾನು ಹೇಳುತ್ತೇನೆ. ವಕೀಲರಾದ ವರ ಮೇಲೆ ವರ್ಷಕ್ಕೆ ಐದು ಸಾವಿರ ರೂಪಾಯಿಗಳವರೆಗೂ ತೆರಿಗೆ ಕೊಡುವ ಹಾಗೆ ಮಾಡುವುದು ಒಳ್ಳೆಯದು. ಗ್ರಾಮಗಳಲ್ಲಿ ವಿದ್ಯಾವಂತರಾಗಿರುವವರು ತಕ್ಷಣ ಪಟ್ಟಣಗಳಲ್ಲಿ ಬಂದು ಸೇರಿ ಕೆಲಸ ಮಾಡುತ್ತಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಇದರಿಂದ ಕಕ್ಷಿಗಾರರಿಗೆ ತೊಂದರೆಯಾಗುತ್ತದೆ. ಅವರು ಲಾಯರು ಗಳಿಗೆ ಇನ್ನಷ್ಟು ಹಣ ಕೊಡಬೇಕಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಾಗಾದರೆ ಈ ಮಂತ್ರಿ ಪದವಿಯಾದ ಮೇಲೆ ರಾಜಕೀಯ ಬಿಡುತ್ತೀರಾ ?

ಶ್ರೀ ಟಿ. ಡಿ. ದೇವೇಂದ್ರಪ್ಪ.—ವಕೀಲವೃತ್ತಿ ಮಾಡುವವರಿಗೆ ಐದುಸಾವಿರ ರೂಪಾಯಿಗಳ ತೆರಿಗೆಯನ್ನು ಹಾಕುವುದಕ್ಕೆ ಯಾವ್ಯಾವ ರೀತಿಯಲ್ಲಿ ಸಾಧ್ಯವಿದೆ ಯೆಂಬುದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು. ಏಕೆಂದರೆ ಬಡವನ ಮೇಲೆ ತೆರಿಗೆಹಾಕಿ ಸರ್ಕಾರ ನಡೆಸುವುದು ಸರಿಯಲ್ಲ. ಆಮೇಲೆ ಅರ್ಬನ್ ಪ್ರಾಪರ್ಟಿ ಮೇಲೆ ತೆರಿಗೆಯನ್ನು ಹಾಕಬೇಕು. ಈಗಲೇ ಅದರ ಬಗ್ಗೆ ವಿಚಾರ

(ಶ್ರೀ ಟಿ. ಡಿ. ದೇವೇಂದ್ರಪ್ಪ)

ಮಾಡಬೇಕು. ಮಾನ್ಯಸದಸ್ಯರನೇಕರು ಈ ವಿಚಾರದಲ್ಲಿ ಸೂಕ್ತವಾದ ಸಲಹೆಗಳನ್ನು ಹೇಳಿದ್ದಾರೆ. ಭದ್ರಾ ಜಲಾಶಯದಲ್ಲಿ ಸುಮಾರು 2½ ಲಕ್ಷ ಎಕರೆಗಳಷ್ಟು ಆಹಾರ ಧಾನ್ಯಗಳನ್ನು ಬೆಳೆಸುವ ಭೂಮಿ ಇರಬೇಕು. ಪ್ಯಾಕೇಜ್ ಪ್ರೋಗ್ರಾಂ ಕಡೆಗಳಲ್ಲಿ ಹೆಚ್ಚಿಗೆ ವ್ಯವಸಾಯ ಮಾಡುವ ಬಗ್ಗೆ ಸರ್ಕಾರ ಹೆಚ್ಚು ಗಮನಕೊಡಬೇಕು. ಭದ್ರಾ ಜಲಾಶಯದ ಹತ್ತಿರ ಒಂದು ಪ್ಯಾಕೇಜ್ ಪ್ರೋಗ್ರಾಂನ್ನು ವ್ಯವಸಾಯ ಮಂತ್ರಿಗಳು ಮಾಡಿಸಿಕೊಡುವುದಕ್ಕೆ ತಕ್ಕ ಅವಕಾಶವನ್ನು ಕಲ್ಪಿಸಿಕೊಡಬೇಕು. ವ್ಯವಸಾಯ ಖಾತೆ ಬಹಳ ಜವಾಬ್ದಾರಿಯನ್ನು ಹೊತ್ತಿರತಕ್ಕ ಖಾತೆ, ಬಹಳ ಶ್ರೇಷ್ಠವಾದ ಖಾತೆ. ಪ್ರತಿಯೊಬ್ಬನಿಗೂ ಅನ್ನ ಒದಗಿಸುವ ಕಾರ್ಯವನ್ನು ಸರ್ಕಾರದವರು ದಿಟ್ಟತನದಿಂದ ಮಾಡಬೇಕು.

ಇನ್ನು ತುಂಗಭದ್ರಾದಲ್ಲಿ ಸಕ್ಕರೆ ಕಾರ್ಖಾನೆ ಇದೆ. ಅಲ್ಲಿ ಲಾರಿಗಳ ಮೇಲೆ ಬೇಕಾದಷ್ಟು ಕಬ್ಬು ನಿಂತಿದೆ, ಅದನ್ನು ಅರೆಯುತ್ತಾ ಇಲ್ಲವೆಂದು ಕೈಗಾರಿಕೆಯ ಮಂತ್ರಿಗಳು ಹೇಳಿದರು. ಅಲ್ಲದೆ ಕಬ್ಬು ಸಾಕಷ್ಟು ಬರುತ್ತಾ ಇಲ್ಲವೆಂದು ಉತ್ತರ ಕೊಟ್ಟರು. ಇವರು ಅಧಿಕಾರಿಗಳಿಂದ ಬಂದ ಕಾಗದದ ಮೇಲೆ ಉತ್ತರ ಕೊಡುವುದನ್ನು ಅಭ್ಯಾಸ ಮಾಡಿದ್ದಾರೆ. ಒಬ್ಬ ಶಾಸನ ಸಭಾ ಸದಸ್ಯರು ಜವಾಬ್ದಾರಿಯಿಂದ ಪ್ರಸ್ತಾಪ ಮಾಡುವಾಗ ಆ ವಿಚಾರವನ್ನು ನೋಡೋಣ, ವಿಚಾರ ಮಾಡೋಣವೆಂದು ಹೇಳುವುದರಲ್ಲಿ ಈವರ ಮನಸ್ಸು ಹೋಗುತ್ತಾ ಇಲ್ಲ. ಆ ದಿಶೆಯಿಂಥ ಉತ್ತರ ಕೊಡಬಾರದು ನಾನು ಆ ಮಾತನ್ನು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ಇವರು ವರ್ಷಗಳಿಗೊಂದು ಸಾರಿ ಕಬ್ಬು ಬೆಳೆಯನ್ನು ಅರೆಯುವುದಕ್ಕೆ ಕೊಡುವಾಗ ಅದನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವೇ ಇಲ್ಲ. ಈ ವರ್ಷ ಕಬ್ಬನ್ನು ಹಾಕಬೇಕೆಂದು ಒಪ್ಪಿಗೆ ತೆಗೆದುಕೊಳ್ಳುವುದಕ್ಕೆ ಹೋದರೆ ಕಬ್ಬು ಬೇಕಾಗುವುದಿಲ್ಲವೆಂದು ಹೇಳುತ್ತಾರೆ.

ಅದನ್ನು ತೆಗೆದುಕೊಳ್ಳಿ ಎಂದು ಹೇಳಿದರೆ, ಯಾವಾಗ ಬೇಕಾದರೂ ಕೊಡಿ, ಸಾಲ ಯಾವಾಗ ಬೇಕಾದರೂ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾರೆ. ಇದನ್ನು ಸ್ವಲ್ಪ ವಿಚಾರ ಮಾಡಬೇಕು. ಅಲ್ಲಿ ಇನ್ನೊಂದು ಫ್ಯಾಕ್ಟರಿ ಆಗತಕ್ಕ ಅವಕಾಶ ಇದೆ. ಅಲ್ಲಿ ಈಗ ಎರಡೂವರೆ ಲಕ್ಷ ಟನ್ ಕಬ್ಬು ಬೆಳೆಯುತ್ತಿದ್ದಾರೆ ಅದಕ್ಕೆ ತೊಂದರೆಯಾಗದ ಹಾಗೆ ಅಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸುವ ವಿಷಯದಲ್ಲಿ ಸರ್ಕಾರದವರು ಪರಿಶೀಲನೆ ಮಾಡಬೇಕು. ಇಲ್ಲದಿದ್ದರೆ ಆ ಪ್ರದೇಶದ ರೈತರಿಗೆ ಕಾಂಟ್ರಿಬ್ಯೂಷನ್, ವಾಟರ್ ರೇಟ್ ಕಂದಾಯ ಇವುಗಳನ್ನು ಸರ್ಕಾರ ಹಾಕಿರುವುದನ್ನು ಕೊಡುವುದಕ್ಕಾಗುವುದಿಲ್ಲ. ಅಲ್ಲಿ ಜಮೀನು ಇಟ್ಟುಕೊಂಡಿರುವವರಿಗೂ ತೊಂದರೆಯಾಗುತ್ತದೆ ಮತ್ತು ಸರ್ಕಾರದವರು ಹಾಕಿರತಕ್ಕ ಕಂದಾಯ, ಕಾಂಟ್ರಿಬ್ಯೂಷನ್ ಇವುಗಳನ್ನು ವಸೂಲು ಮಾಡುವುದಕ್ಕೂ ತೊಂದರೆಯಾಗುತ್ತದೆ, ಇದಕ್ಕೆ ಅವಕಾಶ ಕೊಡದಹಾಗೆ ಅಲ್ಲಿ ಇನ್ನೊಂದು ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ.

2-30 P.M.

ಇನ್ನು ವಸತಿ ಸೌಕರ್ಯದ ವಿಚಾರವಾಗಿ ಮಾನ್ಯ ಹಣಕಾಸಿನ ಸಚಿವರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಹೌಸಿಂಗ್ ಬೋರ್ಡನ್ನು ಪಟ್ಟಣಗಳಲ್ಲಿ ವಸತಿ ಸೌಕರ್ಯವನ್ನು ಒದಗಿಸುವುದಕ್ಕೋಸ್ಕರ ಇಟ್ಟುಕೊಂಡಿದ್ದಾರೆ. ಹೌಸಿಂಗ್ ಕಾರ್ಪೋರೇಷನ್ ಅನ್ನು ನೆಪ ಮಾತ್ರಕ್ಕೆ ಇಟ್ಟುಕೊಂಡಿದ್ದಾರೆ. ಈಗ ಹೌಸಿಂಗ್ ಬೋರ್ಡಿನವರು ಪಟ್ಟಣಗಳಲ್ಲಿ ಮನೆಗಳನ್ನು ಕಟ್ಟಿಸುತ್ತಾರೆ. ಆ ಮೇಲೆ ಆ ಮನೆಗಳಿಗೆ ಒಂದು ರೇಟನ್ನು ಫಿಕ್ಸ್ ಮಾಡುತ್ತಾರೆ, ಅನಂತರ ಆ ಮನೆಗಳನ್ನು ಜನಗಳಿಗೆ ಅಲಾಟ್ ಮಾಡುತ್ತಾರೆ. ಅವರು ಅದನ್ನು ಮಾಡಲಿ, ಅವರು ಅದನ್ನು ಮಾಡುವುದು ಬೇಡ ಎಂದು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಹೌಸಿಂಗ್ ಕಾರ್ಪೋರೇಷನನ್ನು ಹೌಸಿಂಗ್ ಬೋರ್ಡಿಗೆ ಸೇರಿಸಿ ಅನುಕೂಲತೆಯನ್ನು ಎಲ್ಲಾ ಗ್ರಾಮಾಂತರ ಪ್ರದೇಶಗಳಿಗೂ ಏತಕ್ಕೆ ಒದಗಿಸಬಾರದು ಎಂದು ನಾನು ಪ್ರಸ್ತಾಪ ಮಾಡುತ್ತೇನೆ. ಹಳ್ಳಿಗಾಡುಗಳಲ್ಲಿ ಶಾಲೆಯ ಉಪಾಧ್ಯಾಯರುಗಳಿಗೆ ಮನೆಗಳಿರುವುದಿಲ್ಲ, ಅಲ್ಲಿಗೆ ಬರತಕ್ಕ ಕೆಲವು ಅಧಿಕಾರಿಗಳಿಗೆ ಮನೆ ಇರುವುದಿಲ್ಲ, ವ್ಯವಸಾಯಗಾರರಿಗೆ ಮನೆಗಳಿರುವುದಿಲ್ಲ. ಇದರಿಂದ ಅವರಿಗೆ ಬಹಳ ತೊಂದರೆಯಾಗುತ್ತಿದೆ. ಈ ಒಂದು ತೊಂದರೆಯನ್ನು ತಪ್ಪಿಸಿ ಅವರಿಗೆ ಅನುಕೂಲ ಮಾಡುವುದಕ್ಕೋಸ್ಕರ ಗ್ರಾಮಾಂತರ ಪ್ರದೇಶಗಳಲ್ಲಿ ಜಿಂಕ್ ಷೀಟುಗಳನ್ನು ಹಾಕಿ ಸಣ್ಣ ಸಣ್ಣ ಮನೆಗಳನ್ನು ಕಟ್ಟಿಸಿ ಒಂದು ಸಣ್ಣ ಕಾಲೋನಿಯ ಹಾಗೆ ಮಾಡಿದರೂ ಕೂಡ ಅದರಿಂದ ಅವರಿಗೆ ಅನುಕೂಲವಾಗುತ್ತದೆ. ಇಂಥಾ ಒಂದು ಯೋಜನೆಯನ್ನು ಸರ್ಕಾರದವರು ಮಾಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಸ್ವಾಮಿ, ಶ್ರೀಮಾನ್ ದೇವೇಂದ್ರಪ್ಪನವರು ಭದ್ರಾಜಲಾಶಯದ ಹತ್ತಿರ ಇನ್ನೊಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕು, ಅಲ್ಲಿ ಅದಕ್ಕೆ ಬೇಕಾಗುವಷ್ಟು ಕಬ್ಬು ಬೆಳೆಯುತ್ತಿದ್ದಾರೆ ಎಂದು ಕೇಳಿದ್ದಕ್ಕೆ ಮಂತ್ರಿಗಳು ಅಲ್ಲಿ ಒಂದು ಫ್ಯಾಕ್ಟರಿಗೆ ಸಾಕಾಗುವಷ್ಟು ಕಬ್ಬು ಇಲ್ಲ, ಅಲ್ಲಿ ಒಂದು ಫ್ಯಾಕ್ಟರಿ ಬೇಕಾಗಿಲ್ಲ ಎಂದು ಹೇಳಿದರು, ಮತ್ತು ಮಂತ್ರಿಗಳು ಪ್ರಶ್ನೆ ಗಳಿಗೆ ಸುಳ್ಳು ಉತ್ತರವನ್ನು ಹೇಳುತ್ತಾರೆ ಎಂದು ಹೇಳಿದರು. ಆ ರೀತಿ ಅವರು ಸುಳ್ಳು ಉತ್ತರ ವನ್ನು ಹೇಳುವುದಕ್ಕೆ ಅವಕಾಶ ಇದೆಯೇ? ಸುಳ್ಳು ಉತ್ತರವನ್ನು ಕೊಟ್ಟ ಅಧಿಕಾರಿಗಳ ಮೇಲೆ, ಮಂತ್ರಿಗಳ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಸುಳ್ಳು ಪ್ರಶ್ನೆಯನ್ನು ಕೇಳತಕ್ಕ ಸದಸ್ಯರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ?

Mr. SPEAKER.—Ruling adjourned *sine die*. (laughter)

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಪತಿಯವರೇ, ಈಗ ನಮ್ಮ ಮುಂದಿರತಕ್ಕ 1965-66ನೇ ಸಾಲಿನ ಆಯವ್ಯಯ ಅಂದಾಜುಪಟ್ಟಿಯ ಮೇಲೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ಈ ವಿಷಯದಲ್ಲಿ ಕೆಲವು ವಿಚಾರ ಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ನಿನ್ನೆಯ ದಿವಸ ನಮ್ಮ ಮಾನ್ಯ ಸ್ನೇಹಿತರಾದಂಥ ಶ್ರೀಮಾನ್ ಎಂ. ಆರ್. ಪಾಟೀಲ್ ಅವರು ವ್ಯವಸಾಯ ಇಲಾಖೆ ಎಷ್ಟರಮಟ್ಟಿಗೆ ಕೆಲಸ ಮಾಡುತ್ತಿದೆ ಎನ್ನುವ ಬಗ್ಗೆ ಹಾಗೂ ಸರ್ಕಾರದವರು ರೈತರಿಗೆ ಎಷ್ಟು ಸೌಲಭ್ಯಗಳನ್ನು ಒದಗಿಸಿದ್ದಾರೆ ಎಂಬ ಬಗ್ಗೆ ಪೂರ್ಣವಾಗಿ ಚರ್ಚೆ ಮಾಡಿ ಪ್ರಸ್ತಾಪಮಾಡಿದ್ದಾರೆ. ಮತ್ತು ಶ್ರೀಮಾನ್ ದೇವೇಂದ್ರಪ್ಪನವರು 4 ಕೋಟಿ ರೂಪಾಯಿಗಳ ಖೋತಾ ಆಯವ್ಯಯ ಅಂದಾಜನ್ನು ತೆರಿಗೆ ಇಲ್ಲದ ರೀತಿಯಲ್ಲಿ ಇಟ್ಟಂತಹ ಶ್ರೀಮಾನ್ ಜತ್ತಿಯವರ ವಿಷಯದಲ್ಲಿ ಸಂತೋಷವನ್ನು ವ್ಯಕ್ತ ಪಡಿಸಿದರು. ಮಾನ್ಯ ಹಣಕಾಸಿನ ಸಚಿವರು ಬಾಯಲ್ಲಿ ಎಲೆಕ್ಟ್ರಿಸಿಟಿ, ನೀರಿನ ತೆರಿಗೆ, ಭೂಕಂದಾಯ ತೆರಿಗೆಯನ್ನು ಹಾಕುತ್ತೇವೆ ಎಂದು ಹೇಳಿದರೆ ಬಹುಶಃ ನಮಗೆ ಡೈರೆಕ್ಟಾಗಿ ತೆರಿಗೆಯನ್ನು ಹಾಕು ತ್ತಾರೆ ಎಂದು ಕಂಡುಬರುತ್ತದೆ. ಹಣಕಾಸಿನ ಸಚಿವರ ಭಾಷಣದ ಪುಟ 21 ರಲ್ಲಿ ಎಲೆಕ್ಟ್ರಿಸಿಟಿಯ ದರವನ್ನು ಏರಿಸಬೇಕೆಂದು ಹೇಳಿದ್ದಾರೆ. ಈ ದೇಶದಲ್ಲಿ ಸುಮಾರು ಒಂದು ಕೋಟಿ 60 ಲಕ್ಷ ಜನಗಳ ಮೇಲ್ಪಟ್ಟು ವ್ಯವಸಾಯವನ್ನು ಅವಲಂಬಿಸಿಕೊಂಡಿರತಕ್ಕ ಜನಗಳ ಮೇಲೆ ನೇರವಾಗಿ ಹೊರೆ ಬೀಳತಕ್ಕಂಥ ಎಲೆಕ್ಟ್ರಿಸಿಟಿಯ ದರವನ್ನು ಹೆಚ್ಚಿಸಬೇಕೆಂದಿದ್ದಾರೆ. ವಾಟರ್ ರೇಟನ್ನು ಹೆಚ್ಚಿಸತಕ್ಕದ್ದು, ಕಂದಾಯವನ್ನು ಹೆಚ್ಚಿಸತಕ್ಕದ್ದು ಮತ್ತು ಎಲೆಕ್ಟ್ರಿಸಿಟಿಯ ದರವನ್ನು ಹೆಚ್ಚಿಸತಕ್ಕದ್ದು ಈ ಮೂರು ಬಾಬುಗಳ ಮೇಲೆ ಹೆಚ್ಚಿನ ದರವನ್ನು ಹಾಕುತ್ತೇವೆಂದು ಸರ್ಕಾರ ದವರು ಘೋಷಣೆಯನ್ನು ಮಾಡಿದ್ದಾರೆ. ಪಟ್ಟಣದಲ್ಲಿ ವಾಸಮಾಡತಕ್ಕ ಜನಗಳ ದಾಕ್ಷಿಣ್ಯಕ್ಕೋಸ್ಕರ ಅವರ ಮೇಲೆ ಯಾವ ವಿಧವಾದ ತೆರಿಗೆಯನ್ನೂ ಹಾಕುವುದಕ್ಕೂ ಹಣ ಕಾಸಿನ ಸಚಿವರಿಗೆ ಶಕ್ತಿಯಿಲ್ಲವೆ ಮೂಕ ಪ್ರಾಣಿಗಳಾದ ವ್ಯವಸಾಯವನ್ನು ಅವಲಂಬಿಸಿರತಕ್ಕ ಜನ ತೆಯ ಮೇಲೆ ತೆರಿಗೆಯನ್ನು ಹೇರುತ್ತಿದ್ದಾರೆ ಎಂಬುದು ಎದ್ದು ಕಾಣುತ್ತದೆ. ಸರ್ಕಾರ ಬಹುಶಃ ಪಟ್ಟಣದ ಜನತೆಯ ಒಂದು ಹಿಂಬದಿಯಲ್ಲಿದ್ದಾರೆ ಎಂದು ಅರ್ಥವಾಗುತ್ತದೆ. ಮಾನ್ಯ ಹಣಕಾಸಿನ ಸಚಿವರು ಬಹಳ ಜಾಣ್ಮೆಯಿಂದ 3 ಕೋಟಿ 91 ಲಕ್ಷ ರೂಪಾಯಿಗಳ ಖೋತಾ ಬಡ್ಜೆಟ್ಟನ್ನು ಈ ಸಭೆಯ ಮುಂದಿಟ್ಟಿದ್ದಾರೆ. ತಪ್ಪು ಅಂಕಿ ಅಂಶಗಳನ್ನು ಹಾಕಿ, ವಂಚಿಸಿ ಈ ಸಭೆಯಲ್ಲಿ ಬಡ್ಜೆಟ್ಟಿಗೆ ನಮ್ಮ ಅಂಗೀಕಾರವನ್ನು ಪಡೆಯುವುದು ಸರಿಯಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ ಈ ವರ್ಷದ ಬಡ್ಜೆಟ್ಟಿನಲ್ಲಿ ಅನೇಕ ಸ್ಪಿಲ್‌ಓವರ್ ಕೆಲಸಗಳನ್ನು ಸೇರಿಸಿಲ್ಲ. ಈಗ ಕೆಲವು ಮೀಡಿಯಂ ಪ್ರಾಜೆಕ್ಟ್‌ಗಳು ಕಾರ್ಯಗತವಾಗುತ್ತವೆ. ಆ ಕೆಲವು ಯೋಜನೆಗಳಿಗೆ ಬೇಕಾದ ಹಣವನ್ನು ಆಯ ವ್ಯಯ ಅಂದಾಜು ಪಟ್ಟಿಯಲ್ಲಿ ಒದಗಿಸಿದ್ದಾರೆಯೇ ಎಂಬುದನ್ನು ಸರ್ಕಾರದವರು ವಿಶದವಾಗಿ ತಿಳಿ ಸುವುದಕ್ಕೆ ಪ್ರಯತ್ನ ಮಾಡಬೇಕು. ಒಂದು ಲಕ್ಷ ರೂಪಾಯಿಗಳ ಒಳಗೆ ಇರತಕ್ಕ ಯೋಜನೆಗಳಿಗೆ ಇದರಲ್ಲಿ ಒಂದು ಅವಕಾಶವನ್ನು ಕಲ್ಪನೆ ಮಾಡಿಕೊಂಡಿದ್ದಾರೆ. ಸ್ಪಿಲ್ ಓವರ್ ಕೆಲಸಗಳಿಗೆ ಒಂದು ಲಕ್ಷ ರೂಪಾಯಿಗಳ ಮೇಲ್ಪಟ್ಟ ಮೀಡಿಯಂ ಪ್ರಾಜೆಕ್ಟ್‌ಗಳಿಗೆ ಹಣವನ್ನು ಒದಗಿಸುವುದನ್ನು ಕೈ ಬಿಟ್ಟಿದ್ದಾರೆ. ಇವುಗಳಿಗೆ ಯಾವ ಒಂದು ಪ್ರಾವಿಜನ್ ಮಾಡಿಕೊಂಡಿದ್ದಾರೆ ಎಂಬುದನ್ನು ಸರ್ಕಾರ ದವರು ತಿಳಿಸಬೇಕು. ಕೇವಲ 3 ಕೋಟಿ 90 ಲಕ್ಷ ರೂಪಾಯಿಗಳ ಖೋತಾ ಬಡ್ಜೆಟ್ಟನ್ನು ಇಟ್ಟಿ ದ್ದಾರೆ. ಮೈನರ್ ಮತ್ತು ಮೀಡಿಯಂ ಯೋಜನೆಗಳಿಗೆ ಈ ಬಡ್ಜೆಟ್ಟಿನಲ್ಲಿ ಹಣವನ್ನು ಒದಗಿಸಿದ್ದರೆ ಸುಮಾರು 10 ಕೋಟಿ ರೂಪಾಯಿಗಳ ಖೋತಾ ಬಡ್ಜೆಟ್ ಆಗುತ್ತಿತ್ತು ಎಂದು ನಾನು ಹೇಳಬಯಸು ತ್ತೇನೆ.

ಇನ್ನು ಈಗಾಗಲೇ ಸರ್ವೆ ಸೆಟ್ಲ್‌ಮೆಂಟ್ ಬಗ್ಗೆ ಒಂದು ನಿರ್ಣಯವನ್ನು ಮಾನ್ಯ ಕಂದಾಯ ಮಂತ್ರಿಗಳು ಈ ಸಭೆಯ ಮುಂದಿಟ್ಟಿದ್ದಾರೆ. ಅದನ್ನು ಅವರು ಈ ಸಭೆಯ ಮುಂದೆ ಮಂಡಿಸುವಾಗ

(ಶ್ರೀ ಎಚ್. ಡಿ. ದೇವೇಗೌಡ)

ಹೇಳಿದರು ನಾವು ರೈತರಿಂದ ಕಂದಾಯವನ್ನೇನು ವಸೂಲು ಮಾಡುತ್ತೇವೆಯೋ ಅದನ್ನು ಮತ್ತೆ ರೈತನಿಗೇ ವಾಪಸ್ಸು ಕೊಡುತ್ತೇವೆ ಎಂದು. ಅದನ್ನು ನಾನು ಸ್ವಲ್ಪ ಸೂಕ್ಷ್ಮವಾಗಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಸುತ್ತೇನೆ. ಸರ್ಕಾರದವರು ರೈತನಿಗೆ ಕೊಡತಕ್ಕ ಸೌಲಭ್ಯ ಏನು ಎಂದು ನಾನದರೂ ಅವರನ್ನು ಕೇಳುತ್ತೇನೆ. ಈಗ ಅಧಿಕಾರದಲ್ಲಿರತಕ್ಕ ಅನೇಕ ಜನ ಮಂತ್ರಿಗಳು ರೈತ ಕುಟುಂಬದಲ್ಲಿ ಹುಟ್ಟಿಬಂದಿದ್ದರೂ ಕೂಡ ಅವರು ಅಧಿಕಾರಕ್ಕೆ ಬಂದಮೇಲೆ ಹಳ್ಳಿಯಲ್ಲಿರತಕ್ಕ ರೈತನ ಪರಿಸ್ಥಿತಿ ಏನು ಎಂಬುದನ್ನು ಮರೆತಿರುವಂತೆ ಕಾಣುತ್ತದೆ. ಇವೊತ್ತಿನದಿವಸ ಯಾವುದಾದರೂ ಒಂದು ಊರಿಗೆ ಒಂದು ಆಸ್ಪತ್ರೆಯನ್ನು ಕೊಡಬೇಕಾದರೆ 12½ ಸಾವಿರ ರೂಪಾಯಿಗಳನ್ನು ಸರ್ಕಾರಕ್ಕೆ ಕೊಡಬೇಕು. ಯಾವುದಾದರೂ ಒಂದು ಊರಿಗೆ ಹೈಸ್ಕೂಲು ಕೊಡಿ ಎಂದು ಕೇಳಿದರೆ 3 ವರ್ಷಗಳು ಸರ್ಕಾರದಿಂದ ಯಾವ ಸಹಾಯವನ್ನೂ ಮಾಡುವುದಿಲ್ಲ ಎಂದು ಹೇಳುತ್ತೀರಿ, ಹೀಗಿರುವಾಗ ಸರ್ಕಾರ ದವರು ರೈತರಿಗೆ ಯಾವ ಸೌಲಭ್ಯವನ್ನು ಕೊಡುತ್ತಿದ್ದೀರಿ ಎಂಬುದನ್ನು ವಿಶದವಾಗಿ ಹೇಳಬೇಕು. ಯಾವುದೋ ಒಂದೆರಡು ಕೆರೆಗಳಿಗೆ ಹಣವನ್ನು ಕೊಟ್ಟರೆ, ಮಂತ್ರಿಗಳು ಓಡಾಡತಕ್ಕ ಯಾವುದೋ ಒಂದೆರಡು ರಸ್ತೆಗಳಿಗೆ ಆಸ್ಫಾಲ್ಟ್ ಹಾಕಿದರೆ ಅದನ್ನೇ ಒಂದು ಉದಾಹರಣೆಯಾಗಿಟ್ಟುಕೊಂಡು ಹೇಳತಕ್ಕದ್ದು ಸರಿಯಿಲ್ಲ. ನಿಜವಾಗಿ ಸರ್ಕಾರದವರು ರೈತರಿಗೆ ಯಾವ ಯಾವ ಸೌಲಭ್ಯಗಳನ್ನು ಒದಗಿಸಿದ್ದೀರಿ ಎಂಬುದನ್ನು ಹೇಳಬೇಕು. ಮಾನ್ಯ ನಿಜಲಿಂಗಪ್ಪನವರು ಇದೇ ಸಭೆ ಯಲ್ಲಿ ಹೇಳಿದರು. ನೀರಾವರಿ ಪ್ರಾಜೆಕ್ಟು ಮಾಡಬೇಕೆಂದು ಹೇಳಿದರೆ, ರೈತ ಅಡ್ವಾನ್ಸ್ ಕೊಡುವುದಾದರೆ ಮಾತ್ರ ಸಾಧ್ಯ ಎಂದು ಪ್ರಾಯಶಃ ಹಣಕಾಸಿನ ಪರಿ ಸ್ಥಿತಿಯಿಂದ ಸರಕಾರ ಏನು ಕೆಲಸ ಮಾಡುತ್ತದೆನ್ನುವ ಭರವಸೆ ಇಲ್ಲ. ಸರ್ಕಾರಕ್ಕೆ ಹೆಚ್ಚಿಗೆ ಹಣದ ಸಹಾಯ ಬರದಿದ್ದರೆ ಯಾವ ಯೋಜನೆಯನ್ನೂ ತೆಗೆದುಕೊಳ್ಳುವುದು ಸಾಧ್ಯವಿಲ್ಲವೆಂದು ಜವಾಬ್ದಾರಿಯಿಂದ ಪ್ರಸ್ತಾಪ ಮಾಡಿದ್ದಾರೆ. ಜನತೆಗೆ ಅನುಕೂಲ ಮಾಡುವುದಕ್ಕೆ ಅವರ ಆರ್ಥಿಕ ಮಟ್ಟವನ್ನು ತಮ್ಮ ಯೋಜನೆಗಳ ಮುಖಾಂತರ ಹೆಚ್ಚಿಸಲು ಅವರಿಗೆ ಎಷ್ಟರಮಟ್ಟಿಗೆ ಹಣದ ಸೌಲಭ್ಯ ಒದಗಿಸುತ್ತೀರ ಎಂದು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಹಳ್ಳಿಯ ರೈತನ ಮಕ್ಕಳು ಕಾಲೇಜಿಗೆ ಹೋಗ ಬೇಕಾದರೆ ಅವನು ಸೀಟ್ ಪರ್ಚೇಸ್ ಮಾಡಬೇಕು. ಮೆರಿಟ್ ಮೇಲೆ ಪಡೆಯುವುದಕ್ಕೆ ಅವನ ಮಕ್ಕಳಿಗೆ ಸಾಧ್ಯವಿಲ್ಲ, ನಿಮ್ಮ ಮಕ್ಕಳಿಗೆ ಸಾಧ್ಯವಿರಬಹುದು. ಆದ್ದರಿಂದ ಹಳ್ಳಿಯ ಹುಡುಗರು ಮೆರಿಟ್ ಮೇಲೆ ಸೀಟುಗಳನ್ನು ಪಡೆಯಲು ಅಸಮರ್ಥರಾಗಿರುವುದರಿಂದ, ಟೆಕ್ನಿಕಲ್ ಕಾಲೇಜುಗಳಲ್ಲಿ ಅಥವ ಬೇರೆ ಅಂಥ ಯಾವ ತರಹ ಕಾಲೇಜುಗಳಲ್ಲಿ ಸೀಟು ಪಡೆಯಬೇಕಾದರೆ ಕೊಂಡುಕೊಳ್ಳಬೇಕಾಗಿದೆ. ವ್ಯಾಪಾರ ಮಾಡಬೇಕಾಗಿದೆ. ಇಂತಹುದರಲ್ಲಿ ನೀವು ಖಂಡಿತವಾಗಿಯೂ ಸೌಲಭ್ಯ ಒದಗಿಸುತ್ತೀರ ಅನ್ನುವುದು ಸುಳ್ಳು.

ಶ್ರೀ ಎಸ್. ಆರ್. ಕಂಠಿ (ವಿದ್ಯಾ ಶಾಖೆಯ ಮಂತ್ರಿಗಳು).—ಕೇಂದ್ರ ಸರ್ಕಾರ ಮತ್ತು ಇಲ್ಲಿನ ಎಕ್ಸ್‌ಪರ್ಟ್‌ಗಳು ಏನು ಹೇಳುತ್ತಾರೆಂದರೆ ಸೀಟು ಕೊಡಬೇಕಾದರೆ, ಮೆರಿಟ್ ಮೇಲೆಯೇ ಕೊಡ ಬೇಕೆಂದು. ಆದರೂ ರಿಜರ್ವೇಶನ್ ಇರಬೇಕೆಂದು ಹೇಳಿ ರಿಜರ್ವೇಶನ್ ಕೊಟ್ಟಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ತಮಗೆ ದುಡ್ಡಿನ ಒಂದು ತೊಂದರೆ ಇರತಕ್ಕಂಥ ಕಾಲದಲ್ಲಿ, ಯಾರು ವಿದ್ಯಾಸಂಸ್ಥೆಗಳನ್ನು ಹೊಸದಾಗಿ ಪ್ರಾರಂಭ ಮಾಡುತ್ತಾರೆಯೋ ಅವರಿಗೆ ಅನುಕೂಲವಾಗಲಿ ಅವರು ತಾಂತ್ರಿಕ ಸಂಸ್ಥೆಗಳನ್ನು ಮೆನೇಜ್ ಮಾಡಲು ಅವರಿಗೆ ಅವಕಾಶ ಕಲ್ಪನೆ ಮಾಡುವುದಕ್ಕೋ ಸ್ಕರ ಈ ಸೌಲಭ್ಯ ದೊರಕಿಸಿ ಕೊಡುತ್ತೀರಿ ಅಷ್ಟೆ, ರೈತನ ಮಕ್ಕಳಿಗೆ ಅನುಕೂಲವಾಗಲಿ ಎಂದು ಅಲ್ಲ.

ಶ್ರೀ ಎಸ್. ಆರ್. ಕಂಠಿ.—ಹಾಗೆಲ್ಲಾ ತಾವು ಹೇಳಲಾಗುವುದಿಲ್ಲ. ಮೆರಿಟ್ ಮೇಲೆ ಕೊಡ ಬೇಕೆಂದು ಮಾಡಿದರೆ ರೈತನ ಮಗನಿಗೆ ಸಿಗುವುದಿಲ್ಲ. ರಿಜರ್ವ್ ಮಾಡಲೇ ಕೂಡದು, ಮೆರಿಟ್ ಮೇಲೆ ಸೀಟು ಕೊಡಬೇಕೆಂದು ಮಾಡಿದರೆ ಏನು ಹೇಳುತ್ತೀರಿ.

ಶ್ರೀ ಎಚ್. ಡಿ. ದೇವೇಗೌಡ.—ಅದನ್ನು ಕೇಂದ್ರದಲ್ಲಿ ಪ್ರಸ್ತಾಪ ಮಾಡಿ, ಸೀಟು ಕೊಡುವ ಬಗ್ಗೆ ಸೂಕ್ತ ಯೋಚನೆ ಮಾಡತಕ್ಕಂಥ ವಿಷಯ ಕೇಂದ್ರದವರೂ, ಸ್ಟೇಟ್ ಗವರ್ನ್‌ಮೆಂಟಿನವರೂ ಪರಸ್ಪರ ಆಲೋಚನೆ ಮಾಡಿ ಪುನರ್ವಿಮರ್ಶಿಸಬೇಕು, ಮತ್ತು ನಮ್ಮ ಸರ್ಕಾರದವರು ಕೇಂದ್ರದ ಮೇಲೆ ಆ ನಿರ್ಧಾರವನ್ನು ಪರಿಷ್ಕರಿಸಿ ಕೊಳ್ಳುವಂತೆ ಹೆಚ್ಚು ಒತ್ತಡ ಹಾಕಬೇಕು ಎಂದು ತಿಳಿಸಬೇಕು. ಇದ ಕ್ಕಿಂತ ಹೆಚ್ಚಿಗೆ ಸಲಹೆಯನ್ನ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಆರ್. ಕಂಠಿ.—ಮೈಸೂರು ಸರ್ಕಾರದವರು ಈ ವಿಷಯವಾಗಿ ಸ್ಪಷ್ಟವಾಗಿ ಹೇಳಿ ದ್ದಾರೆ. ಸುಪ್ರೀಂ ಕೋರ್ಟಿನಲ್ಲಿ ಯಾವುದೇ ಸೂಚನೆ ಕೊಟ್ಟರೂ ಸ್ಟೇಟ್ ಸರ್ಕಾರಕ್ಕೆ ಮೆರಿಟ್ ಮೇಲೆ ಸೀಟು ಕೊಡುವುದಕ್ಕಾಗುವುದಿಲ್ಲ, ರಿಜರ್ವೇಶನ್ ಮಾಡುತ್ತೇವೆಂದು ಹೇಳಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಹೀಗೆ ಅನೇಕ ರೀತಿಯಲ್ಲಿ ನೀವು ರೈತನ ಮೇಲೆ ಕರ ಭಾರವನ್ನು ಹಾಕಿದ್ದೀರಿ. ಯಾವ ಸೌಲಭ್ಯ ಅವನಿಗೆ ಒದಗಿಸಬೇಕಾದರೂ ದುಡ್ಡು ಕೇಳುತ್ತೀರ. ಎನ್.ಇ.ಎಸ್. ಮಾಡತಕ್ಕಂಥ ಕಾಲದಲ್ಲಿ ಕುಡಿಯುವ ನೀರಿನ ಬಾವಿಗೆ ವಿಲೇಜ್ ಕಮ್ಯೂನಿಕೇಶನಿಗೆ ಇಷ್ಟು ಪರ್ಸೆಂಟ್ ಅವನು ಕೊಡಬೇಕೆಂದು ನಿಗದಿ ಹಾಕಿದ್ದೀರಿ. ಪ್ರತಿಯೊಂದು ಹಂತದಲ್ಲಿಯೂ ರೈತನು ಪಡೆಯತಕ್ಕಂಥ ಸೌಕರ್ಯಕ್ಕೆ ಹಣ ಕೊಡಬೇಕು ಸರ್ಕಾರ ಅವನಿಗೆ ಪುಕ್ಕಟೆಯಾಗಿ ಮಾಡುವ ಒಂದು ಯೋಜನೆಯೂ ಇಲ್ಲವೆಂದು ನೊಂದ ಮನಸ್ಸಿನಿಂದ ಹೇಳಬೇಕಾಗಿದೆ. ಶ್ರೀ ಎಂ. ಆರ್. ಪಾಟೀಲರು ಇದರ ಬಗ್ಗೆ ಹೆಚ್ಚಿನ ರೀತಿಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇವತ್ತು ಪ್ರತಿ ರೈತನ ಉತ್ಪತ್ತಿ ಎಷ್ಟು ಅನ್ನುವುದನ್ನು ಇಲ್ಲಿ ಕೊಟ್ಟಿರತಕ್ಕಂಥ ಅಂಕಿ ಅಂಶಗಳಿಂದ ಹೇಳಿ ನನ್ನ ಅಭಿಪ್ರಾಯಗಳನ್ನು ಮುಂದುವರಿಸುತ್ತೇನೆ. ರೈತನ ಉತ್ಪತ್ತಿ 1950-51ನೇ ಸಾಲಿನಲ್ಲಿ 447 ರೂಪಾಯಿ ವರ್ಷಕ್ಕೆ ಇತ್ತು. 1956-57ರಲ್ಲಿ 437 ರೂಪಾಯಿ ಇದೆ. ಅದು 'India 1965' ಎಂಬ ಪುಸ್ತಕವಲ್ಲಿ ಕೊಟ್ಟಿರತಕ್ಕಂಥ ಅಂಕಿ ಅಂಶಗಳಿಂದ ವ್ಯಕ್ತವಾಗುತ್ತದೆ. ಮೊದಲನೆ ಮತ್ತು ಎರಡನೆ ಯೋಜನೆಗಳನ್ನು ಕಾರ್ಯಗತ ಮಾಡಿದುದರ ಫಲಿತಾಂಶವಾಗಿ ರೈತನ ಆದಾಯ ಇನ್ನೂ ಇಳಿಯುತ್ತಾ ಬರುತ್ತಿದೆ ಅನ್ನುವುದನ್ನು ವ್ಯಕ್ತ ಪಡಿಸುತ್ತದೆ. ಈ ಅಂಕಿ ಸರಿಯಾದುದೇ ತಪ್ಪೇ ಅನ್ನುವುದರ ಬಗ್ಗೆ ಶ್ರೀ ಪುಟ್ಟಸ್ವಾಮಿಯವರು ಉತ್ತರ ಹೇಳಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ವಾಸ್ತವಿಕವಾಗಿ ಸಮಾಜದಲ್ಲಿ ಆರ್ಥಿಕ ವ್ಯವಸ್ಥೆ ಸ್ವಲ್ಪ ಮಟ್ಟಿಗೆ ಉತ್ತಮವಾಗುತ್ತಿದೆ ಅನ್ನುವುದರಲ್ಲಿ ಸಂದೇಹವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಹಾಗೆಂದರೆ ಆರ್ಥಿಕ ವ್ಯವಸ್ಥೆ ಬಗ್ಗೆ ನಾನು ಬದಲಾಯಿಸಿ ಬೇರೆ ಸ್ಟಾಟಿಸ್ಟಿಕಲ್ ಫಿಗರ್ಸ್ ಕೊಡಬೇಕಾಗುತ್ತದೆ. ತಾವು ಲೋಕಲ್ ಕಂಡಿಷನ್ ತೆಗೆದುಕೊಂಡು ಹೇಳುವುದಾದರೆ ಒಪ್ಪುವುದಕ್ಕೆ ಸಿದ್ಧನಿದ್ದೇನೆ. ಪ್ರಾಯಶಃ ಅವರು ಮೈಸೂರು ಸಿಟಿ ಏರಿಯಾದಿಂದ ಬಂದಿರಬೇಕು ಸನ್ನಿವೇಶವಿರುತ್ತದೆ. ಹಳ್ಳಿಯಲ್ಲಿರತಕ್ಕಂಥ ನಿಜವಾದ ಕಷ್ಟಸುಖಗಳನ್ನು ಅರಿತುಕೊಂಡು ಅನುಭವದಿಂದ ನಾನು ಹೇಳತಕ್ಕಂಥ ವಿಷಯ. ದಯವಿಟ್ಟು ಅದನ್ನು ಅಪಾರ್ಥಮಾಡಬೇಕಾದ್ದಿಲ್ಲ.

**Sri K. PUTTASWAMY.**—Then you have to revise your opinion about me.

ಶ್ರೀ. ಎಚ್. ಡಿ. ದೇವೇಗೌಡ.—ನಾನು ಅಂಕಿಅಂಶಗಳ ಮೇಲೆ ಹೇಳುತ್ತಿದ್ದೇನೆ. ಸರ್ಕಾರ ಎಷ್ಟರಮಟ್ಟಿಗೆ ರೈತನಿಗೆ ಸಹಾಯ ಕೊಡದೆ ಇದೆ ಅನ್ನುವ ಒಂದು ವಿಷಯವನ್ನು ಉಲ್ಲೇಖಮಾಡುವುದಕ್ಕೆ ಇಚ್ಛೆಮಾಡುತ್ತೇನೆ. 34 per cent was taken from money lenders, 44 per cent from mortagage banks, 15 per cent from employees ಎಂದು ಹೇಳಿವೆ. ಇವತ್ತು ಈ ಒಂದು ವಾಕ್ಯವನ್ನು ತಮಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕೋ-ಆಪರೇಟೀವ್ ಡಿಪಾರ್ಟ್‌ಮೆಂಟ್ ಮುಖಾಂತರ ತಕಾವಿ ಲೋನ್, ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ ಮತ್ತಿತರ ಸಾಲವನ್ನು ಚಾನಲೈಸ್ ಮಾಡುತ್ತೀರ. ನೀವು ಕೊಡತಕ್ಕಂಥ ಸಾಲಸೋಲದ ಬಗ್ಗೆ ಒದಗಿಸಿರುವ ಅಂಕಿ ಅಂಶಗಳನ್ನು ನೋಡಿದರೆ ಎಷ್ಟರಮಟ್ಟಿಗೆ ಸರ್ಕಾರ ರೈತನ ಬಗ್ಗೆ ಧೋರಣೆ ಇದೆಯೆಂದು ವ್ಯಕ್ತವಾಗುತ್ತದೆ.

ಇನ್ನು ನಮ್ಮ ಇಂಟರ್‌ಸ್ಟೇಟ್ ಬಸ್ ರೂಟುಗಳನ್ನು ಕೊಟ್ಟಿರುವ ಬಗ್ಗೆ ಪ್ರಸ್ತಾಪಮಾಡುವುದು ಇದೆ. ನಮ್ಮಲ್ಲಿ ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಶನ್ನು ಅಸ್ತಿತ್ವದಲ್ಲಿರತಕ್ಕಂಥ ಕಾಲದಲ್ಲಿ ಖಾಸಗಿ ಮಾಲೀಕರಿಗೆ ಇಂಟರ್ ಸ್ಟೇಟ್ ಬಸ್ ರೂಟುಗಳನ್ನು ಕೊಡತಕ್ಕಂಥ ಅವಶ್ಯಕತೆ ಏನು ? ಇವತ್ತಿನ ದಿವಸ ಒಂದೊಂದು ಬಸ್‌ರೂಟಿಗೆ ಲಕ್ಷಾಂತರ ರೂಪಾಯಿ ದುರ್ವ್ಯಾಪಾರವಾಡಿ ಖಾಸಗಿ ಮಾಲೀಕರು ಕೆಲಮಟ್ಟದಲ್ಲಿ ಪರ್ಮಿಶನ್ನನ್ನು ಪಡೆದಿದ್ದಾರೆ. ಹೇಡಿಯಲ್ಲಿ ಆಡತಕ್ಕಂಥ ಪ್ರಸಂಗಕ್ಕೆ ಸರ್ಕಾರ ಅವಕಾಶ ಕೊಟ್ಟಿರತಕ್ಕಂಥಾದ್ದು ಬಹಳ ಹೇಯವಾದ ವಿಷಯವೆಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. 12½ ಕೋಟಿ ರೂಪಾಯಿ ಬಂಡವಾಳ ಹಾಕಿ, ಮೈಸೂರು ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಶನ್ ಮುಖೇಣ ಎಲ್ಲಾ ರೂಟುಗಳನ್ನು ನ್ಯಾಶನಲೈಸ್ ಮಾಡಿದೆ ಅದನ್ನು ಖಾಸಗಿ ಮಾಲೀಕರಿಗೆ ಉಪಯೋಗಮಾಡಲಿಕ್ಕೆ ವ್ಯವಹಾರ ಮಾಡಿರುವುದನ್ನು ನೋಡಿದರೆ ನಿಜವಾಗಿಯೂ ಚಿಂತಾಜನಕವಾದ ಪರಿಸ್ಥಿತಿ ಅನ್ನತಕ್ಕಂಥಾದ್ದು ಎಂದು ಅರಿಯಬೇಕು. ಈ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆ ಒಬ್ಬ ಮಂತ್ರಿಯ ಆಡಳಿತದಲ್ಲಿದ್ದರೆ, R. T. O. ಇಲಾಖೆ ಇನ್ನೊಬ್ಬ ಮಂತ್ರಿಗಳ ಕೈಯಲ್ಲಿ ಇರುವುದರ ಔಚಿತ್ಯವೇನು ?

**Sri R. S. HEGDE** (Honavar).—Sir, welcoming the budget which envisages no new taxation proposals for the year 1965-66 I must say that the Government have done well in allotting a big slice of its revenue for

(SRI R. S. HEGDE)

education. This investment on human beings, namely education, should go a long way in making democracy a success in India. Education is the basis of all development and only education can ensure the success of democracy. It is true that our State is perhaps second, barring Madras, in making secondary education free to the annual income group up to Rs. 2,400. This is of course a big step in the right direction for giving relief to economically backward communities. Nevertheless, I would suggest that the basis for giving relief may be income-tax paying level. If this basis is accepted it would give relief to a greater section of the community before making secondary education free in the State. In order to make secondary education more effective and intensive within the framework of the syllabus, I invite attention of the Government that they should seriously think of increasing the emoluments of secondary school teachers. Almost all educationists and the Central Ministry of Education have stressed the need for increasing the salary. Secondly, the workload on the secondary school teacher should be reduced to 18 hours per week in the maximum. During the emergency they were to work for 22 hours per week and before that it was 20 hours. Besides, the teacher has to prepare his subject which requires time. He has to correct compositions. Even if he is to work in the classroom for 18 hours per week, more than 6 hours will be necessary for preparation and correction, and other ministerial work. Thirdly, private management schools are not allowed to open new divisions of a class having a strength below 65. If a class has more than 40 students, then the school should be allowed to open a new division in the interest of efficiency and individual attention. A class of 65 will be a bulky one at the cost of discipline and individual attention. Fourthly, this might mean a little more expenditure to Government, but the present large number of failures at the S. S. L. C. Examination and the University Examinations can be arrested, which means indirect savings. The Government are spending perhaps Rs. 50 on every student in high schools and nearly Rs. 500 on a college student. This expenditure incurred on account of the opening of new divisions and paying more salary to teachers and lessening their workload will be well-spent. Besides, there is too much disparity between the Headmaster and the Assistant teacher in pay scales and workloads. The Headmasters are working only for 6 hours per week and this workload may be increased.

Then, regarding the N G Os the studied speech of the Finance Minister is not very much encouraging. The Finance Minister has said that there is excess staff to the tune of 30 per cent and that they should be retrenched to give better pay scales to the remaining NGOs. This will give rise to new problems of unemployment leading to bad consequences. But the question remains since what period there has been excess of 30 per cent and why the Government did not take action to set matters right when it was detected and why this plea of excess of 30 per cent staff is put forth when the NGOs demanded some relief to

meet the high cost of living. It will not be fair and just to talk of the question of excess staff and the consequent retrenchment along with the question of the equitable demand of the NGOs. The demand of the NGOs will have to be considered from another point of view. Mysore State is part of the Southern Zone consisting of States of Mysore, Andhra, Madras and Kerala. The very purpose of the creation of the Southern Zone might be and should be to have some uniformity in administration as well as in other spheres. That being the position, it is worthwhile to give interim *ad hoc* relief to the NGOs as is being done in progressive States like Madras and other States. The Central Government's policy of fixing the age of superannuation at 58 years has been accepted by Maharashtra and some other States. When this question came up before the Mysore Government the Government put forth the plea that all the Southern Zone States have not accepted the same. When it is convenient to Government they quote the Southern Zone States, but when it is not convenient to them they just slip over the privileges given by the Southern Zone States. The Mysore Government should have taken a leaf from the book of reform of the administration of the Madras Government. There the Chief Minister took a bold step in presenting a deficit budget of Rs. 6 crores for giving a relief of Rs. 22 per month to the NGOs. This policy should have been followed by the Mysore Government and they should have approached the Finance Commission after giving the benefit to the NGOs. Now the Finance Commission may say to the Mysore Government: " You give the relief first and then come to us." These NGOs specially the Class III, are the very foundation of the adminsitrative structure. We feel the importance of the Class IV Government servant only when he is absent. Similarly, we feel the importance of the Class III Government servant when he is not there. When he is not there in his post, how embarassing it is for the smooth administration of Government. A dissatisfied NGO would create a lot of embarassment to the Government and so Government cannot lose the sympathy of nearly 2 lakhs NGOs. The Finance Minister has given a ray of hope and it must be pursued to fulfil the aspirations of the NGOs. If the NGOs work sincerely they can compensate the extra cost to Government by expeditious disposal of files and collection of arrears.

Thirdly, the budget proposals do not mention anything about the Ugranis especially of North Kanara. They are considered as part-time servants and they get a salary of Rs. 27 per month. They are not full-time workers and they are not given T.A. even for going once a week to the Tahsildar's Office to take back the village correspondence. They have to wait on all the revenue officers on tour and accompany the revenue officers at the time of making the Pahani and they have also to go for collection of hand reverence Recognising their importance, they should be considered at least as Class IV servants and they should be paid their salary.

No doubt, the Budget does not speak about new taxes, but we have passed the Irrigation Act and a resolution for increasing the land revenue is pending decision. The deficit in the budget is proposed to be made

(SRI R. S. HEGDE)

good by increase in the land revenue by Rs. 3½ crores. According to me, land revenue is one of the earliest known forms of tax in India based on the yield from the land. Prior to 1947 paying land revenue was considered as privilege and an honour because there was no adult franchise and only those persons who were paying assessment had the right to vote, but after 1947 the qualification of paying assessment for adult franchise has lost its importance. Nevertheless, I for one believe that maximum relief should be given to small landholders restricted to a ceiling of 5 acres.

MR. SPEAKER.—The House now rises and will meet at 3-30 P.M.

---

*The House adjourned for recess at Three of the Clock and reassembled at Thirty-five minutes past Three of the Clock.*

---

[MR. DEPUTY SPEAKER in the Chair].

ಶ್ರೀ ಟಿ. ಡಿ. ದೇವೇಂದ್ರಪ್ಪ.—ಮಾನ್ಯ ಅಧ್ಯಕ್ಷರೇ, ಪ್ರತಿಯೊಬ್ಬ ಸದಸ್ಯರು ಮಾತನಾಡುವುದಕ್ಕೆ ಕಾಲ ನಿಗದಿ ಮಾಡಿದ್ದೀರಿ. ಈಗ ಮಾತನಾಡುತ್ತಿರುವ ಸದಸ್ಯರಿಗೆ ಈಗಾಗಲೇ 10 ನಿಮಿಷ ಹೆಚ್ಚು ಕಾಲ ಕೊಟ್ಟಿದ್ದೀರಿ. ಇನ್ನೂ 5 ನಿಮಿಷ ಕಾಲ ಕೊಡುವುದಾದರೆ ಇದೇ ನೀತಿಯನ್ನು ಬೇರೆಯವರಿಗೂ ಅನುಸರಿಸುವುದು ಒಳ್ಳೆಯದಲ್ಲವೇ ?

MR. DEPUTY SPEAKER.—There is no point. It has been decided already. Sri R. S. Hegde may continue.

SRI R. S. HEGDE.—I was developing the point on the proposed increase in land revenue. I submit that as far as small holders are concerned, there must be exempted from land revenue say, up to a limit of 5 acres but so far as others are concerned, the increase should not affect intensive and extensive cultivation. In this connection, I invite attention to the fact that South, North Kanara and Bombay Karnatak do not justify any increase in land revenue for the simple reason that they have been taxed to the maximum, there being two revision settlements prior to 1965. They have been paying 200 to 300 per cent more than that paid by the other districts of the State. So far as agriculture is concerned, I submit that unless the panchayat agricultural production plans are successfuly implemented, there is no solution to food production. My submission is that the speech of the Finance Minister is silent about the future of the Panchayat Secretaries and also those of the co-operatives.

In my submission, the Panchayat Secretary and Secretary of the Co-operative Society have to actually implement the work of the gramasevaks. Today we find that the gramasevak is the lone worker in the village and it will not be possible for him to work to the entire satisfaction in the Panchayat area and therefore his work has to be implemented by the Panchayat Secretaries and those of the co-operatives,

If the future of the Panchayat Secretary and the future of the Secretary of the Co-operative Society is bleak and dark, then they will not work in the same spirit and enthusiasm.

[MR. SPEAKER in the Chair].

As far as minor irrigation is concerned there should be concentration of minor irrigation work on smaller tanks. I do not say that bigger tanks or bigger projects must be given up; there must be simultaneous concentration of work on the minor projects and one crore now allotted for minor irrigation may not be very sufficient.

Yesterday something about loan was spoken by the Leader of the Opposition. But I submit that loan is a known method for developmental activity. As we all know the State has to depend upon, for finance, on taxes and loans. In so far as loans are invested on remunerative projects, I do not see any difficulty, either for repayment of interest or capital.

Mr. Speaker, the investment in major irrigation projects in the State is bound to give fruitful results in times to come. Investment by the State on production of power, on expansion of power supplies, on major irrigation projects, is bound to be remunerative assets of the State. Hence one need not be afraid whether the State can pay. In a welfare State the State has to depend upon taxes, loans and initiative and enterprising spirit of the people for development. The State cannot remain static; it has to grow dynamic. Many of the enterprenuers and others depend upon bank overdrafts and loans for development purposes. Therefore one need not be panicky about the loans. I once again welcome the budget and thank the Chair for giving me an opportunity to speak.

SRI M. Y. GHORPADE (Sandur).—Mr. Speaker, I for one in the least not surprised at the budget that has been presented to the House. No doubt the Finance Minister has pointed out basic difficulties that we are facing. But I may be permitted to say that these are difficulties that were clearly foreseen some three years ago. I am not trying to say that I said it but I did say about it when I spoke on the Budget of 1962-63. I said if certain corrective methods are not taken in the third or fourth year of the Third Plan we will reach a situation which result in breakdown. Therefore, that situation, I hope has not been reached but we are certainly in a difficult circumstances. I would like to say that the main difficulty seems to be we are obsessed with financial targets and financial outlays. We do not pay sufficient attention to the physical targets and physical achievements. I feel strongly that to the extent to which there are unbearable regional disparities in the basic requirements of development from State to State, to that exten our planning is not a success. You will kindly permit me to say one or two examples. Take for instance irrigation. If we compare Mysore with Madras, it is a matter of great pain to us to see that only 7 per cent of the cultivable land is irrigated as against 40 per cent, approxima-

(SRI M. Y. GHORPADE)

tely, in Madras or Andhra. As against 30 per cent in the whole country. Take for instance, by the end of the Third Plan, every village in Madras will have the satisfaction of power for at least agricultural pumpsets whereas in our State and in many other States not even 10 per cent will have power. I feel we should immediately take steps to see that this sort of disparity is not tolerated and now that the Sharavathy has come there is no reason why if the Government makes up its mind to subsidise power to rural areas, by the end of the Fourth Plan every village in Mysore will have power.

Let me speak for a minute or two about what happens if we are obsessed with financial targets. Speaking on the budget for the year 1962-63 I did point out that the real deficit should be not as what is presented but the real overspending or deficit can only be judged properly if you do not include sale of securities, use of reserves, cash balances, in your revenue and capital receipts. If you do not include sale of securities and transfer from reserves in your capital and revenue receipt, that gives a measure of real overspending. As per that I did submit that for the year 1961-62 the deficit of Mysore was of the order of 13 crores and in 1962-63 it would be of the order of 17 crores. Now, I would like the Hon'ble Deputy Finance Minister to tell us what exactly the deficit for this year. On this basis it must be of the order of several crores. You will also see that a stage came when our Government even in 1961-62 had negative cash balance of three crores. I would like the Hon'ble Finance Minister to tell the House what was the negative cash balance credit balance, with the Reserve Bank. We are also aware that the Government of India did tell the Reserve Bank that no more overdraft facilities should be permitted to the State Governments. Therefore, it is a very serious situation that we are always facing. It is not only to Mysore but to various States. I would like the Finance Minister to elucidate in his reply what he means by saying that we shall require temporary assistance, temporary accommodation. There is one sentence in the speech which says that the State will continue to have heavy outstandings in respect of ways and means advances. We certainly like to know how heavy this commitment is. This is a crucial matter because this is a matter which concerns the progress and backbone of the Five-Year Plan. There is a limit to borrow. In 1962-63 it was stated authoritatively that the loan of Mysore amounted to as such as 192 crores and the Chief Minister went to the extent that it is difficult to pay even the interest due. The present Finance Minister has also stated for the next year we will have to pay Rs. 6.27 crores by way of interest and Rs. 14 crores by way of payment of loan to the Government of India. This is only in relation to what we have got as loan from the Government of India. Our total commitment towards loan and interest will be much more than this figure. I would like the Hon'ble Finance Minister to tell us, to take the House into confidence and tell us what is the total payment of

interest and repayment of loan on all borrowings, and not only from the Government of India.

I must also congratulate the Finance Minister for frankly stating that if we borrow at this rate, then the borrowings must be strictly related to yields. I am glad that he has at least stated so because I feel strongly on this point. We are responsible to the posterity and we owe to the next generation that no laxity on our part will make them bear debt burdens more than what they can possibly bear. Hence I lay strong emphasis on these two points. In this connection I wish to bring to the notice of the House another point. I was also happy to read that no less a person than Smt. Vijayalakshmi Pandit has recently stated that the tendency to indiscriminate borrowings on foreign assistance, must be carefully looked into. To make a positive suggestion that investment yields no less a person than Sri T. Krishnamachari, when he was the Vice-Chairman of Planning Commission said that some of the big projects are not yielding because there is no uniform treatment in handling of these projects. Therefore they are not made to yield. He even went to the extent of suggesting that these big must come under concurernt list so that the Centre gets chance and authority to get the concerned Ministers from the State Government and see uniform thht uniform policy in relation to big projects is enforced. I am sure the State Government will welcome this statement because they can also convince the electorate. Therefore, I feel if there is to be better planning, more and more subjects will have to come under the concurrent subjects and it will not be to the total disadvantage of the State Governmnet as some people imagine.

I would like the Finance Minister to tell us what happened to the talk about moratorium on debt period. This talk has been there for the last three years. What happened to the talk regarding the realisation of debt repayments to suit returns on investment. What are the decisions that have been arrived at ? I feel that time has come when the Central Government and the Planning Commission must scrutinise more closely and have the power to insist on certain corrective measures that the State Government should take. The Central Government and the Planning Commission must no longer be, what I would call, a passive spectator to the bankruptcy of the States.

I do not want to go into many details and statistics. But I certainly wish to draw the attention of the House to the increasing dependence of State Government on Central assistance and loan. I shall just give one figure. In 1951-52 out of State outlay of Rs. 540 crores the Centre's assistance was 160 crores ; in 1961-62 total States outlay was 1,580 crores and the Centre's assistance was 800 crores, *i. e.*, Central aid has gone up from 29 per cent to 50 per cent in 10 years. Another thing is the percentage of Central assistance to different States varies so much as 40 to 80 per cent. It means in the region of 50 per cent for Mysore. What is the logic for this great and tremendous variation in Central assistance. There must be some norm which the people of Mysore must understand.

(SRI M. Y. GHORPADE)

I feel that sense of dependence of the State on the Centre has already become so colossal and the result of that must be greater and scientific control and not great arbitrariness as what seems to be happening. Therefore I feel that the Planning Commission should not waste any time before setting up a competent cell, a cell of the Planning Commission at the State level so that the cell of the Planning Commission can work in close association with the planners at the State level to see that physical targets are achieved in time. If there are any difficulties they can be discovered and corrected in time. I have said this for the last two years and I think I am convinced that I am justified in repeating it in the interest of planning.

There is also a talk about some financial autonomy for the States. I do not know what people mean by financial autonomy but I submit that financial autonomy must not mean financial separatism or financial isolationism. It must mean more equitable distribution from the Central pool taxes, grants and loans. Otherwise if all the income from the City of Bombay is to go to Maharashtra alone, that would be a financial autonomy of isolationism certainly not in the interest of the country as a whole. Therefore I feel the State Government should be fully aware that when they talk to the Finance Commission, it does not cover items such as loans. It does not have anything to do with the grants given under Article 187 of the Constitution. It has nothing to do with the Central road fund or capital funds. I hope the State Government are aware of it and are taking proper steps to see that even the grants and loans and assistance decided by the Finance Commission are being distributed in an equitable manner. I wish to state that the size of the State plans and the quantum of Central assistance must depend on uniform and equitable assessment of taxable capacity. It must depend on uniform assessment of taxable capacity and also on certain uniform standards of essential social welfare services, such as education, health, etc. After all when the Government of India says that particular Government has not made sufficient tax effort, it can only be inferred that the Central Government and the Planning Commission have some idea of taxable capacity of States. Therefore, it is essential that norms of taxable capacity should be evolved and they should determine uniform standards of social services that must take place. For example the gap between taxable capacity and uniform standard of social services which the Government wants to be done, must be met by the Centre. I am confident that these matters will be taken up by the State Government.

I was happy to read in the Budget Speech a categorical sentence which reads as follows :

> "I am confident that Government of India will be able to find a solution for uniformity of taxation as between limited resources and increasing expenditure relating to Welfare Departments like Education, Medical and Public Health, Public Works, Law and Order, etc."

It would not be an exaggeration to say that our Finance Minister has been the first in the coutry to focus public attention on the need for such a uniform taxation policy. The Finance Commission must be asked to calculate the gap between what the State should raise and the committed expenditure on social services. Today they are not asked to do it. I think the terms of the Finance Commission must be suitably altered and they must be asked to calculate the gap between what the State should raise and the committed expenditure, that is, recurring expenditure that the State Government is committed to spend as a result of previous plan expenditure. I wish to say that if this scheme or financial handling is to succeed we must make up our mind to separate big projects of inter-State significance and those projects must be treated, financed and controlled separately and they should come under concurrent basis. It is only then that the Central Government can give separate financial assistance. If we permit the Central Government have sufficient say regarding the control and administration of such projects, they can ensure that such projects yield results that were expected of them.

Regarding the non-developmental expenditure there is no time for me to say much. But there is one thing I would like to say and that is that an idea of standard administrative uniformity must be evolved. The Government is making so much expenditure and administration that a concept must be evolved and the Government of India and the Planning Commission must accept that there must be uniformity in the pay scales of people. For instance, the low paid staff N.G.Os and teachers must accept that principle of uniformity. I was happy to see that in the Madras budget out of deficit of six crores five crores goes as an increase in D.A. given to low paid staff. Apparently the Madras Government is more confident of making the Central Government agree and convince them of the increase they have given whereas in this State, shall I say we have not been lion-hearted, and we have not chosen to give. Apparently we are not sure of the Central Government as the Madras Government appears to have.

Sir, I would like to mention one last point regarding the size of the Fourth Plan. People are talking in terms of Five hundred crores.

MR. SPEAKER.—That point can be dealt with while discussing the particular Demand.

SRI M. Y. GHORPADE.—I will conclude by saying that the tendency of State Governments to compete in opening their mouth as wide as possible, irrespective of the Centre's capacity to give or irrespective of their capacity to digest, should not be there, and a tighter and scientific planning must be there which must be accepted by all the people if we are to go through our Plans successfully as envisaged by our late beloved Prime Minister, Mr. Jawaharalal Nehru.

[MR. DEPUTY SPEAKER in the Chair]

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಅಧ್ಯಕ್ಷರೇ, 1965-66ನೇ ಸಾಲಿನ ಆಯವ್ಯಯ ಪಟ್ಟಿಯ ಮೇಲೆ ಮಾನ್ಯ ಸದಸ್ಯರುಗಳು ಈಗಾಗಲೇ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ ಬಂದಿದ್ದಾರೆ.

(ಶ್ರೀ ಕೆ. ಲಕ್ಕಪ್ಪ)

ಮಾನ್ಯ ಜತ್ತಿಯವರು ಬಹಳ ನಿರಾಶೆಯನ್ನು ಈ ಆಯವ್ಯಯವನ್ನು ಸಭೆಯಲ್ಲಿ ಮಂಡಿಸುವಾಗ ಹೆಜ್ಜೆ ಹೆಜ್ಜೆಗೂ ತೋರಿಸಿ ತಪ್ಪು ಅಂಕಿಅಂಶಗಳನ್ನು ಇದರಲ್ಲಿ ಕೊಟ್ಟಿದ್ದಾರೆ. ಬಹುಶಃ ಕಾಂಗ್ರೆಸ್ ಸರ್ಕಾರದ ಅರ್ಥಮಂತ್ರಿಯಾಗಿ ಅವರು ಬಹಳ ಸಾರಿ ಈ ರೀತಿ ಮಾಡಿದ್ದಾರೆ. ಈ ನಿರಾಶಾ ದಾಯಕ ಆಯವ್ಯಯ ಬಹುಶಃ ಮೂರನೆ ಪಂಚವಾರ್ಷಿಕ ಯೋಜನೆಯ ಕೊನೇ ವರ್ಷದಲ್ಲಿ ದೇಶ ಬರಡಾಗತಕ್ಕ ಪರಿಸ್ಥಿತಿಯನ್ನು ನೋಡುವಂತಾಗಿದೆ ಎಂದು ಹೇಳಬೇಕಾಗಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಸ್ವಾಮೀ, ಸಭೆಯಲ್ಲಿ ಕ್ಯಾಬಿನೆಟ್ ದರ್ಜೆಯ ಒಬ್ಬ ಮಂತ್ರಿಗಳೂ ಇಲ್ಲ. ಒಬ್ಬರೇ ಒಬ್ಬರು ಉಪಮಂತ್ರಿಗಳಿದ್ದಾರೆ. ಬಡ್ಜೆಟ್ ಅಧಿವೇಶನ ನಡೆಯುವ ಕಾಲದಲ್ಲಿಯೂ ಇವರು ಪ್ರವಾಸ ಹೋಗುವುದು ಎಲ್ಲ ಆದರೆ ಹೇಗೆ ಸ್ವಾಮಿ ?

ಶ್ರೀ ಕೆ. ಲಕ್ಕಪ್ಪ.—ಈ ಆಯವ್ಯಯವನ್ನು ಮಂಡಿಸಿದಂಥ ಅರ್ಥ ಸಚಿವರು ಈ ದೇಶದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಹೆಜ್ಜೆ ಹೆಜ್ಜೆಗೂ ಅಶಕ್ತತೆಯನ್ನು ತೋರಿಸುತ್ತ ಬಂದಿದ್ದಾರೆ. ಇವರು ಆಯವ್ಯಯ ಪಟ್ಟಿಯಲ್ಲಿ ಹೇಳಿರತಕ್ಕ ಗಮನಾರ್ಹವಾದ ಒಂದು ಅಂಶ ಏನೆಂದರೆ ನಮ್ಮ ಆರ್ಥಿಕ ಸ್ಥಿತಿ ಜನರ ನಡುವಿನ ಮೇಲೆ ನಿಂತಿದೆ, ಮತ್ತು ನಮ್ಮ ಆರ್ಥಿಕ ಪರಿಸ್ಥಿತಿ ಬಹಳ ಕೆಟ್ಟದ್ದಾಗಿದೆ ಅಲ್ಲದೆ ದೇಶದ ಪ್ರಗತಿ ಸ್ವಲ್ಪಮಟ್ಟಿಗೆ ಕುಂಠಿತವಾಗಿದೆ ಎನ್ನುವುದನ್ನು ಅವರು ಧೈರ್ಯವಾಗಿ ಇದರಲ್ಲಿ ಹೇಳಿರುವುದನ್ನ ನೋಡಿದರೆ ದೇಶದಲ್ಲಿ ಈ ಕಾಂಗ್ರೆಸ್ ಸರ್ಕಾರ ಎಷ್ಟರಮಟ್ಟಿಗೆ ನಮ್ಮ ಆರ್ಥಿಕ ಸ್ಥಿತಿಯನ್ನು ಸುಭ ದ್ರತೆಯಿಂದ ನೋಡಿಕೊಳ್ಳುತ್ತಿದೆ ಎನ್ನುವುದರ ಪರಿಚಯ ಮಾಡಿಕೊಳ್ಳಬಹುದು.

ಮೊದಲನೆಯದಾಗಿ, ಮೂರನೆಯ ಪಂಚವಾರ್ಷಿಕ ಯೋಜನೆಯ ಮೂರು ವರ್ಷಗಳಲ್ಲಿ ನಡೆದಿರುವ ಪ್ರಗತಿಯನ್ನು ನಾವು ನೋಡುವುದಾದರೆ ಬಹುಶಃ 218 ಕೋಟಿ ರೂಪಾಯಿಗಳನ್ನು ಈ ರಾಜ್ಯ ಸರ್ಕಾರ ಖರ್ಚು ಮಾಡಿದ್ದರೂ ಸಹ ನಿರೀಕ್ಷಿಸಿದಷ್ಟು ಫಲವನ್ನು ನಾವು ನೋಡದೆ ಇರುವುದರ ಔಚಿತ್ಯವಾದರೂ ಏನು ಎನ್ನುವುದನ್ನು ತಿಳಿಯಲು ನಾನು ಮಾನ್ಯ ಜತ್ತಿಯವರನ್ನು ತಮ್ಮ ಮೂಲಕ ಕೇಳಬೇಕಾಗಿದೆ. ಈ ವರ್ಷ ಸಹ ಪರಿಸ್ಥಿತಿ ಎಷ್ಟರಮಟ್ಟಿಗೆ ಬಿಗಡಾಯಿಸುತ್ತಿದೆ, ಆಹಾರದ ಅಭಾವಕ್ಕೆ ಕಾರಣವೇನು ಎನ್ನುವುದನ್ನು ಅವರು ಎಲ್ಲಿಯೂ ನಮೂದಿಸಿಲ್ಲ. ನಾವು ಹಾಕಿದಂತಹ ಯೋಜನೆಗಳು ಫಲಪ್ರದವಾಗಿಲ್ಲ. ನಾವು ಹಾಕಿದಂಥ ಕೆಲಸಗಳು ಕಾರ್ಯಗತವಾಗಿಲ್ಲ ಎನ್ನುವ ಸೋಗನ್ನು ಹಾಕಿಕೊಂಡು ದೇಶದ ಪ್ರಗತಿಯನ್ನು ಕುಂಠಿತ ಮಾಡಿರತಕ್ಕ, ಪೇಚಿಗೆ ಸಿಕ್ಕಿರತಕ್ಕ ಈ ಆಯವ್ಯಯ ಪಟ್ಟಿಯನ್ನು ನಾವು ಹೇಗೆ ಅನುಮೋದಿಸಬೇಕು ಎನ್ನುವುದನ್ನು ನಮ್ಮ ಮಾನ್ಯ ಅರ್ಥ ಸಚಿವರು ಹೇಳಬೇಕಾಗಿದೆ.

ನಮ್ಮ ಯೋಜನೆಗಳು ಯಶಸ್ವಿಯಾಗಿ ಕಾರ್ಯಗತವಾಗಿದ್ದರೆ ಈ ದೇಶದಲ್ಲಿ ಆಹಾರಾಭಾವ ಏತಕ್ಕೋಸ್ಕರ ಬರುತ್ತಿತ್ತು ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ. ನಮ್ಮ ದೇಶದಲ್ಲಿ ಫಲಪ್ರದ ವಾಗಿ ಯೋಜನೆಗಳು ನಡೆಯಲಿಲ್ಲ. ಯಾವ ಯೋಜನೆಗಳೂ ಕಾರ್ಯಗತವಾಗಲಿಲ್ಲ ; ಯಾವ ಸಣ್ಣ ನೀರಾವರಿ ಯೋಜನೆಗಳೂ ಆಗಿಲ್ಲ ; ಯಾವ ಭಾರಿ ನೀರಾವರಿ ಯೋಜನೆಗಳ ಕೆಲಸವಾಗಲಿ, ಬಾವಿ ಕೆಲಸಗಳಾಗಲೀ ಫಲಪ್ರದವಾಗಿಲ್ಲ. ಇದಕ್ಕೆ ಸರ್ಕಾರದಲ್ಲಿರತಕ್ಕ ಅನಾಸಕ್ತಿ, ಅಧಿಕಾರ ದಾಹ, ಅಧಿಕಾರಕ್ಕಾಗಿ ಕಚ್ಚಾಡುವುದು, ಇವೆಲ್ಲ ಕಾರಣವಾಗಿದೆ. ಹೀಗಾಗಿ ಹಣ ಪೋಲಾಗಿದೆ ಮತ್ತು ಅದಕ್ಕೆ ನಿದರ್ಶನಗಳನ್ನು ಬೇಕಾದರೆ ಪಟ್ಟಿಯ ರೂಪದಲ್ಲಿ ಈ ಸಭೆಯ ಮುಂದೆ ಇಡುವುದಕ್ಕೆ ಕೂಡ ತಯಾರಾಗಿದ್ದೇನೆ.

ಮದ್ರಾಸು ರಾಜ್ಯ ನಮ್ಮ ರಾಜ್ಯಕ್ಕಿಂತ ದೊಡ್ಡದು. ಅಲ್ಲಿಯ ಆಯವ್ಯಯದಲ್ಲಿ ಆರು ಕೋಟಿ ರೂಪಾಯಿಗಳ ಖೋತಾ ಇದೆ. ಆದರೂ ಅಲ್ಲಿಯ ಪರಿಸ್ಥಿತಿ ಎಲ್ಲ ರೀತಿಯಲ್ಲಿಯೂ ಉತ್ತಮವಾಗಿದೆ. ಅಲ್ಲಿ ಮಾಡತಕ್ಕ ಕಾರ್ಯಗಳು, ಅಲ್ಲಿ ಮಾಡತಕ್ಕ ಯೋಜನೆಗಳು ಕಾರ್ಯಗತವಾಗಿರಲು ಕಾರಣವೇನು ಮತ್ತು ನಮ್ಮ ದೇಶದಲ್ಲಿ ಎಲ್ಲ ಯೋಜನೆಗಳೂ ಕಾರ್ಯಗತವಾಗದೆ, ಫಲಪ್ರದವಾಗದೆ ಇರುವುದಕ್ಕೆ ಕಾರಣವೇನು ಎನ್ನುವುದನ್ನು ತಿಳಿದುಕೊಂಡು ಮೈಸೂರು ಸರ್ಕಾರ ಈಗಲಾದರೂ ಎಚ್ಚೆತ್ತು ಕೊಳ್ಳಲು ಸರಿಯಾದ ಕಾಲ ಬಂದಿದೆ. ಕಾರಣ ಆಹಾರ ಪರಿಸ್ಥಿತಿಯನ್ನು ಮೊಟ್ಟ ಮೊದಲು ನಾವು ಸುಧಾರಿಸದೆ ಹೋದದ್ದು ಮತ್ತು ಮೂರನೆಯ ಯೋಜನೆಯಲ್ಲಿ ದೊಡ್ಡ ಮತ್ತು ಸಣ್ಣ ಪ್ರಮಾಣದ ಯೋಜನೆಗಳನ್ನು ನಾವು ಕಾರ್ಯಗತ ಮಾಡಿ ಆಹಾರ ಪರಿಸ್ಥಿತಿಯನ್ನು ಸುಧಾರಿಸುತ್ತೇವೆ ಎಂದು ಯಾವ ಆಧಾರದ ಮೇಲೆ, ಯಾವ ಅಂಕಿ ಅಂಶಗಳ ಆಧಾರದ ಮೇಲೆ ಹೇಳುತ್ತಿದ್ದಾರೆ ಎನ್ನುವುದನ್ನು ನಾನು ಪ್ರಶ್ನೆ ಮಾಡುತ್ತಿದ್ದೇನೆ.

ನಮ್ಮ ಯೋಜನೆಗಳು ಮತ್ತು ಇತರ ಕೆಲಸಗಳಿಗೆ ಬಹು ಮುಖ್ಯವಾಗಿರತಕ್ಕ ಅಧಿಕಾರಿ ಗಳಲ್ಲಿರುವ ಜಿಗುಪ್ಸೆಯನ್ನು ಹೋಗಲಾಡಿಸುವುದಕ್ಕೆ ಸರ್ಕಾರ ಪ್ರಯತ್ನಪಟ್ಟಿಲ್ಲ. ನಮ್ಮಲ್ಲಿರುವ

ಕೆಳದರ್ಜೆ ನೌಕರರ ಪರಿಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಇದುವರೆಗೂ ಸರ್ಕಾರ ಯಾವ ಏರ್ಪಾಡನ್ನೂ ಕೂಡ ಮಾಡಿಲ್ಲ. ಈಗ ತಾನೇ ನಾವು ನೋಡುತ್ತಿದ್ದೇವೆ, ನಾಲ್ಕನೆಯ ತಾರೀಖಿನಿಂದ ಈ ದಿವಸದವರೆಗೂ ಕೂಡ ಕೆಲಸವನ್ನು ಮಾಡದೆ ಸಣ್ಣಪುಟ್ಟ ನೌಕರರು ಬ್ಯಾಡ್ಜ್‌ಗಳನ್ನು ಧರಿಸಿ ಕೊಂಡು ವಿಧಾನ ಸೌಧದ ಮುಂದೆ ಮೌನವಾಗಿ ಪ್ರದರ್ಶನ ಮಾಡಿರತಕ್ಕ ಪರಿಸ್ಥಿತಿಯಾದರೂ ಏನು, ಇದನ್ನು ಬಗೆಹರಿಸದ ಸರ್ಕಾರದ ಔಚಿತ್ಯವಾದರೂ ಏನು ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ.

ಸ್ವಾಮೀ, ಮದ್ರಾಸಿನಲ್ಲಿ ಖೋತಾ ಆಯವ್ಯಯ ಇದ್ದಾಗ್ಯೂ ಕೂಡ ಅಲ್ಲಿಯ ನೌಕರರಿಗೆ ತೃಪ್ತಿ ಯನ್ನು ಕೊಡತಕ್ಕ ರೀತಿಯಲ್ಲಿ ಅಲ್ಲಿಯ ಸರ್ಕಾರ ನಡೆಯುತ್ತಿದೆ. ನಮ್ಮ ಮಂತ್ರಿ ಮಂಡಲವಾದರೋ ತನ್ನ ಸಂಖ್ಯೆಯನ್ನು ಜಾಸ್ತಿ ಮಾಡಬೇಕು, ಅಚ್ಚುಕಟ್ಟಾದ ಜೀವನವನ್ನು ನಡೆಸಬೇಕು, ಭೋಗ ವಿಲಾಸವನ್ನು ನಡೆಸಬೇಕು ಎಂದು ಇದೆ. ಇವರು ಈ ರೀತಿ ಭೋಗವಿಲಾಸ ನೀತಿಯನ್ನು ಪ್ರದರ್ಶನ ಮಾಡುವುದಾದರೆ ಎಲ್ಲಿಯಾದರೂ ನಮ್ಮ ದೇಶದಲ್ಲಿ ಸಮಾಜವಾದ ಬರುತ್ತದೆಯೇ ಎನ್ನುವ ಶಂಕೆ ನಮಗೆ ಬಂದಿದೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಸಮಾಜವಾದವನ್ನು ಯಾವ ರೀತಿಯಲ್ಲಿ ಇವರು ಬೆಳೆಸುತ್ತಿದ್ದಾರೆ ಎನ್ನುವುದನ್ನು ಮತ್ತು ಇವರು ನಡೆಸತಕ್ಕ ಭೋಗವಿಲಾಸ ಜೀವನವನ್ನು ಸದಾಶಿವ ನಗರಕ್ಕೆ ಹೋದರೆ ನೋಡಬಹುದಾಗಿದೆ. ಆಲ್ ಇಂಡಿಯಾ ಕಾಂಗ್ರೆಸ್ ಅಧಿವೇಶನವನ್ನು ಸದಾಶಿವನಗರದಲ್ಲಿ ನಡೆಸಿ, ಈ ದೇಶದ ರಾಜಕೀಯಕ್ಕೋಸ್ಕರ ವಾಗಿ ಆ ಜಾಗವನ್ನು ಸದಾಶಿವ ನಗರವನ್ನಾಗಿ ಕರೆದು ಖಾದಿ ಟೋಪಿಗಳವರು ಅಲ್ಲಿನ ಸೈಟುಗಳನ್ನು ಹಂಚಿಕೊಂಡು ಈಗ ಭೋಗ ಜೀವನವನ್ನು ನಡೆಸುತ್ತಿದ್ದಾರೆ. ಆದರೆ ಮನೆ ಇಲ್ಲದ ಜನಗಳಿಗೆ ವಸತಿ ಸೌಕರ್ಯಗಳಿಲ್ಲ. ಆ ಜಾಗವೆಲ್ಲಾ ಈ ದಿವಸ ಎಲ್ಲಿ ಹೋಯಿತು ಎಂದು ನಾನು ಕೇಳಬೇಕಾಗಿದೆ. ಅವರೆಲ್ಲರೂ ಮನೆಗಳನ್ನು ಕಟ್ಟಿಸಿಕೊಂಡು ನಮ್ಮ ಜನರ ಹತ್ತಿರವೆಲ್ಲಾ ಚೆನ್ನಾಗಿ ಹಣವನ್ನು ನಾನಾ ರೂಪದಲ್ಲಿ ವಸೂಲು ಮಾಡಿಕೊಂಡು ಇಲ್ಲಿನ ಅಧಿಕಾರಿಗಳನ್ನು ಹಿಡಿದುಕೊಂಡು ಜೀವನ ಮಾಡುತ್ತಿರುವ ಈ ಕಾಂಗ್ರೆಸ್ಸಿನವರು ಈ ರೀತಿ ಮಾಡುತ್ತಿದ್ದರೆ ಇವರಲ್ಲಿ ಸಮಾಜವಾದ ತತ್ವ ಎಲ್ಲಿ ಬರುತ್ತದೆ? ದೇಶದಲ್ಲಿರತಕ್ಕ ಬಡನೌಕರರು ಉತ್ತಮ ಸ್ಥಿತಿಗೆ ಬರುವುದಕ್ಕೆ ಹೇಗೆ ಸಾಧ್ಯ? ನಮ್ಮ ದೇಶದಲ್ಲಿ ಸಣ್ಣ ನೀರಾವರಿ ಯೋಜನೆಗಳು ಯಾವ ರೀತಿಯ ಯಶಸ್ವಿಯಾಗುತ್ತವೆ? ಹೆಚ್ಚಾಗಿ ನೀರಾವರಿ ಯೋಜನೆಗಳು ಕಾರ್ಯಗತವಾಗುತ್ತಿಲ್ಲ. ಕಾರಣ, ದೇಶದಲ್ಲಿ ಭ್ರಷ್ಟಾಚಾರವೆಂಬುದು ಬೃಹದಾಕಾರವಾಗಿ ಬೆಳೆದು ದೊಡ್ಡ ದೊಡ್ಡ ಕಂಟ್ರಾಕ್ಟರುಗಳನ್ನು ಭ್ರಷ್ಟಾಚಾರದ ಮೂಲಕ ಚೆನ್ನಾಗಿ ಇವರೇ ಸಾಕುತ್ತಿದ್ದಾರೆ. ಮಾಡಿದ ಅಂದಾಜುಗಳನ್ನು ಆಗಾಗ್ಗೆ ಮೇಲಿಂದ ಮೇಲೆ ಬದಲಾಯಿಸುವುದು—ಈ ರೀತಿಯಾಗಿ ಅನೇಕ ಕಾಮಗಾರಿಗಳನ್ನು ಕೈಗೊಳ್ಳುವುದರಲ್ಲಿ ವಿಪರೀತವಾಗಿ ಕಾಲವಿಳಂಬ ಮಾಡುತ್ತಿದ್ದಾರೆ. ಈ ರೀತಿ ಹಣವನ್ನು ಇವರು ಪೋಲು ಮಾಡುವುದರಿಂದ ಇನ್ನೆಷ್ಟರ ಮಟ್ಟಿಗೆ ಈಗಿನ ಪರಿಸ್ಥಿತಿಯನ್ನು ಸುಧಾರಿಸುತ್ತಾರೋ ಗೊತ್ತಿಲ್ಲ. ಆ ಸ್ಥಳದಲ್ಲಿ ಸಣ್ಣ ನೌಕರರಿಗೆ ನಾವು ವಸತಿ ಸೌಕರ್ಯಗಳನ್ನು ಮಾಡಬೇಕೆಂದು ಹೇಳಿದ್ದೆವು. ಆದರೆ ಈ ದೇಶದಲ್ಲಿ ಎಷ್ಟೋ ಜನ ಸಣ್ಣ ನೌಕರರಿಗೆ ವಾಸಕ್ಕೆ ಮನೆಗಳು ಇಲ್ಲದೆ ಇದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಈ ವಿಚಾರ ದಲ್ಲಿ ತೊಂದರೆ ಬಹಳ ಹೆಚ್ಚು. ಬೆಂಗಳೂರು ನಗರದಲ್ಲಿ ಮಾತ್ರ ಕೆಲವರಿಗೆ ವಾಸಕ್ಕೆ ಯೋಗ್ಯವಾದ ಮನೆಗಳನ್ನು ಕಟ್ಟಿದ್ದಾರೆ. ಸದಾಶಿವ ನಗರದಲ್ಲಿ ಕಟ್ಟತಕ್ಕ ಮನೆಗಳನ್ನು ಬಡನೌಕರರಿಗೆ ಕೊಡ ಬೇಕೆಂದು ಹೇಳಿದ ಇವರ ಸಮಾಜ ತತ್ವವೇನಾಯಿತು ಎಂದು ಪ್ರಶ್ನೆ ಮಾಡುತ್ತೇನೆ. ಈ ದಿವಸ ಇವರು ಅಲ್ಲಿ ಮನೆಗಳನ್ನು ಕಟ್ಟಿಕೊಂಡು ಭೋಗ ಜೀವನ ಮಾಡುತ್ತಿದ್ದಾರೆ. ಅಲ್ಲಿ ಕಾಂಗ್ರೆಸ್ ಜನಗಳ ವಾಸದ ಕುಟೀರವಾಗಿ ಪರಿಣಮಿಸಿದೆ. ಮಹಾತ್ಮ ಗಾಂಧಿಯವರು ಹೇಳಿದಂಥ ಸಮತಾದ ಸಮಾಜ ವಾದೀ ತತ್ವದಲ್ಲಿ ಖಂಡಿತವಾಗಿ ಇವರಿಗೆ ನಂಬಿಕೆ ಇಲ್ಲ. ದೇಶದಲ್ಲಿ ಪ್ರಗತಿಯನ್ನು ಸಾಧನೆ ಮಾಡ ತಕ್ಕಂಥ ರೀತಿಯಲ್ಲಿ ಯಾವ ಅಂಕಿ ಅಂಶಗಳೂ ಕೂಡ ಈ ಆಯ ವ್ಯಯ ಪಟ್ಟಿಯಲ್ಲಿ ಕಾಣಿಸುತ್ತಾ ಇಲ್ಲ. ಅಧಿಕಾರಿಗಳು ಕೊಟ್ಟಿರತಕ್ಕಂಥ ತಪ್ಪು ಅಂಕಿ ಅಂಶಗಳಿಂದ ಇಲ್ಲಿ ಇವರು ಕುಂಟು ನೆಪಗಳನ್ನು ಮಾಡಿ ಕೊಂಡು ಇಂಗ್ಲಿಷ್ ಕನ್ನಡ ಬೆರೆಸಿ ಭಾಷಣ ಮಾಡತಕ್ಕ ಒಂದು ವಕ್ರದೃಷ್ಟಿ ಶ್ರೀಮಾನ್ ಜತ್ತಿಯವರ ದಾಗಿದೆ. ಇಂತಹ ಅನ್ಯಾಯ ಇಲ್ಲಿ ಇವರು ಏಕೆ ಹೆಚ್ಚಾಗಿ ಮಾಡುತ್ತಿದ್ದಾರೆಂದು ನಾನು ಪ್ರಶ್ನೆ ಮಾಡಬೇಕಾಗಿದೆ.

ಇನ್ನು ನೀರಾವರಿ ಯೋಜನೆಗಳ ಬಗ್ಗೆ ಅಶೋಕ ಮೆಹ್ತಾ ಅವರು ಪ್ಲಾನಿಂಗ್ ಕಮಿಷನ್ನಿನವರಿಗೆ ಒಂದು ಕಾಗದವನ್ನು ಬರೆದಿದ್ದಾರೆ. ಅದೇನೆಂದರೆ, ಮೈಸೂರಿನಲ್ಲಿ ಈ ಯೋಜನೆಗಳು ಅಯಶಸ್ವಿ ಯಾಗಿರುವುದಕ್ಕೆ ಮುಖ್ಯ ಕಾರಣವೇನೆಂದರೆ ಅಧಿಕಾರಿಗಳಲ್ಲಿ, ಮಂತ್ರಿಗಳಲ್ಲಿ ಇಂತಹ ಕೆಲಸಗಳನ್ನು ಮಾಡತಕ್ಕ ಎಲ್ಲ ಇಲಾಖೆಗಳಲ್ಲಿಯೂ ಸರಿಯಾದ ಹೊಂದಾಣಿಕೆ ಇಲ್ಲದೇ ಇರುವುದು ಎಂಬುದಾಗಿ ಅವರು ತಮ್ಮ ಕಾಗದದಲ್ಲಿ ತಿಳಿಸಿದ್ದಾರೆ. ಇಲ್ಲಿ ಕೊಟ್ಟಿರುವ ಹಣವನ್ನು ಸರಿಯಾದ ರೀತಿಯಲ್ಲಿ ಉಪಯೋಗಿ ಸಿಲ್ಲ, ಇಲ್ಲಿನ ಪ್ರತಿಯೊಂದು ಇಲಾಖೆ ಅಧಿಕಾರಿಯ ಮೇಲೆ ಅವರು ಮಾಡಿರತಕ್ಕ ಕೆಲಸ ಕಾರ್ಯಗಳು ಸಮರ್ಪಕವಾಗಿಲ್ಲ, ಅವನ್ನು ತನಿಖೆ ಮಾಡಿ ವರದಿಯನ್ನು ಕೊಡಬೇಕೆಂದೂ ಸಹ ಅವರು ತಮ್ಮ

(ಶ್ರೀ ಕೆ. ಲಕ್ಕಪ್ಪ)

ಪತ್ರದಲ್ಲಿ ಹೇಳಿದ್ದಾರೆ. ದೇಶದ ಬೆನ್ನುಮೂಳೆಯಂತಿರುವ ರೈತನಾದವನು ನಿಜವಾಗಿ ಈ ದೇಶದಲ್ಲಿ ಅದರಲ್ಲೂ ಇಂತಹ ಸರ್ಕಾರದಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಅವನಿಂದ ನಾನಾ ವಿಧವಾದ ತೆರಿಗೆಗಳನ್ನು ವಸೂಲುಮಾಡತಕ್ಕ ಪರಿಸ್ಥಿತಿಯನ್ನು ದೇಶದಲ್ಲಿ ಅವರು ಉಂಟುಮಾಡಿದ್ದಾರೆ. Taxation Committee Report ನಲ್ಲಿ ರೈತನಿಗೆ ಯಾವ ರೀತಿಯಲ್ಲೂ ಭೂಕಂದಾಯವನ್ನು ಹಾಕಬಾರದು ಎಂಬುದಾಗಿ ವರದಿ ಇದ್ದರೂ, ಮಹಾತ್ಮ ಗಾಂಧೀಜಿಯವರು ಸಮಾಜವಾದೀ ತತ್ವದಲ್ಲಿ ತೆರಿಗೆಯನ್ನು ರೈತನಮೇಲೆ ಹಾಕಬಾರದು ಎಂಬುದಾಗಿ ಹೇಳಿದ್ದರೂ ಇವರು ಪ್ರತಿವರ್ಷವೂ ತೆರಿಗೆ ಯನ್ನು ಹೆಚ್ಚುವರಿ ಮಾಡುತ್ತಾ ಈಗ ಶೇಕಡ 100ರಷ್ಟು ಹಾಕುವುದರಲ್ಲಿ ಇವರ ಔಚಿತ್ಯವೇನು ಎಂಬುದನ್ನು ನಾನು ಪ್ರಶ್ನೆ ಮಾಡುತ್ತೇನೆ. ಎಷ್ಟರಮಟ್ಟಿಗೆ ಸಹಕಾರ ಸಂಘಗಳಲ್ಲಿ ಇವರು ಕೊಡ ತಕ್ಕ ಹಣ ನ್ಯಾಯವಾಗಿ ರೈತನಿಗೆ ಹೋಗುತ್ತಾ ಇದೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ಹೇಳುತ್ತೇನೆ. ಉದಾಹರಣೆಗಾಗಿ ಹೇಳುವುದಾದರೆ ಮೊನ್ನೆ ನಮ್ಮ ತುಮಕೂರು ಜಿಲ್ಲೆಯಲ್ಲಿ ರೈತನಿಗೆ ಕೊಟ್ಟಿರತಕ್ಕ ಸಾಲ ಯಾವ ರೀತಿ ಇದೆಯೆಂಬುದನ್ನು ಇಲ್ಲಿ ಹೇಳಬೇಕಾಗಿದೆ. Ninety per cent of the agriculturists borrowed money from co-operative institutions. N.E.S. Blocks and money-lenders for unproductive purposes like birth and death ceremonies and marriages, and only 10 per cent for improving their lands, sinking wells and other agricultural operations.

ಇದನ್ನು ಬಹಳ ಜವಾಬ್ದಾರಿಯುತರಾದ ಅಧಿಕಾರಿಗಳು ಸರ್ವೆಮಾಡಿ ಹೇಳಿದ್ದಾರೆ. ಈಗ ರೈತರು ಒಂದು ಖಚಿತವಾದ ಅಭಿಪ್ರಾಯಕ್ಕೆ ಬಂದಿದ್ದಾರೆ. ಕಾಂಗ್ರೆಸ್ ಸರ್ಕಾರದಲ್ಲಿರತಕ್ಕ ಅಧಿಕಾರಿಗಳು, ಹಾಗೂ ಕೋ-ಅಪರೇಟಿವ್ ಸಂಘಗಳಲ್ಲಿರತಕ್ಕವರೂ ಸಹ ಕಾಂಗ್ರೆಸ್ಸಿನ ಏಜೆಂಟರುಗಳಾಗಿದ್ದಾರೆ, ಅವರಿಂದ ಹಣವಿಲ್ಲದೆ ಕೆಲಸವಾಗುವುದಿಲ್ಲ, ಕಾಲ ವಿಳಂಬವಾಗದೆ ಕೆಲಸ ಯಾವುದೂ ಆಗುವುದಿಲ್ಲ ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. These facts were revealed by the rural credit survey recently conducted by the planning forum of the Tumkur First Grade College, under the guidance of Mr. Krishna Naik, Secretary and Head of the Economics Department, in the villages of Devarayanadurga, Anupanahalli, Sethupalya, Durgadahalli, Thimmanayakanahalli and Kurubarahallikere in Tumkur Taluk. ಈ ರೀತಿ ನಾವು ಕೆಲಸವನ್ನು ಮಾಡುತ್ತಾ ಹೋದರೆ ದೇಶದಲ್ಲಿ ಯಾವ ಪ್ರಗತಿಯನ್ನಾದರೂ ಕೂಡ ಸಾಧಿಸುವುದಕ್ಕಾಗುವುದಿಲ್ಲ. ಇದನ್ನು ಸರ್ಕಾರದವರು ಯೋಚನೆ ಮಾಡಬೇಕು.

ಇನ್ನು ಸಹಕಾರ ಸಂಘಗಳ ಬಗ್ಗೆ ನಾನು ಬಹಳ ನಂಬಿಕೆ ಇಟ್ಟಿರತಕ್ಕವನು. ಆದರೆ ಈ ಸಹಕಾರ ಶಾಖೆಯ ಸಚಿವರಾಗಿರತಕ್ಕ ಶ್ರೀ ರಾಮಕೃಷ್ಣ ಹೆಗ್ಗಡೆಯವರು ಈ ಶಾಖೆಯನ್ನು ಹೊಂದಿದ ಮೇಲೆ ಇದು ಸ್ವಲ್ಪ ಮಟ್ಟಿಗೆ ವಿಪರ್ಯಾಸ ರೀತಿಯಲ್ಲಿದೆ. ತುಮಕೂರು ಜಿಲ್ಲೆಯಲ್ಲಿ ಸಹಕಾರ ಸಂಘಗಳು ಶೇಕಡ 85 ರಷ್ಟು ಮುಚ್ಚಲ್ಪಟ್ಟಿವೆ. ಅಲ್ಲಿನ ಹಣವನ್ನು ಧಫಾವಣಿ ಮಾಡದೇ ಇರತಕ್ಕ ಸಹಕಾರ ಸಂಘಗಳಿಲ್ಲ. ಈಗ ಜಿಲ್ಲಾ ಬ್ಯಾಂಕುಗಳನ್ನು ಸ್ಥಾಪನೆ ಮಾಡಿದ್ದಾರೆ. ಆ ಮೂಲಕ ಸಹಕಾರ ಸಂಘಗಳಿಗೆ ನೆರವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಹಿಂದೆ ಜಿಲ್ಲಾ ಬ್ಯಾಂಕುಗಳಲ್ಲಿದ್ದುಕೊಂಡು ಸುಮಾರು 2-3 ಲಕ್ಷ ರೂಪಾಯಿಗಳನ್ನು ಧಫಾವಣಿ ಮಾಡಿದಂಥ ಅಧಿಕಾರಿಗಳನ್ನೇ ಪುನಃ ಅದೇ ಜಾಗದಲ್ಲಿ ನೇಮಿಸಿದ್ದಾರೆ. ಇದರಿಂದ ಬೇಕಾದಷ್ಟು ಹಣ ದುರುಪಯೋಗವಾಗಿದೆ. Most of the agriculturists had misused the loans borrowed from the N. E. S. Department. About 60 per cent of the raiyats raised the funds from money-lenders paying a very high rate of interest, which, in some cases, exceeded 75 per cent. The ryots appeared to have some sort of misconception that getting loans from the Societies and Government agencies involved delay, malpractices, bribery and red-tapism. ಇದನ್ನು ತನಿಖೆ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಆಹಾರದ ಸಮಸ್ಯೆ ಉಲ್ಬಣವಾಗಿರುವುದಕ್ಕೆ ತುಮಕೂರು ಜಿಲ್ಲೆಯ ಅಧಿಕಾರಿಗಳೇ ಕಾರಣ. ನಮ್ಮಲ್ಲಿ ಮರಳನ್ನು ಬೆರೆಸಿದ ಅಕ್ಕಿಯನ್ನು ಮಾರಾಟ ಮಾಡುವ ಸಹಕಾರ ಸಂಘಗಳು ಬೃಹದಾಕಾರವಾಗಿ ಹೆಚ್ಚಿವೆ. ಕೋಟ್ಯಾಂತರ ರೂಪಾಯಿಗಳನ್ನು ಇಂತಹ ಸಹಕಾರ ಸಂಘಗಳಿಗೆ ಸರ್ಕಾರದವರು ಕೊಟ್ಟಿದ್ದಾರೆ. ಸುಮಾರು ಒಂದು ಕೋಟಿ ರೂಪಾಯಿಗಳನ್ನು ಆಹಾರ ಸಮಸ್ಯೆ ಯನ್ನು ಬಗೆಹರಿಸಲು ಕೊಟ್ಟಿದೆ ಎಂಬುದಾಗಿ ಆಯವ್ಯಯ ಅಂದಾಜು ಪಟ್ಟಿಯಲ್ಲಿ ಶ್ರೀಮಾನ್ ಜತ್ತಿ

ಯವರು ಹೇಳಿದ್ದಾರೆ. ಇವರು ಕೋಟ್ಯಾಂತರ ರೂಪಾಯಿಗಳನ್ನು ಅಂತಹ ಸಹಕಾರ ಸಂಘಗಳಿಗೆ ಕೊಟ್ಟು ಮತ್ತೆ ಇವರೇ ಅಲ್ಲಿ ಭ್ರಷ್ಟಾಚಾರವನ್ನು ಬೆಳೆಸುತ್ತಿದ್ದಾರೆ. ಇದರಿಂದ ಸಹಕಾರ ಸಂಘಗಳಲ್ಲಿ ಕೋಟ್ಯಾಂತರ ಜನಗಳು ತಯಾರಾಗಿ ಈ ದೇಶದಲ್ಲಿ ಭ್ರಷ್ಟಾಚಾರವನ್ನು ತಾವಾಗಿಯೇ ಬೆಳೆಸುತ್ತಿದ್ದಾರೆ. ಕೋಟ್ಯಾಂತರ ರೂಪಾಯಿಗಳನ್ನು ಇದಕ್ಕಾಗಿ ಸರ್ಕಾರದವರು ಸಹಕಾರ ಸಂಘಗಳಿಗೆ ಕೊಡುತ್ತಿದ್ದಾರೆಯೇ ಅಥವಾ ದೇಶದಲ್ಲಿ ಸಹಕಾರ ಸಂಘಗಳನ್ನು ಉತ್ತಮ ರೀತಿಯಲ್ಲಿ ನೇರವಾದ ಜನ ಸಂಪರ್ಕವನ್ನು ಗಳಿಸಿ ಕೆಲಸ ಮಾಡುವುದಕ್ಕೆ ಇಟ್ಟಿದ್ದಾರೆಯೋ ಎಂಬುದಾಗಿ ನಾನು ಪ್ರಶ್ನೆ ಮಾಡುತ್ತೇನೆ. ಶ್ರೀಮಾನ್ ಜತ್ತಿಯವರೇ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ಹಣ ಬಹಳ ಖರ್ಚಾಗಿದೆ, ಆದರೆ ಯಾವ ಪ್ರಯೋಜನವೂ ಆಗುತ್ತಿಲ್ಲವೆಂಬುದಾಗಿ ದೇಶದ ಈ ವರ್ಷದ ಆಯವ್ಯಯ ಪಟ್ಟಿಯಲ್ಲಿಯೇ ಒಪ್ಪಿಕೊಂಡಿದ್ದಾರೆ. ಆದರೆ ಮೈಸೂರು ಸಂಸ್ಥಾನದಲ್ಲಿ ಒಬ್ಬರು ಮಂತ್ರಿಗಳು, ಇನ್ನೊಬ್ಬರು ಉಪಮಂತ್ರಿಗಳು ಈ ಶಾಖೆಗೋಸ್ಕರ ಲೆಖ್ಖಕ್ಕೆ ಇದ್ದಾರೆ ಅಷ್ಟೆ. ಉಪಮಂತ್ರಿಗಳಿಗಿರುವ ಕೆಲಸವೇನು, ಅವರಿಗೆ ಕೊಡತಕ್ಕ ಹಣ ಮತ್ತು ಸೌಲತ್ತುಗಳು ಸಂಪೂರ್ಣವಾಗಿ ವೇಸ್ಟ್ ಎಂದು ಹೇಳಬಹುದು. ಇಲ್ಲದ ಸಲ್ಲದ ಕೆಲಸ ಕಾರ್ಯಗಳಿಗೆ ಕೆಲಸವಿಲ್ಲದ ಉಪಮಂತ್ರಿಗಳನ್ನು ನೇಮಕ ಮಾಡಿದ್ದಾರೆ. ಇಂತಹ ವಿಚಾರಗಳನ್ನು ಇವರನ್ನು ಕೇಳುವವರು, ಹೇಳುವವರು ಯಾರೂ ಇಲ್ಲವೇ ಎಂದು ನಾನು ಕೇಳಬೇಕಾಗಿದೆ. ಇವರಿಗೆ ಹಣದ ಅಶಕ್ತತೆ ಯಾವಾಗಲೂ ಇದ್ದೇ ಇರುತ್ತದೆ. ಇವರು ಮದ್ರಾಸ್ ಪರಿಸ್ಥಿತಿಯನ್ನು ಏತಕ್ಕೋಸ್ಕರ ಹೋಲುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ವಿಚಾರ ಮಾಡಬೇಕಾಗಿದೆ. ಮೈಸೂರಿನಲ್ಲಿ ತುಮಕೂರು ಜಿಲ್ಲೆ ಬಹಳ ಕನಿಷ್ಠವಾದ ನೀರಾವರಿ ಸೌಲಭ್ಯವಿರತಕ್ಕ ಜಿಲ್ಲೆ. ಸಣ್ಣ ನೀರಾವರಿ ಯೋಜನೆಗೋಸ್ಕರವಾಗಿ ಒಂದು ಅಣೆಕಟ್ಟೆಯನ್ನು ಕಟ್ಟಬೇಕು ಎಂದು ಮೊದಲಿನಿಂದಲೂ ಹೇಳುತ್ತಾ ಬಂದಿದ್ದರೂ ಇದುವರೆಗೂ ಆ ಕಾರ್ಯವನ್ನು ಇವರು ಕೈಗೊಂಡಿಲ್ಲ.

ಈ ಕಾಂಗ್ರೆಸ್‌ನವರು ಪ್ರಗತಿಯನ್ನು ಸಾಧನೆ ಮಾಡಿರುವುದು 'ಏನೆಂದರೆ ಈ ಆಯವ್ಯಯ ಅಂದಾಜು ಪಟ್ಟಿಯಲ್ಲಿ ಹುಚ್ಚಾಸ್ಪತ್ರೆಯಲ್ಲಿ 228 ಬೆಡ್‌ಗಳನ್ನು ಜಾಸ್ತಿ ಮಾಡಿದ್ದೇವೆ ಎಂದು ಹೇಳಿದ್ದಾರೆ. ಹುಚ್ಚಾಸ್ಪತ್ರೆಯಲ್ಲಿ ಜನಗಳನ್ನು ಜಾಸ್ತಿಮಾಡತಕ್ಕಂಥ ಒಂದು ಪ್ರಗತಿಯನ್ನು ಬಿಟ್ಟರೆ ಮತ್ತೆ ಯಾವ ಪ್ರಗತಿಯನ್ನೂ ಸಾಧನೆ ಮಾಡುವುದಕ್ಕೆ ಇವರಿಂದ ಸಾಧ್ಯವಾಗಿಲ್ಲ. ಈಗ ನಮ್ಮ ದೇಶದಲ್ಲಿ ಹುಚ್ಚರು ಜಾಸ್ತಿಯಾಗುತ್ತಿದ್ದಾರೆ. ಯಾವಾಗ ಜನಗಳಿಗೆ ಜೀವನ ಮಾಡುವುದಕ್ಕೆ ಬೇಕಾದ ವಸತಿ ಸೌಕರ್ಯ, ಅನ್ನ, ಬಟ್ಟೆ, ಇತ್ಯಾದಿ ಸೌಲಭ್ಯಗಳು ದೊರೆಯುವುದಿಲ್ಲವೋ ಆಗ ಜನಗಳು ಏನುಮಾಡುತ್ತಾರೆ? ಹುಚ್ಚರಾಗುತ್ತಿದ್ದಾರೆ. ನಮ್ಮ ಆರೋಗ್ಯ ಶಾಖೆಯ ಮಂತ್ರಿಗಳಾದ ಶ್ರೀಮಾನ್ ನಾಗಪ್ಪ ಆಳ್ವ ಅವರು ಏನು ಸಾಧನೆ ಮಾಡಿದ್ದಾರೆ ಎಂದರೆ ಹುಚ್ಚಾಸ್ಪತ್ರೆಯಲ್ಲಿ 228 ಹಾಸಿಗೆಗಳನ್ನು ಜಾಸ್ತಿ ಮಾಡಿದ್ದಾರೆ. ಈ ರೀತಿಯಾಗಿ ದೇಶದಲ್ಲಿ ಹುಚ್ಚರನ್ನು ಜಾಸ್ತಿ ಮಾಡತಕ್ಕಂಥ ಜನ ರಾಜ್ಯವನ್ನು ಆಳುವುದಕ್ಕೆ ಲಾಯಕ್ಕಾಗಿಲ್ಲ. ಆದ್ದರಿಂದ ದಯವಿಟ್ಟು ನೀವು ರಾಜೀನಾಮೆಯನ್ನು ಕೊಟ್ಟು ಪುನಃ ಚುನಾವಣೆಯಲ್ಲಿ ಗೆದ್ದು ಬರಬೇಕು ಎಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಜೆ. ಮುಕ್ಕಣ್ಣಪ್ಪ.—ಸ್ವಾಮಿ, ನಾನು ಒಂದು ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇನೆ. ಸರ್ಕಾರದವರು ಈ ಅಸೆಂಬ್ಲಿಯನ್ನು ಇಷ್ಟೊಂದು ಲಘುವಾಗಿ ಕಾಣುವುದು ನನಗೇನೋ ಸರಿಯಾಗಿ ಕಾಣುವುದಿಲ್ಲ. ಯಾವುದೋ ಒಂದು ಫೌಂಡೇಷನ್ ಸ್ಟೋನ್ ಹಾಕುತ್ತಾರೆಂದು ಇಡೀ ಮಂತ್ರಿಮಂಡಲದವರೇ ಅಲ್ಲಿಗೆ ಹೋಗಿದ್ದಾರೆ. ಲೋಕಸಭೆಯಲ್ಲಿ ಒಂದು ಸಾರಿ ಇಂಥಾ ಪರಿಸ್ಥಿತಿ ಒದಗಿದಾಗ ಲೋಕಸಭೆಯ ಅಧ್ಯಕ್ಷರು ಸರ್ಕಾರಕ್ಕೆ ಒಂದು ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಬಡ್ಜೆಟ್ಟು ಬಹಳ ಮುಖ್ಯವಾದದ್ದು. ಸರ್ಕಾರದವರು ಈ ಸಭೆಯನ್ನು ಇಷ್ಟೊಂದು ನಿರ್ಲಕ್ಷದಿಂದ ಈ ರೀತಿ ಅಗೌರವದಿಂದ ನೋಡತಕ್ಕದ್ದು ಸರಿಯಲ್ಲ. ಈ ವಿಷಯದಲ್ಲಿ ತಾವು ಯಾವುದಾದರೂ ಒಂದು ರೀತಿಯಲ್ಲಿ ಸರ್ಕಾರಕ್ಕೆ ಆದೇಶವನ್ನು ಕೊಡಬೇಕು. ಮತ್ತು ಈ ಸಭೆಗೆ ಸರ್ಕಾರ ಗೌರವವನ್ನು ತೋರಿಸುವ ರೀತಿಯಲ್ಲಿ ನಡೆದುಕೊಳ್ಳಬೇಕು ಎಂದು ಮಾಡಬೇಕು. ಒಬ್ಬರು ಉಪಮಂತ್ರಿಗಳನ್ನು ಬಿಟ್ಟರೆ ಬಾಕಿ ಎಲ್ಲಾ ಮಂತ್ರಿಗಳೂ ಕೂಡ ಫೌಂಡೇಷನ್ ಸ್ಟೋನ್ ಹಾಕುವ ಫಂಕ್ಷನ್ನಿಗೆ ಹೋಗಿದ್ದಾರೆ. ಇದನ್ನು ನೋಡಿದರೆ ನನ್ನ ಮನಸ್ಸಿಗೆ ಬಹಳ ವ್ಯಥೆಯಾಗುತ್ತದೆ. ಈ ರೀತಿ ಸರ್ಕಾರದವರು ಮಾಡುವುದು ಸರಿಯಲ್ಲ. ಇದು ಖೋತಾ ಬಡ್ಜೆಟ್ಟು, ಬಡ್ಜೆಟ್ ಚರ್ಚೆ ನಡೆಯುತ್ತದೆ. ಇದರ ಮೇಲೆ ಮಾನ್ಯ ಸದಸ್ಯರು ಏನೇನು ಸಲಹೆಗಳನ್ನು ಕೊಡುತ್ತಾರೆ ಎಂಬುದನ್ನು ತಿಳಿದುಕೊಳ್ಳಬೇಕು. ಹೀಗಿರುವಾಗ ಮಂತ್ರಿಗಳು ಈ ಸಭೆಯಲ್ಲಿ ಇಲ್ಲದೆ ಇರುವುದು ಸರಿಯಲ್ಲ. ಸರ್ಕಾರದವರಿಗೆ ತಾವು ಸ್ವಲ್ಪ ಹೇಳಬೇಕು. ನಾವು ಈ ಸಭೆಯಿಂದ ಹೊರಟುಹೋದರೆ ಕೋರಂ ಇರುವುದಿಲ್ಲ. ಈ ಸಭೆ ನಿಲ್ಲಬೇಕಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ಗಂಭೀರವಾದ ಈ ಸಭೆಯಲ್ಲಿ ಜವಾಬ್ದಾರಿಯುತವಾದ ಮಂತ್ರಿಗಳು ವರ್ತನೆ ಮಾಡುವುದನ್ನು ನಾನು ವಿರೋಧಿಸಬೇಕಾಗಿದೆ. ಈ ಸಭೆಯ ವಿಷಯದಲ್ಲಿ ಅವರು ಅನುಸರಿಸಿರತಕ್ಕಂಥ ನೀತಿ ಏನಿದೆ ಅದು ನಮಗೂ ಈ ಸಭೆಗೂ ಅವಹೇಳನ ಮಾಡುವಂಥಾದ್ದಾಗಿದೆ. ಬಡ್ಜೆಟ್ ಚರ್ಚೆ ಈ ಸಭೆಯಲ್ಲಿ ನಡೆಯುತ್ತಿರುವಾಗ ಯಾವ ಮಂತ್ರಿಗಳೂ ಈ ಸಭೆಯಲ್ಲಿ ಇಲ್ಲ. ಈ ರೀತಿ ಸರ್ಕಾರದವರು ಈ ಸಭೆಯ ವಿಷಯದಲ್ಲಿ ವರ್ತನೆ ಮಾಡುವುದನ್ನು ನಾನು ಪ್ರತಿಭಟಿಸಿ ನಾನು ಈ ಸಭೆಯಿಂದ ಹೊರಗೆ ಹೋಗುತ್ತೇನೆ.

(ಮಾನ್ಯ ಸದಸ್ಯರು ಸಭೆಯಿಂದ ಹೊರಗೆ ಹೋದರು.)

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಸ್ವಾಮಿ, ನಾವು ಹೊರಗೆ ಹೋದರೆ ಈ ಸಭೆಯಲ್ಲಿ ಕೋರಮ್ ಇರುವುದಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ).—ಸ್ವಾಮಿ, ಈಗ ಮಾನ್ಯ ಹಣಕಾಸಿನ ಮಂತ್ರಿಗಳಾದ ಶ್ರೀಮಾನ್ ಜತ್ತಿಯವರು ನಮ್ಮ ಈ ಸಭೆಯ ಮುಂದಿಟ್ಟಿರತಕ್ಕ ಆಯವ್ಯಯ ಪಟ್ಟಿಯ ಸಾಮಾನ್ಯ ಸ್ವರೂಪವನ್ನು ನಾನು ಸ್ವಾಗತಿಸುತ್ತೇನೆ.

**Sri C. J. MUCKANNAPPA.**—There is no quorum, Sir.

**Mr. DEPUTY SPEAKER.**—The Hon'ble Member has brought it to my notice. I will see to it. I will get it counted.

**Sri C. J. MUCKANNAPPA.**—When there is no quorum.........

**Mr DEPUTY SPEAKER.**—There should be time to count.

**Sri C. J. MUCKANNAPPA.**—Without ringing the Bell, these people won't come.

(Some Hon'ble Members came in)

**Mr DEPUTY SPEAKER.**—I think there is quorum. Members have come in.

ಶ್ರೀ ಎ. ಜೆ. ದೊಡ್ಡಮೇಟಿ.—ಈ ಆಯವ್ಯಯ ಪಟ್ಟಿಯ ಸಾಮಾನ್ಯ ಸ್ವರೂಪವನ್ನು ನಾನು ಸ್ವಾಗತಿಸಿ ಕೆಲವು ಸೂಚನೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈಗ ಇದರಲ್ಲಿ ಮುಂದಿನ ವರ್ಷಕ್ಕೆ 4 ಕೋಟಿ ರೂಪಾಯಿಗಳ ಕೊರತೆಯನ್ನೂ ಮತ್ತು ಮೂರನೆಯ ಪಂಚವಾರ್ಷಿಕ ಯೋಜನೆಯ ಕೊನೆಯ ಒಳಗೆ ಇನ್ನೂ ಹೆಚ್ಚಿನ ಕೊರತೆ ಬರುತ್ತದೆ ಎಂದು ಸೂಚನೆ ಕೊಟ್ಟಿದ್ದಾರೆ. ಈ ಕೊರತೆಯ ಹಣವನ್ನು ಯಾವ ರೀತಿ ತುಂಬಬೇಕು ಎನ್ನುವ ಬಗ್ಗೆ ಮುಂದಿನ ವರ್ಷ ಒಂದು ತರಹ ತೆರಿಗೆ ಬರಬಹುದು ಎಂಬ ಸೂಚನೆಯನ್ನು ಅವರ ಭಾಷಣದಲ್ಲಿ ಕೊಟ್ಟಿದ್ದಾರೆ. ಇದರಲ್ಲಿ ಇನ್ನೊಂದು ಸ್ಪಷ್ಟವಾಗಿ ಕಾಣುವಂತಹ ಮಾತು ಎಂದರೆ, ಕಂದಾಯವನ್ನು ಪುನರ್ ವಿಮರ್ಶೆ ಮಾಡುವುದರಿಂದ ಮೂರೂವರೆ ಕೋಟಿ ರೂಪಾಯಿಗಳು ಬರಬಹುದೆಂದು ಹೇಳಿದ್ದಾರೆ. ಮೂರುವರೆಕೋಟಿ ರೂಪಾಯಿಗಳನ್ನು ರೈತರಿಗೆ ಕಂದಾಯವನ್ನು ಹೆಚ್ಚು ಮಾಡುವುದರ ಮೂಲಕ ದೊರಕಿಸಿಕೊಳ್ಳುವುದು, ಅದು ಒಂದು ಬೇರೆ ವಿಷಯ. ರೈತರು ಕಂದಾಯವನ್ನು ಜಾಸ್ತಿ ಕೊಡಬೇಕು. ಆದರೆ ಅದರ ಪ್ರತಿಫಲ ಅವರಿಗೆ ಯಾವ ರೀತಿ ದೊರೆಯುತ್ತದೆ ಎಂಬುದನ್ನು ನಾವು ಸ್ವಲ್ಪ ವಿಚಾರಮಾಡಬೇಕಾಗಿದೆ. ವ್ಯವಸಾಯದ ಬಗ್ಗೆ ಅವರು ಮಾಡಿರತಕ್ಕ ಸೂಚನೆಗಳನ್ನು ನೋಡಿದರೆ ಅದು ಎಷ್ಟರಮಟ್ಟಿಗೆ ರೈತನಿಗೆ ಮುಟ್ಟುತ್ತದೆ ಎಂಬುದನ್ನು ವಿಚಾರ ಮಾಡಬೇಕು. ಅವರು ಆಹಾರಧಾನ್ಯಗಳ ಉತ್ಪತ್ತಿ ಕಡಿಮೆಯಾಗಿದೆ ಎಂದು ಸೂಚನೆಯನ್ನು ಕೊಟ್ಟಿದ್ದಾರೆ. ಹೆಚ್ಚು ಆಹಾರ ಉತ್ಪಾದನೆಯನ್ನು ಮಾಡಬೇಕಾದರೆ ವ್ಯವಸಾಯ ಅಭಿವೃದ್ಧಿ ಹೊಂದಬೇಕು ; ವ್ಯವಸಾಯ ಅಭಿವೃದ್ಧಿ ಹೊಂದಬೇಕಾಗಿದ್ದರೆ ಏನು ಮಾಡಬೇಕೆಂದರೆ ವ್ಯವಸಾಯದ ಒಂದು ಉದ್ಯೋಗ ಅಭಿವೃದ್ಧಿಯಾಗಬೇಕು. ಆದ್ದರಿಂದ ಅದಕ್ಕಾಗಿ ಕೆಲವೊಂದು ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಸರ್ಕಾರದವರು ಸಿದ್ಧರಾಗಿದ್ದಾರೆಯೇ ಹೇಗೆ ಎನ್ನುವುದನ್ನು ನಾವು ತಿಳಿಯಬೇಕಾಗಿದೆ. ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿಯೂ ವ್ಯವಸಾಯದ ವಿಷಯದಲ್ಲಿ ಏನೇನು ಕಾರ್ಯಕ್ರಮಗಳನ್ನು ಸರ್ಕಾರದವರು ಕೈಗೊಳ್ಳಬೇಕಾಗಿತ್ತೋ ಅದನ್ನು ಕೈಗೊಂಡಿಲ್ಲ. ಬೇಸಾಯಗಾರರು ಹೊಸ ಹೊಸ ಬಗೆಯ ಬೆಳೆಗಳನ್ನು ವರ್ಷಕ್ಕೆ ಎರಡು ಮೂರು ಸಲ ತೆಗೆಯಬೇಕಾಗುತ್ತದೆ. ಮತ್ತು ರೈತ ಬರೀ ವ್ಯವಸಾಯದಿಂದಲೇ ಸ್ವಾವಲಂಬಿಯಾಗಿ ತನ್ನ ಜೀವನವನ್ನು ನಡೆಸುವುದಕ್ಕೆ ಸಾಧ್ಯವಿಲ್ಲ. ಅವನು ಅದರ ಜೊತೆಗೆ ಮತ್ತೆ ಯಾವುದಾದರೂ ಒಂದು ಉದ್ಯೋಗವನ್ನು ಹೊಂದಬೇಕು. ಮತ್ತು ರೈತರು ಆಧುನಿಕ ರೀತಿಯಲ್ಲಿ ವ್ಯವಸಾಯವನ್ನು ಮಾಡುವುದಕ್ಕೆ ಬೇಕಾದ ಸೌಕರ್ಯವನ್ನು ಸರ್ಕಾರ

ದವರು ಒದಗಿಸಿಕೊಡಬೇಕು. ದಿವಂಗತರಾದ ಶ್ರೀ ಪಂಡಿತ್ ಜವಹರ್‌ಲಾಲ್ ನೆಹರೂ ಅವರು ಯಾವುದಾದರೂ ಒಂದು ಹಳ್ಳಿಗೆ ಹೋದರೆ ಅಲ್ಲಿ ವ್ಯವಸಾಯ ಮುಂದುವರಿದಿದೆಯೋ ಇಲ್ಲವೇ ಹೇಗೆ ಎಂಬುದನ್ನು ನೋಡಬೇಕಾದರೆ ಅಲ್ಲಿ ರೈತ ಉಪಯೋಗಿಸತಕ್ಕಂಥ ಗುಳವನ್ನು ನಾನು ಮೊದಲು ನೋಡುತ್ತೇನೆಂದು ಹೇಳುತ್ತಿದ್ದರಂತೆ. ಹಾಗೆ ಇನ್ನು ಮುಂದೆ ವ್ಯವಸಾಯ ಆಧುನಿಕ ರೀತಿಯಲ್ಲಿ ನಡೆಯಬೇಕಾದರೆ ಅದಕ್ಕೆ ಅಗತ್ಯವಾಗಿ ಬೇಕಾದ ಯಂತ್ರಗಳನ್ನು ಪಡೆಯಬೇಕು. ಈಗ ಸರ್ಕಾರದವರು ರೈತರಿಗೆ ಟ್ರಾಕ್ಟರು, ಬುಲ್ಡೋಜರು ಮುಂತಾದ ಯಂತ್ರಗಳನ್ನೇನು ಕೊಡುತ್ತಿದ್ದಾರೆಯೋ ಅದು ಸಾಲದು. ಪ್ರತಿಯೊಂದು ತಾಲ್ಲೂಕು ಕೇಂದ್ರದಲ್ಲಿಯೂ ಒಂದೊಂದು ಟ್ರಾಕ್ಟರು ಮತ್ತು ಬುಲ್ಡೋಜರುಗಳನ್ನು ಇಟ್ಟು ಅವುಗಳ ಸೌಕರ್ಯ ರೈತರಿಗೆ ದೊರೆಯುವಂತೆ ಮಾಡಬೇಕು. ಹಳೆಯ ಮೈಸೂರು ಪ್ರದೇಶದಲ್ಲಿ ಸಹಕಾರ ಸಂಘಗಳಾಗಲೀ, ಸರಕಾರದವರಾಗಲೀ ಕೆಲವು ಕಡೆ ಟ್ರಾಕ್ಟರುಗಳನ್ನು ಮತ್ತು ಬುಲ್ಡೋಜರುಗಳನ್ನು ಇಟ್ಟು ಅವುಗಳ ಸೌಕರ್ಯವನ್ನು ರೈತರಿಗೆ ಒದಗಿಸುತ್ತಿದ್ದಾರೆ. ಆದರೆ ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಪ್ರದೇಶದಲ್ಲಿ ಈ ತರಹ ವ್ಯವಸ್ಥೆ ಮಾಡಿರುವುದು ಕಡಿಮೆ. ಈ ದೃಷ್ಟಿಯಿಂದ ವಿಚಾರಮಾಡಿ ಪ್ರತಿಯೊಂದು ತಾಲ್ಲೂಕು ಕೇಂದ್ರಗಳಲ್ಲಿಯೂ ಟ್ರಾಕ್ಟರು ಬುಲ್ಡೋಜರು ಮತ್ತು ಸುಧಾರಿತ ಬೀಜಗಳು, ಮುಂತಾದ ವ್ಯವಸಾಯದ ಉಪಕರಣಗಳು ಸಿಕ್ಕುವಂತೆ ಸರ್ಕಾರದವರು ವ್ಯವಸ್ಥೆಮಾಡಬೇಕು. ವ್ಯವಸಾಯ ಇಲಾಖೆ ಎಷ್ಟೋ ಕೆಲಸಗಳನ್ನು ಮಾಡುತ್ತಿದೆ ಎಂದು ಹೇಳುತ್ತಾರೆ. ನನಗೆ ಗೊತ್ತಿರುವ ಹಾಗೆ ವ್ಯವಸಾಯ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ಬಹಳ ಮಟ್ಟಿಗೆ ಅದಕ್ಕಾಗಿ ನಿಗಾವಹಿಸುತ್ತಿದ್ದಾರೆ ಎಂಬುದು ಗೊತ್ತಾಗುವುದಿಲ್ಲ. ಈ ವಿಷಯದಲ್ಲಿ ಬಹಳ ಕಡೆ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ಗಳಲ್ಲಿ ಚರ್ಚೆಯಾಗುತ್ತಿದೆ. ಇವರು ವಿಫಲರಾಗಿದ್ದಾರೆ, ಇದಕ್ಕೆ ಕಾರಣವನ್ನು ಬಹಳ ಗಂಭೀರವಾಗಿ ವಿಚಾರಮಾಡಬೇಕು. ಒಟ್ಟಿನ ಮೇಲೆ ವ್ಯವಸಾಯದ ಬದಲಾವಣೆ ಬಗ್ಗೆ ಗಂಭೀರವಾದ ರೀತಿನೀತಿಯನ್ನು ಹಾಕಬೇಕು. ಇಲ್ಲದಿದ್ದರೆ ದೊಡ್ಡ ಗಂಡಾಂತರವಾದೀತು ಎಂದು ಇಲಾಖೆ ತಿಳಿಯಬೇಕಾಗಿದೆ.

4-30 P.M.

ಲ್ಯಾಂಡ್ ಮಾರ್ಟಗೇಜ್ ಬ್ಯಾಂಕುಗಳ ಕಾರ್ಯಕ್ಷೇತ್ರವನ್ನು ವಿಸ್ತಾರ ಮಾಡಬೇಕು. ವಿಸ್ತಾರ ಮಾಡಿ, ಲ್ಯಾಂಡ್ ಮಾರ್ಟಗೇಜ್ ಬ್ಯಾಂಕುಗಳ ಮೂಲಕವಾಗಿ ಹಳ್ಳಿಯ ಜಮೀನುಗಳು ಉತ್ತಮಗೊಳ್ಳುವುದಕ್ಕೆ ಸರಿಯಾದಂಥ ವ್ಯವಸ್ಥೆಯನ್ನು ಮಾಡುವುದು ಅವಶ್ಯಕ.

ರಾಷ್ಟ್ರೀಕರಣ ಮತ್ತು ಸಮಾಜವಾದ ಬಗ್ಗೆ ನಮ್ಮ ಸ್ನೇಹಿತರು ಎಷ್ಟೋ ಜನ ಮಾತನಾಡಿದ್ದಾರೆ. ವಿದ್ಯಾಭ್ಯಾಸದೊಳಗೆ, ಮುಖ್ಯವಾಗಿ ಉಚ್ಚಶಿಕ್ಷಣದ ಸಹಾ ರಾಷ್ಟ್ರೀಕರಣವಾದರೆ ನಮ್ಮ ಸಹಕಾರ ಹೆಚ್ಚು ಯಶಸ್ವಿಯಾಗುವ ಸಂಭವವಿದೆ. ಏತಕ್ಕೆಂದರೆ ಒಬ್ಬ ವೈದ್ಯ (ಡಾಕ್ಟರ್) ನಾಗಬೇಕಾದರೆ, ತಾಂತ್ರಿಕಜ್ಞನಾಗಬೇಕಾದರೆ 20-25-30 ಸಾವಿರ ರೂಪಾಯಿ ಖರ್ಚುಮಾಡಿ ಡಾಕ್ಟರಾಗಿ ಕಾಲೇಜಿನಿಂದ ಹೊರಗೆ ಬಂದ ಸಮಯದಲ್ಲಿ ಹಳ್ಳಿಗಳಲ್ಲಿ ಕೆಲಸಮಾಡಲು ಒಳಗಾಗುವ ಸಂಭವವಿದೆ. ಅವನು 25 ಸಾವಿರ ರೂಪಾಯಿ ಹೊರೆ ಹೊತ್ತು ಬಂದಿರುತ್ತಾನೆ. ಅವನಿಗೆ ಇಲ್ಲಿ ಹಣ ದುಡಿಯುವ ಕಡೆ ಹೆಚ್ಚು ಗಮನವಿರುತ್ತದೆ. 25 ಸಾವಿರ ರೂಪಾಯಿಗೆ ಬಡ್ಡಿ ಒಂದು ವರ್ಷಕ್ಕೆ ಎಷ್ಟು ಆಗುತ್ತದೆ, 6 ಪರ್ಸೆಂಟಿನಂತೆ ? ಆ ಮನುಷ್ಯ 25 ಸಾವಿರ ರೂಪಾಯಿ ಸಾಲ ತೀರಿಸಿ, ತನ್ನ ಹಿಂದಿನ ಸ್ಥಿತಿಯನ್ನು ಪಡೆಯಬೇಕಾದರೆ, ನಮ್ಮ ರಕ್ತ ಹೀರಲಿಕ್ಕೆ ಶುರುಮಾಡುತ್ತಾನೆ. ಆ ಡಾಕ್ಟರು ನಿರ್ವಾಹವಿಲ್ಲದೆ ಈ ರೀತಿ ಕ್ರಮವನ್ನು ಅನುಸರಿಸಬೇಕಾಗಿದೆ. ಈ ಕಾರಣಕ್ಕಾಗಿ ಉಚ್ಚ ಶಿಕ್ಷಣ ರಾಷ್ಟ್ರೀಕರಣವಾದರೆ, 25 ಸಾವಿರ ರೂಪಾಯಿ ಭಾರ ಡಾಕ್ಟರ ಮೇಲೆ ಇರುವುದಿಲ್ಲ. ಇಂಥ ಉಚ್ಚ ಶಿಕ್ಷಣ ಪ್ರಜೆಗಳ ದೇಹಾರೋಗ್ಯಕ್ಕೆ ಸಂಬಂಧಪಟ್ಟದ್ದು. ಇದರ ಮತ್ತು ತಾಂತ್ರಿಕ ಶಿಕ್ಷಣದ ಬಗ್ಗೆ ಸರ್ಕಾರದವರು ಆಯಾ ವಿದ್ಯಾರ್ಥಿಗಳಿಗೆ ಹೆಚ್ಚಿನ ವೆಚ್ಚ ಬೀಳದಂತೆ ಏನಾದರೂ ಯೋಜನೆ ಮಾಡುವುದು ಅವಶ್ಯ.

ಇದರ ಹೊರತಾಗಿ, ಈಗ ಹೊಸ ತೆರಿಗೆಗಳು ಯಾವರೀತಿ ಬರುತ್ತಿವೆ ಅನ್ನುವುದರ ಬಗ್ಗೆ ಹೇಳಬೇಕಾಗಿದೆ. ರೈತರ ಮೇಲೆ, ಪುನರ್ವಿಮರ್ಶಿತ ಕಂದಾಯ ಯೋಜನೆಯಿಂದ ಮೂರೂವರೆ ಕೋಟಿ ಮೇಲೆ ಬೀಳಲಿದೆ. ಇದರ ಪ್ರತಿಕ್ರಿಯೆ ಏನು, ಇದು ಯಾವರೀತಿ ಹಂಚಲ್ಪಡುತ್ತದೆ ಎಂದು ಹೇಳುವ ತತ್ಪೂರ್ವದಲ್ಲಿ ಸರ್ಕಾರಕ್ಕೆ ಒಂದು ಪ್ರಶ್ನೆ ಕೇಳುತ್ತೇನೆ. ಭೂಸುಧಾರಣೆ ಇಲ್ಲದ ಹೊರತು ಈ ಕಂದಾಯ ವಿಮರ್ಶೆ ಮಾಡುತ್ತೇವೆನ್ನುವುದು ಅರ್ಥವಿಲ್ಲದ ಮಾತು. ಭೂಸುಧಾರಣೆ ಮೊದಲು ತರಲಿ. ಸಂವಿಧಾನದ 17ನೇ ಕಲಮು ತಿದ್ದುಪಡಿಯಾಗಬೇಕೆಂದು ಹೇಳುತ್ತಿದ್ದರು ; 17ನೆ ಕಲಮು ತಿದ್ದುಪಡಿಯಾಗಿ ಒಂದು ವರ್ಷ ಆಗಿಹೋಯಿತು. ಆದರೆ ಇವತ್ತಿನ ತನಕ ಇಲ್ಲಿ ಏಕೆ ತಿದ್ದುಪಡಿ ತರಲಿಲ್ಲ ಎಂಬುದಕ್ಕೆ ಉತ್ತರ ಹೇಳುತ್ತೀರ ? ಮೊನ್ನೆ ಹೇಳಿದರು; ಜುಲೈ 1ನೆಯ ತಾರೀಖಿನಿಂದ ಜಾರಿಗೆ ತರುತ್ತೇವೆಂದು ; ಅದು ನಿಶ್ಚಿತವೊ ? ಇದು ಗಣಪತಿ ಮದುವೆ ಹಾಗೆ ಆಗಿದೆ. ಇದು ಮತ್ತೆ ಮುಂದಕ್ಕೆ ಹೋಗುತ್ತೋ, ಗೊತ್ತಿಲ್ಲ. ಇಂಥ ವಿಧಾನಗಳು ಸರಿಯಲ್ಲ. ವ್ಯವಸಾಯದ ಉತ್ಪತ್ತಿ

(ಶ್ರೀ ಎ. ಜೆ. ದೊಡ್ಡಮೇಟಿ)

ಮತ್ತು ರಾಷ್ಟ್ರದ ಸಂಪನ್ಮೂಲಗಳನ್ನು ಹೆಚ್ಚುಮಾಡಬೇಕು. ಆಗ ತೆರಿಗೆ ಸರ್ಕಾರಕ್ಕೆ ಹೆಚ್ಚು ಪ್ರಮಾಣದಲ್ಲಿ ಬರುತ್ತದೆ. ರಾಷ್ಟ್ರದ ಉತ್ಪತ್ತಿ, ಮುಖ್ಯವಾಗಿ ಬೇಸಾಯ ಮೂಲಕ ಬರುವ ಉತ್ಪತ್ತಿ ಹೆಚ್ಚಾಗಬೇಕು ಎಂಬ ಮೂಲಭೂತವಾದ ತತ್ವವನ್ನು ಅವರು ಮರೆಯಬಾರದು. ಈ ದೃಷ್ಟಿಯಿಂದ ಇವತ್ತು ಕ್ರಮಗಳನ್ನು ಅವರು ಅನುಸರಿಸಬೇಕು. ಹೊಸ ಕರಗಳಿಗೆ, ಕೊರತೆಯನ್ನು ತುಂಬಿಕೊಳ್ಳುವುದಕ್ಕೆ, ಅನೇಕ ಕ್ರಮಗಳನ್ನು ಅನುಸರಿಸಬಹುದು. ಕರ್ಮದ ಭಾವನೆಯಿಂದ ವಿಚಾರಮಾಡಬೇಕು. ಈ ಸಂಬಂಧದಲ್ಲಿ ಒಂದು ವಿಚಾರ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಪಾನನಿರೋಧ ನೀತಿ ನಮ್ಮ ದೇಶದಲ್ಲಿದೆ. ಎಲ್ಲಾ ಜಿಲ್ಲೆಗಳಲ್ಲೂ ಒಂದೇ ಪದ್ಧತಿ ತಂದು, ವ್ಯವಸ್ಥಿತಿ ರೀತಿಯಲ್ಲಿ ಒಂದು ಏನಾದರೂ ಮಾಡಬೇಕು. ಇಲ್ಲದಿದ್ದರೆ, ಈ ನೀತಿಯನ್ನು ಪುನರ್ವಿಮರ್ಶಿಸಿ ಒಂದು ಹೆಚ್ಚಿನ ರೀತಿಯಲ್ಲಿ ಉತ್ಪತ್ತಿ ಬರುವ ಹಾಗೆ ಮಾಡಬೇಕು. ಇದನ್ನು ನಮ್ಮ ಸಂಪನ್ಮೂಲ ದೃಷ್ಟಿಯಿಂದ ವಿಚಾರ ಮಾಡಬೇಕು. ಕಳ್ಳಪೇಟೆಯಿಂದ ಮೋಸಗಾರಿಕೆ ಹಣ ಗಳಿಸುತ್ತಿದ್ದಾರೆ. ಕಳ್ಳಪೇಟೆಯಿಂದ ಹಣ ಸಂಪಾದಿಸುವುದು ನಮ್ಮ ದೇಶದಲ್ಲಿ ಸಾಕಷ್ಟು ಇದೆ ಅನ್ನುವುದು ಜನಜನಿತವಾದ ವಿಷಯ. ನಮ್ಮ ರಾಜ್ಯದಲ್ಲಿಯೂ ಇದೆ ಅನ್ನುವುದು ಮೊನ್ನೆ ಶೋಧನೆ ನಡೆಸಿದ ವರದಿಗಳಿಂದ ಗೊತ್ತಾಗಿದೆ. ಇಲ್ಲಿಯೂ ಬಚ್ಚಿಟ್ಟ ಹಣ ಸಿಕ್ಕಿದೆ ಎಂದು ಹೇಳುತ್ತಾರೆ. ನಮ್ಮ ರಾಜ್ಯದಲ್ಲಿ ಭಾರಿಭಾರಿ ನಗರಗಳಲ್ಲಿ ಇಂಥ ಬಚ್ಚಿಟ್ಟ ಹಣ ಸಿಕ್ಕಿರುವ ಉದಾಹರಣೆಗಳಿವೆ. ಈ ಹಣದಲ್ಲಿ ಕೇಂದ್ರಕ್ಕೆ ಎಷ್ಟರಮಟ್ಟಿಗೆ ಹೋಗುತ್ತದೆ ? ಅದರಲ್ಲಿ ನಮ್ಮ ರಾಜ್ಯಕ್ಕೂ ಏನಾದರೂ ಬರುತ್ತದೆಯೋ ಅನ್ನುವುದನ್ನು ಅವರು ಆಲೋಚನೆ ಮಾಡಬೇಕು. ಈ ಹಣದೊಳಗೆ ನಮಗೆ ಏನಾದರೂ ಅಂಶ ದೊರೆಯುವಂತೆ ಮಾಡಿಕೊಂಡರೆ, ಖೋತಾ ನಮ್ಮ ರಾಜ್ಯದ ಬಜೆಟ್ಟಿನಲ್ಲಿ ಬೀಳಲಿಕ್ಕಿಲ್ಲ, ಕಳ್ಳ ಪೇಟೆಯಲ್ಲಿ ಹೆಚ್ಚು ದುಡ್ಡು ತುಂಬಿದೆ.

ಒಬ್ಬ ಮಾನ್ಯ ಸದಸ್ಯರು.—ನಮ್ಮ ಸಂಸ್ಥಾನದಲ್ಲಿ ಉಂಟೋ ? ಯಾವ ಪಕ್ಷದಲ್ಲಿ ?

ಶ್ರೀ ಎ. ಜೆ. ದೊಡ್ಡಮೇಟಿ.—ಸಾಕಷ್ಟು ಉಂಟು. ನಮ್ಮ ಸಂಸ್ಥಾನದಲ್ಲಿಯೂ ಉಂಟು. ಎಲ್ಲ ಪಕ್ಷಗಳಲ್ಲಿಯೂ ಉಂಟು. ಎಲ್ಲ ಜನಗಳಲ್ಲಿಯೂ ಉಂಟು. ಅದು ಎಲ್ಲಾ ಒಂದೇ ಪಕ್ಷದಲ್ಲಿ ಇದೆಯೆಂದು ತಿಳಿದುಕೊಳ್ಳಬೇಡಿ. ಈ ಬಗ್ಗೆ ಸಾಕಷ್ಟು ಕಠೋರ ನೀತಿ ಅನುಸರಿಸಿ, ನಿರ್ದಾಕ್ಷಿಣ್ಯದಿಂದ ಎಲ್ಲೆಲ್ಲಿ ಕಳ್ಳಪೇಟೆಯಲ್ಲಿ ಕೆಟ್ಟ ರೀತಿಯಲ್ಲಿ ಗಳಿಸಿದ ದುಡ್ಡಿದೆಯೋ ಅದನ್ನು ಹೊರಗೆ ತೆಗೆಯುವುದಕ್ಕೆ ಸರ್ಕಾರ ಪ್ರಯತ್ನ ಪಟ್ಟರೆ ಅನೇಕ ತೆರಿಗೆಯ ಭಾರ ಕಡಿಮೆಯಾಗುವ ಸಂಭವವಿದೆ.

ನಾನು ಹಿಂದೆಯೂ ಹೇಳಿದ್ದೇನೆ, ಮತ್ತೆಯೂ ಹೇಳುತ್ತೇನೆ. ಹಿಂದಕ್ಕೆ ಒಮ್ಮೆ ಸ್ಥಿರ ಆಸ್ತಿ (ಇಮ್ಮೂವಬಲ್ ಪ್ರಾಪರ್ಟಿ) ಮೇಲೆ ಕರ ಹಾಕುವ ಒಂದು ಬಿಲ್ಲು ಎಲ್ಲಾ ಆಗಿ, ಕಡೆಯಲ್ಲಿ ಮಾಡದೆ ನಿಲ್ಲಿಸಲಾಯಿತು. ಏಕೋ, ಕಾರಣ ತಿಳಿಯಲಿಲ್ಲ. ಇವತ್ತು ಪ್ರತ್ಯಕ್ಷ ರೈತನ ಮೇಲೆ ಬೀಳತಕ್ಕ ತೆರಿಗೆಗಳನ್ನು, ಕಂದಾಯವನ್ನು ಪುನರ್ವಿಮರ್ಶೆ ಮಾಡಬೇಕು. ಇದು ಅನೇಕ ಶ್ರೀಮಂತರ ಮೇಲೆ, ತೊಡ್ಡದೊಡ್ಡವರು ಲಕ್ಷಲಕ್ಷಗಟ್ಲೆ ಸಂಪಾದಿಸಿ, ಹೆಚ್ಚು ಹೆಚ್ಚಾಗಿ ಕಟ್ಟಡಗಳನ್ನು ಕಟ್ಟಿಸಿ ವೈಭವದಿಂದ ಇರತಕ್ಕಂಥ ಶ್ರೀಮಂತರ ಮೇಲೆ ಬೀಳತಕ್ಕ ಕರ. ಅದು ಸ್ಥಿರ ಆಸ್ತಿಮೇಲೆ ಬೀಳತಕ್ಕಂಥ ಕರ ; ಅದು ನಗರವಾಸಿಗಳ ಮೇಲೆ ಬೀಳುವಂಥಾದ್ದು ; ಆದ್ದರಿಂದ ಆ ಟ್ಯಾಕ್ಸನ್ನು ಮಾಡಲಿಕ್ಕೆ ನಮ್ಮ ಸರ್ಕಾರ ಭಯಪಡಬಹುದು ಎನ್ನುವ ಭಾವನೆ ಇದೆ. ಇವತ್ತು ಸ್ಥಿರ ಆಸ್ತಿ ಮೇಲೆ ಹಾಕಬೇಕೆಂದಿರುವ ಕರವನ್ನು ರದ್ದು ಮಾಡಬಾರದು, ಮಸೂದೆಯನ್ನು ಕ್ರಾಸ್ ಮಾಡಬಾರದು. ಅದನ್ನು ಹಾಕವುದಕ್ಕೆ ಕ್ರಮ ತೆಗೆದುಕೊಳ್ಳಬೇಕು.

ಕಟ್ಟಡಕರ ಎಂದು ಮಾಡಿದರು. ಅದು ಹೈಕೋರ್ಟಿಗೆ ಹೋದ ಕೂಡಲೆ ಅದರ ಅವತಾರ ಸಮಾಪ್ತಿಯಾಯಿತು. ಮತ್ತೆ ಸರ್ಕಾರದವರು ಸುಪ್ರೀಂ ಕೋರ್ಟಿಗೆ ಹೋಗಿದ್ದಾರೆ. ಈ ಸ್ಥಿರ ಆಸ್ತಿ ಕರ ಬಂದರೆ ಅವರಿಗೆ ಮೂರೂವರೆ ಕೋಟಿ ರೂಪಾಯಿ ತನಕ ಬರುತ್ತದೆ. ಅದರಿಂದ ಸಂಪನ್ಮೂಲಗಳು ಹೆಚ್ಚುವ ಸಂಭವವಿದೆ. ಅದು ಪ್ರತ್ಯಕ್ಷ ಶ್ರೀಮಂತರ ಮೇಲೆ ಬೀಳುವುವು, ಬಡವರ ಮೇಲೆ ಬೀಳುವ ಕರವಲ್ಲ. ಅಂಥ ಕರವನ್ನು ಉಪಯೋಗಿಸಿಕೊಂಡು, ಅದನ್ನು ನಿರ್ದಾಕ್ಷಿಣ್ಯವಾಗಿ ಜಾರಿಗೆ ಕೊಡುವ ಕ್ರಮವನ್ನು ತರಬೇಕೆಂದು ಸ್ಪಷ್ಟವಾದ ಸಲಹೆ ಕೊಡುವುದಕ್ಕೆ ಪ್ರಯತ್ನ ಪಡುತ್ತೇನೆ.

ಈ ರೀತಿಯಾಗಿ ವಿಚಾರಮಾಡುವ ಹೊತ್ತಿಗೆ, ಸರ್ಕಾರದವರು ನಮ್ಮ ಸಂಪನ್ಮೂಲಗಳನ್ನು ಬೆಳೆಸುವುದಕ್ಕೆ 4ನೆಯ ಯೋಜನೆಯನ್ನು ಒಳ್ಳೆಯ ರೀತಿಯಿಂದ ಯಶಸ್ವಿಗೊಳಿಸಬೇಕು. ಮಲಪ್ರಭಾ ಮುಂತಾದ ಯೋಜನೆಗಳಿಗೆ ಈಗ ಸಾಕಷ್ಟು ಹಣವನ್ನು ಒದಗಿಸಿಲ್ಲ. ಹೀಗಾದರೆ ನಾಲ್ಕನೆಯ ಯೋಜನೆಯೊಳಗೆ ಅದು ಎಷ್ಟರ ಮಟ್ಟಿಗೆ ಮುಂದುವರಿಯುತ್ತದೆ ? ಈ ವರ್ಷ ಐವತ್ತು ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಅದು ಮಲಪ್ರಭಾ ಯೋಜನೆಗೆ ಏನೂ ಸಾಲದು ; ಕಟ್ಟಡಕ್ಕೆ ಸಾಕಾಗುವುದಿಲ್ಲ, ಈ ಪ್ರಕಾರ ಹೋದರೆ, ಇನ್ನು 10 ವರ್ಷದ ಮೇಲೆ ಮಲಪ್ರಭಾ ಮುಗಿಯಬಹುದು. ಇದೇ ರೀತಿಯಿಂದ ಉಳಿದ ಯೋಜನೆಗಳೂ ಇರಬಹುದು. ನಿರ್ದಯದಿಂದ ಶ್ರೀಮಂತರನ್ನು ಕೆಳಗೆ

ಇಳಿಸದೆ ಹೋದರೆ ನಮ್ಮ ದೇಶದ ಕಲ್ಯಾಣವಾಗುವುದಿಲ್ಲ; ನಿಜವಾದ ಸಮಾಜ ಸುಧಾರಣೆ ಶಕ್ಯವಾಗುವುದಿಲ್ಲ. ಸಮಾಜವಾದದ ಸಮಾಜವನ್ನು ಸೃಷ್ಟಿಮಾಡುವ ದೃಷ್ಟಿಯಿಂದ ಆಲೋಚನೆ ಮಾಡಬೇಕು.

ಇನ್ನು ಕೊನೆಯದಾಗಿ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮ ಹಣಕಾಸಿನ ಸಚಿವರ ಭಾಷಣವನ್ನು ಇಂಗ್ಲೀಷ್‌ನಲ್ಲಿ ಓದಿದೆ. ಅವರ ಕನ್ನಡದ ಭಾಷಣವನ್ನು ಪೂರ್ತಿ ಎರಡು ಸಲ ಓದಿದೆ, ಅದು ಸುಂದರವಾದ ಭಾಷೆಯಲ್ಲಿ ಬರೆಯಲ್ಪಟ್ಟಿದೆ. ಅವರು ಅದನ್ನು ಓದಲಿಲ್ಲ. ಇಂಥ ಸುಂದರವಾದ ಭಾಷೆಯಲ್ಲಿ ಸ್ವಭಾಷೆಯಲ್ಲಿ ಇರುವ ಬಜೆಟ್ ಭಾಷಣವನ್ನು ಓದುವುದು ಬಿಟ್ಟು ಅಂಗ್ರೇಜಿ ಭಾಷೆಯೊಳಗಿರುವ ಬಜೆಟ್ ಸ್ಪೀಚನ್ನು ಓದಿದ್ದು ಎಷ್ಟರಮಟ್ಟಿಗೆ ಸರಿಯೋ ಏನೋ ವಿಚಾರ ಮಾಡಬೇಕು. ಮುಂದಿನ ಸಲವಾದರೂ ದಯೆಯಿಟ್ಟು ಶ್ರೀ ಜತ್ತಿಯವರು ಓದುವಾಗ ಕನ್ನಡ ಭಾಷೆಯ ಪ್ರತಿಯನ್ನೇ ಉಪಯೋಗಿಸಬೇಕು, ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಮಾತನಾಡಲು ಇಷ್ಟು ಅವಧಿ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಟಿ. ಎನ್. ಮಾದಪ್ಪ ಗೌಡ (ನಾಗಮಂಗಲ).—ಸ್ವಾಮಿ, ಇಲ್ಲಿಯವರೆಗೆ ನನ್ನ ಮಾನ್ಯ ಮಿತ್ರರುಗಳು ಅನೇಕರು ಸೂಚಿಸಿದಂತೆ ನಾವು ಯಾರಿಗೆ ನಮ್ಮ ಕಷ್ಟ ಸುಖಗಳನ್ನು ಹೇಳಬೇಕೋ ಮತ್ತು ಈ ಬಜೆಟ್ಟಿನ ಮೇಲೆ ವ್ಯಾಖ್ಯಾನ ಮಾಡಬೇಕೋ, ಬೇಡವೋ ಗೊತ್ತಾಗುತ್ತಿಲ್ಲ. ಇಲ್ಲಿ ಈಗ ಒಬ್ಬರು ಡೆಪ್ಯೂಟಿ ಮಿನಿಸ್ಟರು ಶ್ರೀ ಅಬ್ದುಲ್ ಗಫಾರ್ ಸಾಹೇಬರು ಒಬ್ಬರನ್ನು ಬಿಟ್ಟರೆ ಬಾಕಿ ಮಂತ್ರಿಗಳು ಎಲ್ಲಿ ಹೋಗಿದ್ದಾರೋ ಏನೋ ನಮಗೆ ಗೊತ್ತಾಗುತ್ತಿಲ್ಲ. ತಾವು, ನೀವು ಮಾತನಾಡಬೇಕೆಂದು ಅಪ್ಪಣೆ ಕೊಡಿಸಿದಿರಿ. ನಾವು ಮಾಡಿದ ಭಾಷಣದ ಪ್ರತಿಗಳನ್ನಾದರೂ ಸಂಬಂಧಪಟ್ಟ ಮಂತ್ರಿಗಳು ಓದಿ ನೋಡುತ್ತಾರೋ ಇಲ್ಲವೋ ಗೊತ್ತಿಲ್ಲ. ಅಂತೂ ನಾವು ಹೇಳುವುದೆಲ್ಲಾ ಬರೀ ಅರಣ್ಯ ರೋದನವಾಗುತ್ತಿದೆ ಎಂದು ನನಗೆ ಭಾಸವಾಗುತ್ತದೆ. ತಾವು ಮಾತನಾಡಬೇಕೆಂದು ಅಪ್ಪಣೆ ಕೊಡಿಸಿರುವುದರಿಂದ ನನಗೆ ಕೊಟ್ಟಿರುವ ಅಲ್ಪ ಕಾಲಾವಧಿಯಲ್ಲಿ ಎರಡು ಮೂರು ವಿಚಾರಗಳ ಬಗ್ಗೆ ಇಲ್ಲಿ ನಾನು ಮಾತನಾಡಲು ಇಷ್ಟಪಡುತ್ತೇನೆ.

ಇದರಲ್ಲಿ ಮೊದಲನೆಯದಾಗಿ ಆಹಾರ ಪರಿಸ್ಥಿತಿಯ ವಿಚಾರದಲ್ಲಿ ಹೇಳುವುದಾದರೆ ದೇಶದಲ್ಲಿ ಆಹಾರದ ಹಾಹಾಕಾರದ ಪರಿಸ್ಥಿತಿ ಏನಿತ್ತು ಎನ್ನುವುದು ಎಲ್ಲರಿಗೂ ಗೊತ್ತಿದೆ. ಈಗಾಗಲೇ ಸುಗ್ಗಿ ಕಾಲಕಳೆದು ದವಸ ಬಂದದ್ದು ಹೊರಕ್ಕೆ ಸಾಗಿ ಹೋಗುತ್ತಿದೆ. ಸರಕಾರದವರು ಬೇಕಾದಷ್ಟು ದವಸ ಧಾನ್ಯಗಳನ್ನು ಕೋಟಿಗಟ್ಟಲೆ ಖರ್ಚು ಮಾಡಿ ದಾಸ್ತಾನು ಮಾಡಿದ್ದೇವೆ ಎಂದು ಹೇಳಿದ್ದಾರೆ. ಈಗ ಮಿಲ್ಲುಗಳಲ್ಲಿ ಸ್ಟಾಕು ಮಾಡಿರುವಂತಹ ಅಕ್ಕಿಯ ಕೆಲವು ಸ್ಯಾಂಪಲ್ಲುಗಳನ್ನು ಮಾನ್ಯ ಮಂತ್ರಿಗಳ ಕಡೆಗೆ ಕಳುಹಿಸಿ ಕೊಡುತ್ತೇನೆ. ಅದನ್ನು ಅವರು ನೋಡಲಿ ಎಂದು. ಇದನ್ನು ನೋಡಿದರೆ ಜನರೇ ಆಗಲಿ ಇದನ್ನು ತಿನ್ನುವುದಕ್ಕೆ ಸಾಧ್ಯವೇ ಎನ್ನುವುದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ಎಮ್ಮೆಗಳಿಗೂ ಅಥವಾ ದನಗಳಿಗೂ ಹಾಕಲು ಸಾಧ್ಯವಿಲ್ಲದಂತಹ ಧಾನ್ಯಗಳನ್ನು ಜನ ತಿನ್ನಬೇಕೆಂದು ಹೇಳುತ್ತಿರುವ ವೆರೈಟಿಗಳನ್ನು ತಾವು ನೋಡಬೇಕೆಂದು ಇಲ್ಲಿ ತಮ್ಮ ಕಡೆಗೆ ಕಳುಹಿಸುತ್ತೇನೆ. ಇದನ್ನು ಜನ ತೆಗೆದುಕೊಂಡು ಹೋಗಿ ಹೇಗೆ ಜೀವನ ಮಾಡಬೇಕೋ ನನಗೆ ಕಾಣುತ್ತಿಲ್ಲ. ಈ ದೇಶದಲ್ಲೇನೋ ವ್ಯವಸಾಯ ಮಾಡುವ ರೈತರಿಗಾಗಿ ಬೇಕಾದಷ್ಟು ಹಣವನ್ನು ಖರ್ಚು ಮಾಡುತ್ತಿದ್ದೇವೆ ಎಂದು ನಮ್ಮ ಮಾನ್ಯ ಅರ್ಥ ಮಂತ್ರಿಗಳು ಇಲ್ಲಿ ಹೇಳುತ್ತಿದ್ದಾರೆ. ಖರ್ಚು ಮಾಡತಕ್ಕ ವಿಧ ನೋಡಿದರೆ ಬರೀ ಅಧಿಕಾರಿಗಳ ಸಂಬಳ ಸಾರಿಗೆಗಳಿಗೋಸ್ಕರ ಎಂದು ಕಾಣುತ್ತಿದೆ. ಇಲ್ಲಿ ಸೂಟು ಬೂಟು ಹಾಕಿಕೊಂಡು ಬರುವ ಜನ ಯಾವ ಉದ್ದೇಶಕ್ಕಾಗಿ ಎಂದು ನೇಮಿಸಿದ್ದೀರೋ ಅದಕ್ಕನುಸಾರವಾಗಿ ಬೇಸಾಯ ಮಾಡುವವರಿಗೆ ಅವನ ಪ್ರದೇಶದಲ್ಲಿ ಮಿಳಿತದಿಂದ ಕೆಲಸಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನು ತಾವು ಆಲೋಚನೆ ಮಾಡಬೇಕಾಗಿದೆ. ಒಂದೊಂದು ಜಿಲ್ಲೆಯಲ್ಲೂ ಜಿಲ್ಲಾಧಿಕಾರಿಗಳೆಂದು ಇದ್ದಾರೆ. ಇವರ ಕೈ ಕೆಳಗೆ ಐದಾರು ಜನರು ಅಸಿಸ್ಟೆಂಟು ಕಮಿಷನರುಗಳೆನ್ನುವ ಅಧಿಕಾರಿಗಳಿದ್ದಾರೆ. ಇವರೆಲ್ಲರೂ ಆಯಾ ಜಿಲ್ಲೆಯಲ್ಲಿ ಪ್ರವಾಸ ಮಾಡಿ ಅಲ್ಲಿರುವ ಜನತೆಗಳ ಕಷ್ಟಸುಖಗಳನ್ನು ತಿಳಿದುಕೊಂಡು ಅಲ್ಲಿ ಕಂಡುಬರತಕ್ಕ ನ್ಯೂನತೆಗಳನ್ನು ತಿದ್ದಲು ಪ್ರಯತ್ನ ಮಾಡಬೇಕೆಂದು ಇದ್ದರೂ ಕೂಡ ಈ ಅಧಿಕಾರಿಗಳು ಯಾವಾಗಲೋ ಒಂದು ಸಾರಿ ಟಿ. ಬಿ. ಗೆ ಬಂದು ಅಲ್ಲಿರುವ ತಾಲ್ಲೂಕು ಆಫೀಸಿಗೆ ಹೋಗಿ ಗುಮಾಸ್ತರುಗಳ ಬಳಿ ಇರುವ ಕಾಗದಗಳು ಎಷ್ಟು ದಿನಗಳಿಂದ ಕೊಳೆಯುತ್ತಿವೆ ಮತ್ತು ಅದಕ್ಕೆ ಕಾರಣವೇನು ಎನ್ನುವುದನ್ನೊಂದನ್ನೂ ನೋಡದೆ ಸುಮ್ಮನೆ ಪ್ರವಾಸ ಹೋಗಿದ್ದೆ ಎಂದು ಡೈರಿ ಬರೆದು ಬಂದು ಬಿಡುತ್ತಾರೆ. ಒಂದೊಂದು ತಾಲ್ಲೂಕು ಆಫೀಸಿನಲ್ಲಿಯೂ ಕೂಡ ಹೋಗಿ ನೋಡಿದರೆ ಜನತೆಯ ಕಾಗದಗಳು ಎಷ್ಟೋ ಕಾಲದಿಂದಲೂ ಫೈಸಲಾಗದೆ ಹಾಗೇ ಉಳಿದಿವೆ. ಇದಕ್ಕೆ ಕಾರಣವೇನು ಎನ್ನುವುದನ್ನು ಮೇಲಧಿಕಾರಿಗಳು ಹೋಗಿ ತನಿಖೆ ಮಾಡಿಕೊಂಡು ಬರುವುದಿಲ್ಲ. ಹೀಗಾಗಿ ಎಷ್ಟೋ ಫೈಲುಗಳು ಹಾಗೇ ಇತ್ಯರ್ಥವಾಗವೆ ಉಳಿದಿದೆ. ನಮ್ಮ ಭಾಗದಲ್ಲಿ ಪ್ಯಾಕೇಜು ಸ್ಕೀಮನ್ನು ಜಾರಿಗೆ ತರಬೇಕೆಂದು ಸರಕಾರದವರು ತಂದಿದ್ದಾರೆ. ಇದು ಜನತೆಗೆ ಬಹಳ ಅನುಕೂಲವಾಗಿದೆ. ಇದರ ಬಗ್ಗೆ ಸ್ಟ್ಯಾಟಿಸ್ಟಿಕ್ಸನ್ನು ಕಲೆಕ್ಟು

(ಶ್ರೀ ಟಿ. ಎನ್. ಮಾದಪ್ಪ ಗೌಡ)

ಮಾಡಬೇಕೆಂದು ಇಲ್ಲಿಗೆ ಅಧಿಕಾರಿಗಳು ಬರುತ್ತಾರೆ. ಅವರುಗಳು ಏನು ಮಾಡುತ್ತಾರೆಂದರೆ ಅಲ್ಲಿರುವ ಬಿ. ಡಿ. ಒ. ಆಫೀಸಿನಲ್ಲಿ ಏನು ಅಂಕೆ ಸಂಖ್ಯೆಗಳನ್ನು ಬರೆದಿರುತ್ತಾರೋ ಅದನ್ನು ನೋಡಿಕೊಂಡು ಬರೆದುಕೊಂಡು ಹೋಗಿ ಬಿಡುತ್ತಾರೆ. ಇದನ್ನು ಅವರುಗಳು ಗ್ರಾಮಗಳಲ್ಲಿ ಹೋಗಿ ನೋಡಿಕೊಂಡು ಲೆಕ್ಕವನ್ನು ಬರೆಯುತ್ತಿಲ್ಲ. ಆದರೆ ಇವೊತ್ತು ಈ ಪದ್ಧತಿ ರೈತನ ಒಳ್ಳೆಯ ತಿಳುವಳಿಕೆಯಿಂದಾಗಿ ಇಲ್ಲಿ ಸರಿಯಾಗಿ ನಡೆಯುತ್ತಿದೆಯೇ ವಿನಾ ಅಧಿಕಾರಿಗಳು ಯಾರೂ ಕೂಡ ಬಂದು ಇದರ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಕೊಡುತ್ತಿಲ್ಲ. ತಾಲ್ಲೂಕು ಬೋರ್ಡು ಆಫೀಸು ಇದೆ ಮತ್ತು ಬಿ. ಡಿ. ಒ. ಆಫೀಸು ಇದೆ. ಅವರು ಏನು ಆವರ ಆಫೀಸಿನಲ್ಲಿ ಬರೆದಿರುತ್ತಾರೋ ಆ ಅಂಕೆಗಳನ್ನು ಬರೆದುಕೊಂಡು ತಮ್ಮ ಡೈರಿಯನ್ನು ಬರೆದು ಹೋಗುತ್ತಾರೆ. ಹೀಗಾದರೆ ಆಹಾರವನ್ನು ಹೆಚ್ಚಾಗಿ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಮತ್ತು ಈ ವ್ಯವಸಾಯದ ಇಲಾಖೆಯಲ್ಲಿ ನೂರಾರು ಕೆಲಸಗಳು ಇನ್ನೂ ಖಾಲಿಯಾಗಿಯೇ ಇವೆ ಎಂದು ಕೇಳುತ್ತೇನೆ. ಇದು ನಮಗೆ ಒದಗಿಸಿರುವ ಸಿವಿಲ್ ಲಿಸ್ಟಿನಿಂದ ಕಂಡು ಬರುತ್ತಿದೆ. ಮೊನ್ನೆ ತಾನೆ ಹೈಕೋರ್ಟಿನಲ್ಲಿ ಒಂದು ರಿಟ್ಟು ಸರಕಾರದ ಒಂದು ಇಲಾಖೆಯ ಬಗ್ಗೆ ಬಂದಾಗ ಮಾನ್ಯ ನ್ಯಾಯಾಧೀಶರು ತೀರ್ಮಾನ ಕೊಡುವಾಗ ಕೆಲವು ಮಾತುಗಳನ್ನು ಹೇಳಿದ್ದಾರೆ. ಅದನ್ನು ಈ ಸಭೆಯಲ್ಲಿ ಓದಿ ಹೇಳುವುದಕ್ಕೆ ಅವಕಾಶ ಕೊಡಬೇಕೆಂದು ಬೇಡುತ್ತೇನೆ.

> "We have had occasion to deal with this state of affairs in the Agricultural Department in other writ petitions. Therein we were constrained to severely criticise the conduct of the Director of Agriculture. The facts of this case disclosed a serious state of affairs in that Department. There is need for an urgent and searching enquiry into the work of the Department. Otherwise, there is bound to be demoralisation and breakdown of discipline in that Department."

ಈ ಪ್ರಕಾರ ಆ ತೀರ್ಮಾನದಲ್ಲಿ ಹೈಕೋರ್ಟಿನ ನ್ಯಾಯಾಧೀಶರು ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದರ ಬಗ್ಗೆ ಸರಕಾರದ ರಿಯಾಕ್ಷನ್ನು ಏನು ?

ಶ್ರೀ ಟಿ. ಎನ್. ಮಾದಪ್ಪ ಗೌಡ.—ಮೊನ್ನೆ ತಾನೆ 90 ಜನ ಕೆಲಸದಲ್ಲಿದ್ದಂತಹವರನ್ನು ಕೆಲಸವಿಲ್ಲದ ಹಾಗೆ ಈ ಇಲಾಖೆಯಲ್ಲಿ ಮಾಡಿಬಿಟ್ಟಿದ್ದಾರೆ. ಅಗ್ರಿಕಲ್ಚರು ಗ್ರಾಜುಯೇಟುಗಳಾಗಿ ನಮ್ಮ ದೇಶದಲ್ಲಿ ಸುಮಾರು 300 ಜನರು ಆಗಿದ್ದಾರೆ. ಇವರುಗಳು ಸುಮಾರು ಮೂರು ನಾಲ್ಕು ವರ್ಷಗಳಿಂದಲೂ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಅಲ್ಲದೆ ಈ ಅಗ್ರಿಕಲ್ಚರು ಗ್ರಾಜುಯೇಟುಗಳಿಗಾಗಿ ಕೊಡುತ್ತಿರುವ ಸಂಬಳವೂ ಕೂಡ ಬಹು ಕಡಮೆ. ಮೇಲಾಗಿ ಈ ಅಗ್ರಿಕಲ್ಚರು ಇಲಾಖೆಯ ಡೈರೆಕ್ಟರು ಎಂದು ಇರುವ ಅಧಿಕಾರಿಗಳು ವ್ಯವಸಾಯದ ಕ್ಷೇತ್ರದಲ್ಲಿ ಏನು ಪರಿಣಾಮಕಾರಿಯಾದ ಕೆಲಸಗಳನ್ನು ಮಾಡಿದ್ದಾರೆ ಮತ್ತು ಏನೇನು ರೀಸರ್ಚು ಕೆಲಸಗಳನ್ನು ಮಾಡಿ ಜನಕ್ಕೆ ಸಹಾಯ ಮಾಡಿದ್ದಾರೆ ? ಒಂದಕ್ಕೊಂದು ಸಂಬಂಧವಿಲ್ಲದಂತೆ ಇಲ್ಲಿರುವ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಇವರಿಂದ ನಮ್ಮ ದೇಶದ ಜನಕ್ಕೆ ಅನುಕೂಲವಾಗುತ್ತಿಲ್ಲ. ನಮ್ಮ ವ್ಯವಸಾಯ ಕ್ಷೇತ್ರ ಉತ್ತಮವಾಗಬೇಕು ಮತ್ತು ಒಳ್ಳೆಯ ಕೆಲಸವಾಗಬೇಕು ಎನ್ನುವುದು ಸರ್ಕಾರಕ್ಕಿದ್ದರೆ ಇಂತಹ ಅಧಿಕಾರಿಗಳಿದ್ದರೆ ಆಗುತ್ತದೆಯೇ ಎನ್ನುವುದನ್ನೂ ನಾವು ಯೋಚನೆ ಮಾಡಬೇಕಾಗಿದೆ. ಈ ವ್ಯವಸಾಯದ ಇಲಾಖೆಯ ಡೈರೆಕ್ಟರ್‌ರವರನ್ನು ಈ ಕೂಡಲೇ ಕೆಲಸದಿಂದ ಡಿಸ್‌ಮಿಸ್ ಮಾಡಿ. ಹಾಗೆ ಡಿಸ್‌ಮಿಸ್ ಮಾಡುವುದಕ್ಕೆ ಆಗದೇಹೋದರೆ ಅವರಿಗೆ ಇನ್ನೆಷ್ಟು ಸರ್ವಿಸ್ಸು ಇದೆಯೋ ಅದಕ್ಕೆರಡರಷ್ಟು ಗ್ರಾಚ್ಯುಯಿಟಿಯನ್ನಾದರೂ ಕೊಟ್ಟು ಅವರನ್ನು ಮನೆಗೆ ಕಳುಹಿಸಿಬಿಡಿ. ಹಾಗೆ ಮಾಡದೇ ಹೋದರೆ ಈ ಇಲಾಖೆಯಲ್ಲಿ ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ, ಎಂದು ಇದನ್ನು ತಮ್ಮ ಮೂಲಕ ಸರಕಾರಕ್ಕೆ ಇಲ್ಲಿ ಹೇಳಬಯಸುತ್ತೇನೆ.

ಸ್ವಾಮೀ, ವಿದ್ಯಾಭ್ಯಾಸಕ್ಕಾಗಿ 25 ಕೋಟಿ ರೂಪಾಯಿಗಳಿಗಿಂಲೂ ಮೇಲ್ಪಟ್ಟು ಹಣವನ್ನು ಖರ್ಚು ಮಾಡುತ್ತ ಇದ್ದೀರಿ. ಇದಕ್ಕಾಗಿ ಬಹಳ ಸಂತೋಷ. ಮಾನ್ಯ ಕಂಠಿ ಸಾಹೇಬರವರು ಪ್ರತಿನಿತ್ಯವೂ ಒಂದೊಂದು ಹೇಳಿಕೆಯನ್ನು ಕೊಡುತ್ತಲಿದ್ದರೂ ಪ್ರೈಮರಿ ವಿದ್ಯಾಭ್ಯಾಸದ ಬಗ್ಗೆ ಸ್ವಲ್ಪ ಮಟ್ಟಿನ ಪ್ರಗತಿಯನ್ನು ಸಾಧಿಸುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿ ನಡೆಯತಕ್ಕ ಒಂದು ರೀತಿ ನೀತಿಗಳನ್ನು

ನೋಡಿದರೆ ಅದು ನನಗೆ ಒಂದು ರೀತಿಯಾಗಿ ಭಾಸವಾಗುತ್ತಿದೆ. ತಾವು ಈಗ ಎಷ್ಟೋ ಸ್ಕೂಲುಗಳನ್ನು ಕೊಟ್ಟಿದ್ದೀರಿ. ಮೊನ್ನೆತಾನೇ ತಾವು ಇಲ್ಲಿ ಒಂದು ಸಾವಿರ ಉಪಾಧ್ಯಾಯರುಗಳನ್ನು ಇದಕ್ಕಾಗಿ ನೇಮಕ ಮಾಡಿಕೊಂಡಿದ್ದೇವೆ ಎಂದು ಹೇಳಿದಿರಿ. ಈ ಉಪಾಧ್ಯಾಯರುಗಳಿಗಾಗಿ ಪ್ರತಿಯೊಬ್ಬರಿಗೂ ತಾವು ಮಾಹೆಯಾನ ಕೊಡುತ್ತಿರುವ ಸಂಬಳ ಒಂದು ನೂರು ರೂಪಾಯಿಗಳು ಎಂಬುದನ್ನು ತಾವು ಮರೆಯಬಾರದು. 25 ಕೋಟಿಯಷ್ಟು ಹಣವನ್ನು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುವಾಗ ಹಳ್ಳಿ ಹಳ್ಳಿಗಳಲ್ಲಿಯೂ ತೆರೆದಿರತಕ್ಕ ಶಾಲೆಗಳಿಗೆ ಸರಿಯಾದಂತಹ ಮೇಲ್ವಿಚಾರಣೆ ಮಾಡುವಂತಹ ಅಧಿಕಾರಿಗಳನ್ನು ನೇಮಿಸಬೇಕು. ಡಿಸ್ಟ್ರಿಕ್ಟ್ ಎಜುಕೇಷನಲ್ ಅಧಿಕಾರಿಗಳನ್ನು ಹಾಗೂ ಇನ್ಸ್‌ಪೆಕ್ಟರುಗಳನ್ನು ನೇಮಕ ಮಾಡಿದ್ದೀರಿ. ಆದರೆ ಒಂದು ತಾಲ್ಲೂಕಿಗೆ ಒಬ್ಬರು ಇನ್ಸ್‌ಪೆಕ್ಟರು ಎಂದು ನೇಮಕ ಮಾಡಿದ್ದೀರಿ. ಅವರು ನೂರಾರು ಮೈಲಿಗಳಷ್ಟು ದೂರ ಸೈಕಲ್‌ಗಳಲ್ಲಿ ಹೋಗಿ ಸುತ್ತಿ ಬರಬೇಕು. ಅಲ್ಲದೆ ನಮ್ಮ ಕಡೆಯಲ್ಲಿ ಶಾಲೆಗಳನ್ನು ನೋಡಿಕೊಳ್ಳಲು ಒಬ್ಬರೇ ಒಬ್ಬರು ಇನ್ಸ್‌ಪೆಕ್ಟರನ್ನು ನೇಮಕ ಮಾಡಿದ್ದೀರಿ. 365 ಗ್ರಾಮಗಳಲ್ಲಿರುವ 280 ಶಾಲೆಗಳನ್ನು ಒಬ್ಬರೇ ಒಬ್ಬರು ಇನ್ಸ್‌ಪೆಕ್ಟರು ನೋಡಬೇಕು ಎಂದರೆ ಅದು ಹೇಗೆ ತಾನೆ ಸಾಧ್ಯ ಎಂದು ತಾವು ಯೋಚನೆ ಮಾಡಬೇಕು. ಇದು ಬಹು ಕಷ್ಟವಾಗುತ್ತದೆ. ಬಾಯಲ್ಲಿ ಹೇಳುವುದು ಸುಲಭವಾಗಿರಬಹುದು. ಜಿಲ್ಲೆಯಲ್ಲಿರುವ ಡಿ. ಇ. ಒ. ಹಾಗೂ ಅವರ ಕೈಕೆಳಗಿರುವ ಅಧಿಕಾರಿಗಳು ಸರಿಯಾಗಿ ಮೇಲ್ವಿಚಾರಣೆ ಮಾಡಲು ಅವರಿಗೆ ಜೀಪುಗಳನ್ನು ಕೊಟ್ಟು ಸರಿಯಾದ ತನಿಖೆ ಮಾಡಲು ಅವಕಾಶ ಕೊಡಬೇಕು. ಹೀಗೆ ಮಾಡದೇ ಇದ್ದರೆ ಅನಾಯಕತ್ವವಾಗುತ್ತದೆ. ಇದರ ಬಗ್ಗೆ ಒಂದು ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಇಲ್ಲಿ ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಆ ಮೇಲೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 17 ವರ್ಷಗಳಾದರೂ ಕೂಡ ನಮ್ಮ ಬಡ ರೈತನ ಕೆಲಸ ಕಾರ್ಯಗಳು ಎಷ್ಟು ಬೇಗ ಆಗಬೇಕೋ ಅಷ್ಟು ಬೇಗ ಆಗುತ್ತಿಲ್ಲ. ಯಥಾಪ್ರಕಾರವಾಗಿ ಭ್ರಷ್ಟಾಚಾರ ಲಂಚದ ಹಾವಳಿ ಇವತ್ತಿನ ದಿವಸ ದೇಶದಲ್ಲಿ ಜಾಸ್ತಿಯಾಗಿದೆ. ಲಂಚ ಹೆಚ್ಚಾಗುವುದಕ್ಕೆ ಕಾರಣವೇನಂದರೆ ಇಂದು ಜೀವನವ ವೆಚ್ಚ ಜಾಸ್ತಿಯಾಗಿದೆ. ಸಣ್ಣ ನೌಕರರಿಗೆ ಕೊಡುವ ಸಂಬಳ ಸಾರಿಗೆ ಅವರ ನಿತ್ಯ ಜೀವನಕ್ಕೆ ಸಾಲದೆ ಅವರು ಬೇರೆ ಅಡ್ಡ ದಾರಿ ಹಿಡಿಯುವ ಪ್ರಮೇಯ ಬರುತ್ತಿದೆ. ಆದುದರಿಂದ ಎನ್. ಜಿ. ಓ. ಅವರು ತಮ್ಮ ಬೇಡಿಕೆಯನ್ನು ಸರಕಾರದ ಮುಂದೆ ಏನು ಇಟ್ಟಿದ್ದಾರೆಯೋ ಅದನ್ನು ಆದಷ್ಟು ಬೇಗ ಒಪ್ಪಿಕೊಂಡು ಅವರಿಗೆ ಹೆಚ್ಚು ತುಟ್ಟಿಭತ್ಯ ಕೊಟ್ಟು ಸಮಾಧಾನಪಡಿಸಬೇಕು. ಅಂದರೆ ಅವರು ಶ್ರದ್ಧೆಯಿಂದ ಕೆಲಸ ಕಾರ್ಯ ಮಾಡುತ್ತಾರೆ. ಅವರಿಂದ ಒಳ್ಳೇ ಕೆಲಸ ಪಡೆಯಬೇಕು. ಇಲ್ಲದೇ ಹೋದರೆ ಅವರು ಮಾಡುವ ಕೆಲಸ ಕಾರ್ಯಗಳಲ್ಲಿ ಕುಂದು ಕೊರತೆಗಳು ಬರುತ್ತವೆ ಹಾಗು ಸಲೀಸಾಗಿ ಕೆಲಸವಾಗುವುದಿಲ್ಲ ಎನ್ನುವುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ನೀರಾವರಿ ವಿಚಾರ ಹೇಳುತ್ತೇನೆ. ಹಿಂದಕ್ಕೆ ಹಣಕಾಸಿನ ಸಚಿವರಾಗಿದ್ದ ಶ್ರೀಮಾನ್ ಮರಿಯಪ್ಪನವರು ನಮ್ಮ ತಾಲ್ಲೂಕಿನಿಂದ ಬಂದವರು. ಅವರ ಕಾಲದಲ್ಲಿ ನಮ್ಮ ತಾಲ್ಲೂಕಿನಲ್ಲಿ ಆಗಬೇಕಾದ ಒಂದೆರಡು ಕೆಲಸಗಳನ್ನು ಬಜೆಟ್ಟಿನಲ್ಲಿ ಅವರು ಸೇರಿಸಿದ್ದರು ಅದು ಬರುತ್ತದೆ ಎಂದು ನಾವು ನಿರೀಕ್ಷಣೆ ಮಾಡುತ್ತಿದ್ದೆವು. ಆದರೆ ಇದುವರೆಗೆ ಯಾವ ಹೊಸ ಕೆಲಸ ನಮ್ಮ ತಾಲ್ಲೂಕಿನ ಬಗ್ಗೆ ಬಜೆಟ್ಟಿನಲ್ಲಿ ಕಾಣುತ್ತಾ ಇಲ್ಲ. ಈಗ ಪುನಃ ಹೇಳಿದ್ದೇ ಹೇಳಬೇಕಾಗಿದೆ. ನೀರಾವರಿ ಯೋಜನೆಗಳಿಗಾಗಿ ಸರಕಾರ ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಿದ್ದಾರೆ. ಬೇರೆ ಕಡೆ ತೆಗೆದುಕೊಂಡ ಹಳೇ ಕೆಲಸ ಮುಗಿದು ಹೊಸ ಕೆಲಸ ಪ್ರಾರಂಭವಾಗುತ್ತಿವೆ. ಆದರೆ ನಮ್ಮ ತಾಲ್ಲೂಕಿನ ಮಟ್ಟಿಗೆ ಹೇಳುವುದಾದರೆ ಯಾವ ಹೊಸ ಕೆಲಸ ತೆಗೆದುಕೊಳ್ಳುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿ ಸರ್ವೆ ಮಾಡಿದ್ದು ತೆಗೆದುಕೊಳ್ಳಲು ಯೋಗ್ಯವಾದ ಅನೇಕ ಪ್ರೊಜೆಕ್ಟುಗಳಿವೆ. ಅವುಗಳನ್ನು ತೆಗೆದುಕೊಳ್ಳಬೇಕೆಂದು ನಾನು ಸರಕಾರಕ್ಕೆ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಹೊಸದಾಗಿ ಸೇರ್ಪಡೆಯಾದ ಪ್ರದೇಶದಲ್ಲಿ ತೆಗೆದುಕೊಳ್ಳುವ ಯೋಜನೆಗಳಿಗಾಗಿ ಸರಕಾರದ ಖಜಾನೆಯಿಂದ ಕೋಟ್ಯಾನುಕೋಟಿ ರೂಪಾಯಿ ಹಣ ಅತ್ತ ಕಡೆ ಹರಿಸುತ್ತಿದ್ದಾರೆ. ಆದರೆ ಹಳೇ ಮೈಸೂರ ಪ್ರದೇಶದ ಜನರ ಸಲುವಾಗಿ ಅಷ್ಟು ಹಣ ಖರ್ಚು ಮಾಡುತ್ತಿಲ್ಲ. ಇದರಿಂದ ಹಳೇ ಮೈಸೂರು ಜನರಿಗೆ ಗಾಬರಿಯಾಗಿದೆ. ಇದರ ಉದ್ದೇಶ ಏನು ಇರಬಹುದು ? ನಮ್ಮ ಮೈಸೂರು ಸಂಸ್ಥಾನದಲ್ಲಿ ಏನು ಆದಾಯ ಬರುತ್ತದೆಯೋ ಅದಕ್ಕೆ ಅನುಗುಣವಾಗಿ ಪ್ಲಾನ್ ಎಸ್ಟಿಮೇಟ್ ಮಾಡಿ ಯೋಜನೆಗಳನ್ನು ಕೈಕೊಳ್ಳಬೇಕು. ನಮ್ಮ ಕಡೆ ಅನೇಕ ಕೆರೆ ಕಟ್ಟೆಗಳಿವೆ. ನೂರಾರು ವರ್ಷಗಳ ಹಿಂದೆ ಕಟ್ಟಿಸಿದ ಕೆರೆ ಕಟ್ಟೆಗಳು ಇನ್ನೂ ಚೆನ್ನಾಗಿ ಇವೆ. ಕೆರೆ ಕಟ್ಟೆ ಹತ್ತು ಅಡಿ ಎತ್ತರ ಹೆಚ್ಚು ಮಾಡುವುದರಿಂದ ನೂರಾರು ಎಕರೆ ಜಮೀನು ನೀರಾವರಿಯಾಗುತ್ತದೆ. ಇಂಥ ಒಂದು ಪ್ರೊಜೆಕ್ಟ್ ನಮ್ಮ ಹಳೇ ಮೈಸೂರಿನಲ್ಲಿ ಸ್ಯಾಂಕ್ಷನ್ ಆಗುವುದಕ್ಕೆ ಅವಕಾಶವಿಲ್ಲವೇ ? ಏಕೆ ಸ್ಯಾಂಕ್ಷನ್ ಆಗುವುದಿಲ್ಲ ? ಹೊಸ ಮೈಸೂರು ಪ್ರದೇಶವಾದ ಹೈದರಾಬಾದ್ ಏರಿಯಾದಲ್ಲಿ ಗುಲಬುರ್ಗ ಜಿಲ್ಲೆಯ ಕಡೆಗೆ

(ಶ್ರೀ ಟಿ. ಎನ್. ಮಾದಪ್ಪ ಗೌಡ)

ಇರತಕ್ಕ ಯೋಜನೆಗಳಿಗೆ ದುಡ್ಡು ಸಾಗಿಸುವುದಕ್ಕೆ ಒಳ್ಳೇ ಏರ್ಪಾಡು ಮಾಡಿಕೊಂಡ ಹಾಗೆ ಕಾಣುತ್ತದೆ. ಹೊಸದಾಗಿ ಪ್ರಕಟವಾದ ಒಂದು ಸರ್ಕ್ಯುಲರ್ ನೋಡಿ ನನಗೆ ಇದು ಖಚಿತವಾಗಿದೆ. ಹಳೇ ಮೈಸೂರು ವಿಚಾರದಲ್ಲಿ ಅಷ್ಟು ಅಭಿಮಾನವಿಲ್ಲ. ಇದನ್ನು ಸರಕಾರಕ್ಕೆ ಹೇಳಲು ಇಷ್ಟಪಡುತ್ತೇನೆ. ಸರಕಾರ ಇಂಥ ಮನೋಭಾವನೆ ಬಿಡಬೇಕು. ಇಲ್ಲದಿದ್ದರೆ ಸರಕಾರಕ್ಕೆ ಒಳ್ಳೆಯದಾಗುವುದಿಲ್ಲ ಎಂದು ಹೇಳುತ್ತೇನೆ. ಇಷ್ಟು ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಂಥ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಈ ನಾಲ್ಕು ಮಾತು ಮುಗಿಸುತ್ತೇನೆ.

† ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ).—ಮಾನ್ಯ ಅಧ್ಯಕ್ಷರೇ, ನಮ್ಮ ಅರ್ಥ ಸಚಿವರು ಈ ಮಾನ್ಯ ಸಭೆಯಲ್ಲಿ ಮಂಡಿಸಿರತಕ್ಕಂಥ 1965-66 ನೇ ವರ್ಷದ ಮುಂಗಡ ಪತ್ರವನ್ನು ನಾನು ಸ್ವಾಗತಿಸುತ್ತೇನೆ. ಈ ವರ್ಷದ ವರಮಾನದ ಅಂದಾಜು 12,151·69 ಲಕ್ಷ ರೂಪಾಯಿ ಹಾಗು 12,542.93 ಲಕ್ಷ ರೂಪಾಯಿ ವೆಚ್ಚವನ್ನು ನಿರೀಕ್ಷಿಸಲಾಗಿದ್ದು ಅದರಿಂದ 391.24 ಲಕ್ಷ ರೂಪಾಯಿ ಕೊರತೆಯುಂಟಾಗುವ ಬಜೆಟ್ ಆಗಿದ್ದರೂ ಕೂಡ ಈ ಕೊರತೆ ಬಜೆಟ್ಟು ಪ್ರಗತಿ ಲಕ್ಷಣವೆಂದು ನಾನು ತಿಳಿದುಕೊಂಡಿದ್ದೇನೆ. ಬಜೆಟ್ಟಿನಲ್ಲಿ ಕೊರತೆಯುಂಟಾಗುವುದಕ್ಕೆ ಹಲವಾರು ಕಾರಣಗಳು ಇವೆ. ನಮ್ಮ ರಾಜ್ಯದ ವರಮಾನಕ್ಕಿಂತ ವೆಚ್ಚ ಬೇಕಾದಷ್ಟು ಏರಿ ಹೋಗಿದೆ. 1959-60 ನೇ ವರ್ಷದಿಂದ 1965-66 ನೇ ವರ್ಷದವರೆಗೆ ತೆರಿಗೆ ವರಮಾನವು 31.59 ಕೋಟಿ ರೂಪಾಯಿಯಿಂದ 58.16 ಕೋಟಿ ರೂಪಾಯಿವರೆಗೆ ಏರಿದೆ. ಬೇರೆ ಬೇರೆ ಬಾಬುಗಳ ಉತ್ಪತ್ತಿ ಹೆಚ್ಚಾಗಿದ್ದರೂ ಕೂಡ ಕೊರತೆ ಸಹ ಹೆಚ್ಚಾಗಿದೆ. ವಿದ್ಯಾಭ್ಯಾಸ, ವೈದ್ಯ ಸೇವೆ, ಜನಾರೋಗ್ಯ ರಕ್ಷಣೆ, ಮೊದಲಾದ ಅಭಿವೃದ್ಧಿ ಇಲಾಖೆಗಳಲ್ಲಿ ವೆಚ್ಚ 44.03 ಕೋಟಿ ರೂಪಾಯಿಯಿಂದ 76.75 ಕೋಟಿ ರೂಪಾಯಿವರೆಗೆ ಹೆಚ್ಚಿದೆ. ಇಂಥ ಪರಿಸ್ಥಿತಿ ಇರುವಾಗ್ಗೆ ಕೊರತೆ ಉಂಟಾಗುವುದು ಸ್ವಾಭಾವಿಕ. ಈ ಸಂದರ್ಭದಲ್ಲಿ ನಮ್ಮ ರಾಜ್ಯದ ಆರ್ಥಿಕ ಸ್ಥಿತಿ ಕಳವಳಕಾರಕವಾಗಿದೆ ಎಂದು ತೋರುತ್ತದೆ. ಮೂರನೇ ಪಂಚವಾರ್ಷಿಕ ಯೋಜನೆಗೆ ನಿಗದಿ ಮಾಡಿದ 250 ಕೋಟಿ ರೂಪಾಯಿ ಖರ್ಚು ಮಾಡಲು ಎಲ್ಲ ಶಕ್ತಿ ವಿನಿಯೋಗಿಸಲಾಗಿದೆ. ಕೊನೆಯ ವರ್ಷದಲ್ಲಿ 50 ಕೋಟಿ ರೂಪಾಯಿ ಈ ಯೋಜನೆಗೆ ಯಾವ ರೀತಿ ದೊರಕಿಸಬೇಕು ಎಂಬುದನ್ನು ಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ತಿಳಿಸಿ ಹೇಳಿದ್ದಾರೆ. ಆಂಧ್ರ, ಕೇರಳ ರಾಜ್ಯಕ್ಕೆ ಪರ್ಸೆಂಟೇಜ್ ಜಾಸ್ತಿ ಕೊಡುತ್ತಾರೆ. ಅದೇ ರೀತಿಯಾಗಿ ನಮಗೂ ಕೊಡಬೇಕೆಂದು ಮನವಿ ಮಾಡಿಕೊಂಡಿದ್ದಾರೆ. ಬಹುಶಃ ಅವರು ಇದಕ್ಕೆ ಒಪ್ಪಿಗೆ ಕೊಡುತ್ತಾರೆ ಎಂಬ ಆಶೆ ಉಂಟು ಮಾಡಿದೆ. ಇದು ದೊರೆಯುವಂತಾಗಬೇಕೆಂದು ಪರಮಾತ್ಮನಲ್ಲಿ ನಾನು ಬೇಡಿಕೊಳ್ಳುತ್ತೇನೆ. ನಮ್ಮ ಅನೇಕ ಯೋಜನೆಗಳಿಂದ ಮತ್ತು ಇತರ ವಿನಿಯೋಗಗಳಿಂದ ಇನ್ನೂ ಪ್ರತಿಫಲ ಬರಲು ಆರಂಭವಾಗಿಲ್ಲದಿದ್ದರೂ ಮುಂದಿನ ವರ್ಷ ಬಡ್ಡಿಯ ರೂಪದಲ್ಲಿ 6.27 ಕೋಟಿ ರೂಪಾಯಿ ಹಣವನ್ನು ಬಡ್ಡಿಯ ರೂಪದಲ್ಲೂ, 14 ಕೋಟಿ ರೂಪಾಯಿ ಹಣವನ್ನು ಅಸಲಿನ ಮರುಪಾವತಿ ರೂಪದಲ್ಲೂ ಭಾರತ ಸರಕಾರಕ್ಕೆ ಸಂದಾಯ ಮಾಡಬೇಕಾಗಿದೆ ಯೆಂಬ ಅಂಶವನ್ನೂ ಮತ್ತು ಪ್ರಸಕ್ತ ಯೋಜನೆಯ ಮೊದಲಿನ ನಾಲ್ಕು ವರ್ಷಗಳಲ್ಲಿ ಬಡ್ಡಿಯ ರೂಪದಲ್ಲಿ 18.54 ಕೋಟಿ ರೂಪಾಯಿ ಹಣವನ್ನೂ, ಅಸಲಿನ ಮರುಪಾವತಿಯಾಗಿ 35.27 ಕೋಟಿ ರೂಪಾಯಿಯನ್ನು ಕೊಡಬೇಕಾಗುವುದೆಂಬ ಅಂಶವನ್ನು ಮಾನ್ಯ ಸದಸ್ಯರು ಗಮನಿಸಬಹುದಾಗಿದೆ ಎಂದು ಸಚಿವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇಲ್ಲವಾದರೆ ಖಚಿತವಾಗಿ ಯೋಜನೆ ಮುಗ್ಗರಿಸಿ ಬೀಳುವುದರಲ್ಲಿ ಸಂದೇಹವಿಲ್ಲ. ಇದನ್ನು ಅರ್ಥ ಮಂತ್ರಿಗಳು ಹೇಳಿದ್ದಾರೆ. ನಮ್ಮ ಗುರಿ ಮುಟ್ಟಲು ಹಣ ಕಾಸಿನ ಬಗ್ಗೆ ಪುನರ್ ವ್ಯವಸ್ಥೆ ಮಾಡಬೇಕಾಗುತ್ತದೆ. ಹೊಸ ತೆರಿಗೆ ಹಾಕುವ ಬಗ್ಗೆ ವಿಚಾರ ಮಾಡಬೇಕಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಯೋಜನೆಯ ನಾಲ್ಕು ವರ್ಷಗಳಲ್ಲಿ ನಿಗದಿ ಮಾಡಿದ ಹಣದಲ್ಲಿ ಅಲ್ಪ ಪ್ರಮಾಣ ನೀರಾವರಿ ಯೋಜನೆಗೆ ಖರ್ಚು ಮಾಡಿದ್ದೇವೆ. ಮೈನರ್ ಇರಿಗೇಶನ್ ಸ್ಕೀಂನಲ್ಲಿ 1960-61 ನೇ ವರ್ಷದಲ್ಲಿ 38,000 ಬಾವಿಗಳನ್ನು ಪೂರ್ತಿ ಮಾಡಬೇಕು ಎಂದು ಇತ್ತು. ಇದುವರೆಗೆ 22,000 ಬಾವಿಗಳು ಪೂರ್ತಿಯಾಗುವ ನಿರೀಕ್ಷೆ ಇದೆ. ಇದಕ್ಕೆ ಹಣ ಬೇಕು ಎಂದು ರೈತರು ಕೇಳಿದರೆ ಡಿ.ಸಿ. ಅವರು ಹಣವಿಲ್ಲ ಎಂದು ಹೇಳುತ್ತಾರೆ. ಯಾಕೆಂದರೆ ಇಂತಿಷ್ಟು ದಿವಸಗಳಲ್ಲಿ ಬಾವಿ ಕೆಲಸ ಪೂರ್ತಿ ಮಾಡಿದರೆ ಹಣ ಕೊಡುತ್ತಾರೆ. ಯೋಗ್ಯ ವೇಳೆಯಲ್ಲಿ ಹಣ ಕೊಟ್ಟರೆ ಕೆಲಸ ಮುಗಿಸಬಹುದು. ಇಲ್ಲದಿದ್ದರೆ ಕೆಲಸ ಮುಗಿಸಲು ಸಾಧ್ಯವಾಗುವುದಿಲ್ಲ. ಸಬ್‌ಸಿಡಿ ಕೊಡುವುದಿಲ್ಲ. ನಮ್ಮ ಭಾಗದಲ್ಲಿ ಎಷ್ಟೋ ಬಾವಿಗಳು ಪೂರ್ತಿಯಾಗಿಲ್ಲ. ಪೂರ್ತಿ ಮಾಡಲು ಹಣ ದೊರೆತಿಲ್ಲ. ಇಂಥ ಪರಿಸ್ಥಿತಿ ಉಂಟಾಗಿದೆ.

† Indicates that the remarks or speeches have not been revised by the member concerned.

ಈ ವರ್ಷ ಎಷ್ಟು ಬಾವಿಗಳನ್ನು ಪೂರ್ತಿ ಮಾಡಬೇಕಾಗಿದೆಯೋ ಅಷ್ಟಕ್ಕಾದರೂ ಹಣ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ತಮಗೆ ಕೇಳಿಕೊಳ್ಳುತ್ತೇನೆ.

ಇನ್ನು ಇಲ್ಲಿ ನಮ್ಮ ಮಂತ್ರಿಗಳು ದೇಶದ ಆಹಾರ ಪರಿಸ್ಥಿತಿಯ ಬಗ್ಗೆ ಹೇಳಿಕೆಯೊಂದನ್ನು ಕೊಡುತ್ತಾ ಕೆಲವು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಅದರಿಂದ ನಮಗೇನು ಗೊತ್ತಾಗುತ್ತಿದೆ ಎಂದರೆ, ನಮ್ಮಲ್ಲಿ ಉಳುಮೆಯಾಗುತ್ತಿದ್ದ ಭೂಮಿಯಲ್ಲಿ ಶೇಕಡಾ 1.4 ರಷ್ಟು ಇಳಿಮುಖವಾಗಿದೆ ಎಂದು ತಿಳಿದು ಬರುತ್ತದೆ. 1963-64ರಲ್ಲಿ ಆಹಾರ ಧಾನ್ಯಗಳನ್ನು ಬೆಳೆಯುತ್ತಿದ್ದ ಭೂಮಿಯಲ್ಲಿ ಅಂದರೆ 37 ಲಕ್ಷದ 95 ಸಾವಿರದ 544 ಎಕರೆಗಳಲ್ಲಿ ಬಹುಭಾಗ ಈ ದಿವಸ ಕಬ್ಬು, ಕಡಲೇಕಾಯಿ, ಹತ್ತಿ, ಇತ್ಯಾದಿಗಳನ್ನು ಬೆಳೆಯುವುದಕ್ಕೆ ಪ್ರಾರಂಭಮಾಡಿರುವುದು ಗೊತ್ತಾಗುತ್ತಿದೆ. ಹೀಗಿರುವಾಗ ಏನು ಕೆಲವು ಭೂಮಿಗಳಿನ್ನೂ ಉಳಿದಿವೆಯೋ ಅಂಥವರ ಬಗ್ಗೆ ನಾವು ಈ ದಿವಸ ಆಹಾರದ ಬಗ್ಗೆ ಯಾವ ಒಂದು ಪಾಲಿಸಿಯನ್ನು ಅನುಸರಿಸುತ್ತಿದ್ದೇವೆ ಎಂಬುದನ್ನು ನೋಡಿದರೆ ಮುಂದೆ ಯಾರೂ ಈ ವ್ಯವಸಾಯವನ್ನೇ ಕೈಗೊಳ್ಳುವುದಿಲ್ಲವೆಂಬುದಾಗಿ ಕಂಡು ಬರುತ್ತಿದೆ. ನಾವು ಈ ದಿವಸ ಒಕ್ಕಲು ತನದಲ್ಲಿರತಕ್ಕವರಲ್ಲಿ ಆಹಾರಧಾನ್ಯಗಳ ಬಗ್ಗೆ ಹೇಗೆ ಒತ್ತಾಯಪಡಿಸುತ್ತಿದ್ದೇವೆಂಬುದನ್ನು ನಾನೀಗ ತಿಳಿಸಬೇಕಾಗಿದೆ. ನಮ್ಮಲ್ಲಿ ಜೋಳ ಬೆಳೆಯತಕ್ಕ ರೈತರಿಂದ ಯಾರು 20 ಕ್ವಿಂಟಾಲಗಿಂತ ಜಾಸ್ತಿ ಜೋಳವನ್ನು ಬೆಳೆಯುತ್ತಾರೋ ಅಂಥವರು ಸರ್ಕಾರಕ್ಕೆ ಅರ್ಧ ಭಾಗಕ್ಕಿಂತ ಹೆಚ್ಚಿಗೆ ಕೊಡಬೇಕೆಂದು ಒತ್ತಾಯ ಹಾಕತಕ್ಕ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಆದರೆ ನಮ್ಮಲ್ಲಿರತಕ್ಕ ಒಂದು ಪದ್ಧತಿ ಎಂದರೆ–ನಾವು ನಮ್ಮಲ್ಲಿರತಕ್ಕ ಆಳುಗಳಿಗೆ ಕೂಲಿಯನ್ನು ನಾಣ್ಯದ ರೂಪದಲ್ಲಿ ಕೊಡುವುದಿಲ್ಲ. ಅದನ್ನು ನಾವು ಆತನಿಗೆ ಜೋಳದ ರೂಪದಲ್ಲೇ ಕೊಡಬೇಕು. ಹಾಗಿರುವಾಗ ನಾವು ಸರ್ಕಾರಕ್ಕೆ ಅರ್ಧಭಾಗ ಕೊಟ್ಟಮೇಲೆ ಆ ಆಳುಕಾಳುಗಳಿಗೇನು ಮಾಡುವುದು ? ಇದನ್ನೆಲ್ಲಾ ಸರ್ಕಾರದವರು ಮತ್ತೊಮ್ಮೆ ವಿಮರ್ಶೆಮಾಡಬೇಕಾದ್ದು ಅಗತ್ಯ. ನಮ್ಮ ಮಂತ್ರಿಗಳೇನೂ ಇಲ್ಲಿ ಬಹಳ ಆಸೆಯನ್ನಿಟ್ಟುಕೊಂಡು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಅವರ ಆಸೆಗಳೆಲ್ಲವೂ ಕೈಗೂಡಲೆಂದು ನಾನೂ ಆಶಿಸುತ್ತೇನೆ.

5-00 P.M.

ಆದರೆ ಇನ್ನು ಈಗಾಗಲೇ ಮಾತನಾಡಿದ ಶ್ರೀ ಮಾದಪ್ಪನವರು ಹೇಳಿದ ಹಾಗೆ ನಾನೂ ಸಹಾ ಈ ವ್ಯವಸಾಯದ ಇಲಾಖೆಯ ಬಗ್ಗೆ ಅವರು ಹೇಳಿದ್ದನ್ನೆಲ್ಲಾ ನ್ಯಾಯವಾದುದು ಎಂದು ಒಪ್ಪುತ್ತೇನೆ. ಹಾಗೆ ಸರ್ಕಾರಕ್ಕೆ ಕೆಟ್ಟ ಹೆಸರನ್ನು ತರತಕ್ಕಂಥ ಒಬ್ಬ ಡೈರೆಕ್ಟರನ್ನು ಇವರೇಕೆ ಇಟ್ಟುಕೊಳ್ಳಬೇಕು ಎಂದು ಕೇಳುತ್ತೇನೆ ? ವೃಥಾ ಇವರಿಂದ ಸರ್ಕಾರಕ್ಕೇಕೆ ಒಂದು ಅಪವಾದ ? ಇಂಥ ಡೈರೆಕ್ಟರನ್ನು ಸರ್ಕಾರದವರು ಕೂಡಲೇ ತೆಗೆದುಹಾಕಬೇಕೆಂದು ಹೇಳುತ್ತೇನೆ.

ಇನ್ನು ಈ ಹಿಂದೆ ಹೈಕೋರ್ಟಿನವರು ಕೆಲಸದಿಂದ ನಿವೃತ್ತಿಮಾಡಬೇಕೆಂದು ಹೇಳಿದ್ದ ಅಧಿಕಾರಿಗಳ ಜೊತೆಗೆ ಈಗ ಮತ್ತೆ 12 ಜನ ವಿಸ್ತರಣಾ ಯೋಜನೆಯ ಅಧಿಕಾರಿಗಳ ಜೊತೆಗೆ ಇನ್ನೂ 90 ಜನರನ್ನು ನೌಕರಿಯಿಂದ ತೆಗೆದು ಹಾಕಬೇಕೆಂದು ಆಜ್ಞೆಯಾಗಿದೆ ಅಂತ ಕೇಳಿದೆ. ಆದರೆ ಇದರ ಜೊತೆಗೆ ಇನ್ನೂ ಸುಮಾರು...ಕೇಸು ಸುಪ್ರೀಂ ಕೋರ್ಟಿನ ಮುಂದಿವೆ ಎಂದು ಕೇಳುತ್ತಿದ್ದೇನೆ. ಇವರೆಲ್ಲರೂ ಸೇರಿಕೊಂಡರೆ ಸುಮಾರು 300 ಜನರಾಗಬಹುದು. ಇಷ್ಟು ಜನರೂ ಇಂದು ಅನ್‌ಎಂಪ್ಲಾಯ್ಡ್ ಆಗುತ್ತಾರೆ. ಆದುದರಿಂದ ಇದನ್ನು ಸರ್ಕಾರದವರು ದೀರ್ಘವಾಗಿ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ. ಹೀಗೆ ದಿನಂಪ್ರತಿ ಎಕ್ಸ್‌ಟೆನಷನ್ ಆಫೀಸರು, ತಾಶೀಲ್ದಾರರು, ಅಸಿಸ್ಟೆಂಟ್ ಇಂಜಿನಿಯರುಗಳೂ ಸುಪ್ರೀಂ ಕೋರ್ಟಿನ ತೀರ್ಮಾನದಮೇಲೆ ತಮ್ಮ ನೌಕರಿಗಳನ್ನು ಕಳೆದುಕೊಳ್ಳುವುದಕ್ಕೆ ಪ್ರಾರಂಭವಾದರೆ ಮುಂದೆ ಅಂಥವರ ಜೀವನದ ಗತಿ ಏನು ? ಅವರ ಸಂಸಾರದ ಗತಿಯೇನು ? ಅವರಿಗಿದ್ದ ನೌಕರಿಯೂ ಹೋಯಿತು, ಅವರಿಗೆ ನಂಬಿ ಹೆಣ್ಣು ಕೊಟ್ಟಿದ್ದ ತಂದೆತಾಯಿಗಳ ಗತಿಯೇನು ? ಇದನ್ನು ಸರ್ಕಾರದವರು ಸಂಪೂರ್ಣವಾಗಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಮೂರನೇ ಪಂಚವಾರ್ಷಿಕ ಯೋಜನೆಯ ಬಗ್ಗೆ ಒಂದು ಪುಸ್ತಕವನ್ನು ವ್ಯವಸಾಯದ ಇಲಾಖೆಯ ಸಂಬಂಧವಾಗಿ ಹೊರಡಿಸಿದ್ದಾರೆ. ಆದರೆ ಅದನ್ನು ಪರಿಶೀಲನೆ ಮಾಡಿ ನೋಡಿದಲ್ಲಿ ಅದರಲ್ಲಿ ತಿಳಿಸಲಾಗಿರತಕ್ಕ ಸ್ಕೀಮುಗಳಲ್ಲಿ ಬಹಳ ಲ್ಯಾಪ್ಸಾಗಿವೆ. ಅಷ್ಟೇ ಅಲ್ಲದೆ ಆ ಇಲಾಖೆಯಲ್ಲಿರತಕ್ಕ ನೌಕರರಲ್ಲೆಲ್ಲಾ ಅತೃಪ್ತಿ ತುಂಬಿ ತುಳುಕುತ್ತಿದೆ. ಮೂರನೆ ಯೋಜನೆಯಲ್ಲಿ ಕೈಗೊಳ್ಳಬೇಕೆಂದು ಯಾವ ಯಾವ ಬಾಬಿಗೆ ಹಣವನ್ನು ಒದಗಿಸಲಾಗಿತ್ತೋ ಅವುಗಳೆಲ್ಲಾ ಲ್ಯಾಪ್ಸಾಗಿವೆ. ಆ ಇಲಾಖೆಯಲ್ಲಿ ಸಾಕಷ್ಟು ಜನ ನೌಕರರಿಲ್ಲದೆ ಯಾವ ಕಾರ್ಯಕ್ರಮಗಳೂ ಸರಿಯಾಗಿ ನಡೆದಿರುವುದಿಲ್ಲ. ಇದು ಒಂದು ನಮ್ಮ ದುರ್ದೈವ. ನಮ್ಮ ಜಿಲ್ಲೆಯಲ್ಲೂ ಮತ್ತು ಚಿತ್ರದುರ್ಗ ಜಿಲ್ಲೆಯಲ್ಲೂ ಕೆಲವು ನೀರಾವರಿ ಯೋಜನೆಗಳಿಗೆ ಹಣ ಒದಗಿಸಿದ್ದುದು ಲ್ಯಾಪ್ಸಾಗಿದೆ. ಅದಕ್ಕೆ ಕಾರಣ ಈ ಇಲಾಖೆಯಲ್ಲಿ

(ಶ್ರೀ ಆರ್. ಎಸ್. ಪಾಟೀಲ್)

ಸಾಕಷ್ಟು ಸಿಬ್ಬಂದಿಯಿಲ್ಲ ಎಂಬುದೇ ಆಗಿದೆ. ಆದುದರಿಂದ ಸರ್ಕಾರದವರು ದಯವಿಟ್ಟು ಈ ಇಲಾಖೆಗೆ ಪುನರ್ಜೀವನವನ್ನು ತುಂಬಬೇಕೆಂದು ಕೇಳಿಕೊಳ್ಳುತ್ತೇನೆ. ಇದು ನಮ್ಮ ದೇಶಕ್ಕೆ ಬಹು ಮುಖ್ಯವಾದ ಇಲಾಖೆ.

ಇನ್ನು ನಮ್ಮ ಜಿಲ್ಲೆಯಲ್ಲಿ ಅನೇಕ ಹ್ಯಾಂಡಲೂಮುಗಳು ಕೆಲಸಮಾಡುತ್ತಿವೆ. ಮೇಲಾಗಿ ಅವು ಸುಂದರವಾಗಿಯೂ ಕೆಲಸಮಾಡುತ್ತಿವೆ. ಆದರೆ ಈಗ ಅವುಗಳಿಗೆ ಒಮ್ಮಿಂದೊಮ್ಮೆಲೆ ಬಾಗಿಲು ಹಾಕುವಂಥ ಪರಿಸ್ಥಿತಿ ಬಂದಿದೆ. ಕಾರಣವೇನೆಂದರೆ, ಅವುಗಳಿಗೆ ಕೊಡುತ್ತಿದ್ದ ಆರ್ಥಿಕ ಸಹಾಯ ವನ್ನು ನಿಲ್ಲಿಸಲಾಗಿದೆ. ಈ ಕೈಮಗ್ಗದವರಿಗೆ ಮಿಲ್ ಬಟ್ಟೆಗಳ ಬಗ್ಗೆ ಪೈಪೋಟಿ ಮಾಡಲು ಸಾಧ್ಯವಿಲ್ಲ. ಅದಕ್ಕಾಗಿ ಸರ್ಕಾರದವರು ಇವುಗಳಿಗೆ ಧನ ಸಹಾಯವನ್ನು ಮಾಡಲೇಬೇಕು. ಈ ಬಾಬಿಗೆ ಕೇಂದ್ರ ಸರ್ಕಾರದವರು ಕೊಡುತ್ತಿದ್ದ ಹಣ ಸಹಾಯವನ್ನು ಇತ್ತೀಚೆಗೆ ನಮ್ಮ ರಾಜ್ಯ ಸರ್ಕಾರದವರು ತಡೆಹಿಡಿದಿದ್ದಾರೆ. ಆದರೆ ನಮ್ಮ ನೆರೆಹೊರೆಯ ರಾಜ್ಯಗಳಾದ ಆಂಧ್ರ ಮತ್ತು ಮದ್ರಾಸ್ ರಾಜ್ಯ ಗಳವರು ಇದನ್ನು ಮಾರ್ಚಿ ಆಖೈರು ವೇಳೆಗೆ ಇವರಿಗೆ ಕೊಡುವ ಹಾಗೆ ತೀರ್ಮಾನ ಮಾಡಿದ್ದಾರೆ. ಅದರಂತೆ ಇಲ್ಲಿ ನಮ್ಮ ರಾಜ್ಯ ಸರ್ಕಾರದವರೂ ಸಹಾ ಇದನ್ನು ಕೊಡುವಂತೆ ಆಜ್ಞೆ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ರಾಮದುರ್ಗ ತಾಲ್ಲೂಕಿನಲ್ಲಿ ಇನ್ನೂ 7—8 ಕಡೆಗಳಲ್ಲಿ ಈ ಹಿಂದೆ ಇದ್ದ ತೋರಗಲ್ ಜಹಗೀರುದಾರರು ಹಿಂದಿನ ಬರಗಾಲದಲ್ಲಿ ಜನರಿಗೆ 30—40 ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಟ್ಟಿದ್ದರಂತೆ. ಆದರೆ ಇತ್ತೀಚೆಗೆ ಇದು ಕೊಲ್ಹಾಪುರದಲ್ಲಿ ವಿಲೀನವಾಗಿ ಮಹಾರಾಷ್ಟ್ರಕ್ಕೆ ಸೇರಿದ ನಂತರ ಅಲ್ಲಿದ್ದ ಕುಲಕರ್ಣಿಗಳು ಈ ಹಿಂದೆ ಕೊಟ್ಟಿದ್ದ ಸಾಲ ವನ್ನೆಲ್ಲಾ ವಸೂಲು ಮಾಡಿಕೊಂಡಿದ್ದಾರೆ. ಹಾಗೆ ವಸೂಲುಮಾಡಿಕೊಳ್ಳತಕ್ಕ ಕಾಲದಲ್ಲಿ ಅವರು ಪಾರ್ಟಿಗಳಿಗೆ ಕೈಲಿ ಬರೆದ ರಶೀದಿಗಳನ್ನು ಕೊಟ್ಟು ಈ ಸಾಲವನ್ನೆಲ್ಲಾ 1946-47ರಲ್ಲಿ ಪೂರ್ತಿಯಾಗಿ ವಸೂಲ್ಮಾಡಿದ್ದಾರೆ. ಆದರೆ ಈ ಸಂಸ್ಥಾನದ ಕೆಲವು ಭಾಗಗಳು ಬೆಳಗಾಮಿಗೆ ಸೇರಿದ್ದರಿಂದ ಈ ಸಂಬಂಧವಾದ ಕಾಗದ ಪತ್ರಗಳು ಕೆಲವು ಇಲ್ಲಿಗೆ ಬಂದವು. ಆದರೆ ಈ ಕಾಗದ ಪತ್ರಗಳು ಯಾರಿಗೆ ಎಲ್ಲಿ ಹೇಗೆ ಸಿಕ್ಕಿದವೋ ಗೊತ್ತಿಲ್ಲ. ಅಂತೂ ಈಗ ಮತ್ತೆ ಜನರಿಂದ ಆ ಹಿಂದೆ ಕೊಟ್ಟಿದ್ದ ಸಾಲವನ್ನು ಮತ್ತೆ ವಸೂಲ್ಮಾಡುವುದಕ್ಕೆ ಪ್ರಾರಂಭಮಾಡಿದ್ದಾರೆ. ಹೀಗೆ ಈ ಸಾಲವನ್ನು ವಸೂಲ್ಮಾಡುವುದಕ್ಕೆ ಸರ್ಕಾರ ಆಜ್ಞೆ ಮಾಡಿರುತ್ತದೆಂದು ಕೇಳುತ್ತೇನೆ. ಆ ರೀತಿ ಆಜ್ಞೆ ಮಾಡಿದ್ದರೆ ಅದು ಖಂಡಿತಾ ಸರಿಯಲ್ಲ ಈ ಸಾಲವನ್ನೆಲ್ಲಾ ಜನರು ಸಂಪೂರ್ಣವಾಗಿ ಹಿಂದೆಯೇ ತೀರಿಸಿದ್ದಾರೆ. ಹೀಗಿದ್ದಾಗ್ಯೂ ಇದನ್ನು ಮತ್ತೆ ಸ್ಪೆಷಲ್ಲಾಗಿ ರೀ-ಇನ್‌ವೆಸ್ಟಿಗೇಟ್ ಮಾಡತಕ್ಕ ಅವಕಾಶವೆಲ್ಲಿದೆ? ಈ ಹಿಂದೆಯೇ ಈ ಕಾಗದ ಪತ್ರಗಳನ್ನೆಲ್ಲಾ ಡೀ-ಕ್ಯಾಟಿಗರಿ, ಅಂದರೆ, ಯೂಸ್‌ಲೆಸ್ ಕಾಗದ ಪತ್ರಗಳೆಂದು ತೀರ್ಮಾನ ಆಗಿತ್ತು. ಈಗ ಆ ಪೈಕಿ ಎಲ್ಲೋ ಒಂದೆರಡು ಸಿಕ್ಕಿವೆ. ಅವುಗಳ ಆಧಾರದ ಮೇಲೆ ತೀರಿಸಿದ್ದ ಸಾಲವನ್ನು ಪುನಃ ತೀರಿಸಬೇಕಾಗಿದೆ. ಇದು ಪೂರಾ ಅನ್ಯಾಯ. ಇದರ ಬಗ್ಗೆ ಏನಾದರೂ ಆಜ್ಞೆ ಮಾಡಿದ್ದರೆ ಕೂಡಲೇ ಅದನ್ನು ರದ್ದು ಮಾಡಬೇಕೆಂದು ಕೇಳಿಕೊಂಡು ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಧ್ಯಕ್ಷರೇ, ಪರಿಸ್ಥಿತಿಯು ಬಹಳ ಹದಗೆಟ್ಟಿರತಕ್ಕ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಆರ್ಥಿಕ ವ್ಯವಸ್ಥೆ ಬಹಳ ಅಸ್ತವ್ಯಸ್ತವಾಗಿರತಕ್ಕ ಕಾಲದಲ್ಲಿ ನಾವು ನಮ್ಮ ಜನರನ್ನು ಸಮಾಧಾನಮಾಡಿ ಸರ್ಕಾರವನ್ನು ನಡೆಸುವುದಕ್ಕೆ ಹಾಗೂ ದೇಶದ ಕಲ್ಯಾಣವನ್ನು ಸಾಧಿಸಲು ನಾವು ದೇಶಕ್ಕೆ ದುಡಿಯಬೇಕಾಗಿರತಕ್ಕ ಈ ಸಂದರ್ಭದಲ್ಲಿ, ಇಲ್ಲಿಯವರೆಗೂ ಕಳೆದ 17 ವರ್ಷಗಳಿಂದ ರಾಜ್ಯಭಾರಮಾಡಿಕೊಂಡು ಬಂದಿರತಕ್ಕ ಕಾಂಗ್ರೆಸ್ಸಿನವರ ಅಧರ್ಮ ಚಕ್ರಗಳಿಂದ ಕೂಡಿರತಕ್ಕ ರಥ ನಮ್ಮನ್ನು ಬಹಳ ದೂರದವರೆಗೆ ಅಟ್ಟಿಬಿಟ್ಟಿದೆ. ಇಂಥ ಒಂದು ಪರಿಸ್ಥಿತಿಯಲ್ಲಿ ನಾವು ದೇಶದಲ್ಲಿ ಹೇಗೆ ತಲೆ ಎತ್ತಿಕೊಂಡು ತಿರುಗಾಡಬೇಕೋ ನನಗೆ ಅದು ಗೊತ್ತಾಗುತ್ತಿಲ್ಲ.

ಸ್ವಾಮಿ, ನಾನು ಮಾತನಾಡಬೇಕಾದಂತಹ ಪ್ರಮೇಯ ಇರಲಿಲ್ಲ. ನನ್ನ ಸ್ನೇಹಿತರು ಬಸಪ್ಪನವರು, ಆರ್. ಎಸ್. ಹೆಗ್ಗಡೆಯವರು, ಆರ್. ಎಸ್. ಪಾಟೀಲ್‌ರವರು ಎಂ. ಆರ್ ಪಾಟೀಲ್ ಅವರು ಮಾತನಾಡಿದ ಮೇಲೆ ಅವರ ಜೊತೆಯಲ್ಲಿ ನನ್ನ ಕೈ ಕೂಡಿಸುವುದು ಒಳ್ಳೆಯದು ಎಂದು ನನಗೆ ಅನಿಸಿತು. ತಮ್ಮ ಪಕ್ಷದ ಸರ್ಕಾರ ಅರೆಳಿಗೆ ಅಧಿಕಾರದಲ್ಲಿ ಇರುವುದಕ್ಕೆ ಲಾಯಕ್ಕಲ್ಲ ಎಂಬುದು ಅದರಿಂದಲೇ ಗೊತ್ತಾಗುತ್ತದೆ. ಶ್ರೀಮಾನ್ ಬಸಪ್ಪನವರು ಸರ್ವೆ ಸೆಟ್ಲ್‌ಮೆಂಟ್ ಮೇಲೆ ಮಾತನಾಡುತ್ತಾ ಏನು ಹೇಳಿದರು ಎಂಬುದು ಈಗಲೂ ಕೂಡ ನನ್ನ ಕಿವಿಯಲ್ಲಿ ಮೊಳಗುತ್ತಾ ಇದೆ. ಆರ್. ಎಸ್. ಹೆಗ್ಗಡೆಯವರು ಮಾತನಾಡಿದ್ದನ್ನು ಕೇಳಿದ್ದೇನೆ, ಆರ್. ಎಸ್. ಪಾಟೀಲ್ ಅವರು ಈಗತಾನೆ ಮಾತನಾಡಿ ಮುಗಿಸಿದ್ದಾರೆ. ಇವರೆಲ್ಲರೂ

ಮಾತನಾಡಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿ ಇರುವುದಕ್ಕೆ ಅನರ್ಹ ಎಂದು ಹೇಳಿ ಅವರೇ ರುಜುವಾತು ಮಾಡಿ ಕೊಟ್ಟಿದ್ದಾರೆ. ಇವತ್ತಿನ ದಿವಸ ಶ್ರೀಮಾನ್ ಜತ್ತಿಯವರು ನಮ್ಮ ಕೈಯಲ್ಲಿ ಇಟ್ಟಿರತಕ್ಕ ಆಯವ್ಯಯ ಪಟ್ಟಿ ಮತ್ತು ಅವರು ಮಾಡಿದ ಭಾಷಣವನ್ನು ನೋಡಿದರೆ ಯಾರಾದರೂ ಕೊಂಚ ಆಶೆ ಇರತಕ್ಕ ಮನುಷ್ಯರಿದ್ದರೆ ಅವರಿಗೆ ನಿರಾಶೆಯಾಗಿದೆ. ದೇಶ ಮುಳುಗಿ ಹೋಗಿದೆ, ದೇಶ ಉಳಿಯುವ ಪರಿಸ್ಥಿತಿಯಲ್ಲಿ ಇಲ್ಲ ಎನ್ನುವ ರೀತಿಯಲ್ಲಿ ಅವರು ಮಾತನಾಡಿದ್ದಾರೆ. ಅವರ ಬುದ್ಧಿವಂತಿಕೆಯನ್ನು ಪ್ರದರ್ಶನ ಮಾಡತಕ್ಕ ಸಮಯದಲ್ಲಿ ಇತರ ಎಲ್ಲಾ ರಾಜ್ಯಗಳಲ್ಲೂ 10-15 ಕೋಟಿ ರೂಪಾಯಿಗಳ ಖೋತಾ ಇದ್ದರೂ ಕೂಡ ನಮ್ಮ ರಾಜ್ಯದಲ್ಲಿ 4 ಕೋಟಿರೂಪಾಯಿಗಳ ಖೋತ ಮಾತ್ರ ಇದೆ ಎಂದು ಹೇಳುತ್ತಾ ಇದ್ದಾರೆ, ಯಾವ ರೀತಿ ಲೆಕ್ಕಾಚಾರ ಹಾಕಿ ಇದನ್ನು ತೋರಿಸಿದರು ಎಂಬುದು ಅವರೇ ಕೊಟ್ಟಿರತಕ್ಕ ಪುಸ್ತಕವನ್ನು ನೋಡಿದರೂ ಕೂಡ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಶ್ರೀಮಾನ್ ಜತ್ತಿಯವರು ಇವತ್ತು ಇದ್ದಿದ್ದರೆ ಅವರನ್ನು ಕೇಳುತ್ತಾ ಇದ್ದೆ. ನಿಮ್ಮ ಬುದ್ಧಿವಂತಿಕೆ ಎಲ್ಲಾ ಬಸವಣ್ಣನವರ ವಚನವನ್ನು ಪ್ರಚಾರ ಮಾಡುವುದರಲ್ಲಿ ವ್ಯಯವಾಗಿ ದೇಶದ ಆರ್ಥಿಕ ವ್ಯವಸ್ಥೆಯನ್ನು ಮುಳುಗಡೆಮಾಡಿ ಈ ದೇಶವನ್ನು ಮಾರಾಟ ಮಾಡತಕ್ಕ ದಿಶೆಯಲ್ಲಿ ಹೊರಟು ನಮ್ಮ ಕಣ್ಣಿನಲ್ಲಿ ನೀರನ್ನು ತಂದು ನಮ್ಮನ್ನು ನಿರ್ವೀರ್ಯರನ್ನಾಗಿ ಮಾಡಬೇಡಿ ಇಂಡಿಯಾ ದೇಶದಲ್ಲಿರತಕ್ಕ 44 ಕೋಟಿ ಜನರ ಎದುರಿಗೆ ಮೈಸೂರು ದೇಶದಲ್ಲಿರತಕ್ಕ ಪ್ರಜೆಗಳು ತಲೆ ಎತ್ತಿ ತಿರುಗದಂತೆ ಮಾಡಬೇಡಿ, ನಮ್ಮ ದೇಶದ ಪರಿಸ್ಥಿತಿ ಯಾವ ರೀತಿ ಇದೆ ಎಂಬುದನ್ನು ಹೇಳಿ ಎಂದು ಕೇಳುತ್ತಾ ಇದ್ದೆ. ಇವತ್ತಿನ ದಿವಸ ಹೆಚ್ಚಾಗಿ ಹಣ ತರುತ್ತೇವೆ ಎಂದು ಹೇಳಿ ಅವರು ಮದರಾಸಿಗೆ ಹೋಗಿದ್ದಾರೆ, ಅವರ ಜೊತೆಯಲ್ಲಿ ಮುಖ್ಯ ಮಂತ್ರಿಗಳೂ ಕೂಡ ಪ್ರಯಾಣ ಮಾಡಿದ್ದಾರೆ. ಮುಖ್ಯಮಂತ್ರಿ ನಿಜಲಿಂಗಪ್ಪನವರು ಈ ಕಡೆ ಕುಳಿತಿದ್ದವರು ಅಧಿಕಾರಕ್ಕೆ ಏರಿದಾಗ ದೇಶವನ್ನು ಕಟ್ಟಬಲ್ಲರು, ದೇಶವನ್ನು ಸರಿಯಾಗಿ ನಡೆಸಬಲ್ಲರು, ದೇಶದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಬಲ್ಲರು ಎಂದು ಹೇಳಿ ಒಂದು ಆಶೋತ್ತರ ಇತ್ತು. ನಮ್ಮ ಆ ಆಶೆಯೆಲ್ಲಾ ಇವತ್ತು ನಿರಾಶೆಯಾಗಿದೆ. ನಿದ್ರಾಸ್ಥಿತಿಯಲ್ಲಿದ್ದ ಕನಸಿನಂತಾಗಿದೆ. ನಿಜಲಿಂಗಪ್ಪನವರ ರಾಜ್ಯ ಬಂದ ಮೇಲೆ, ನಿಜಲಿಂಗಪ್ಪನವರು ಅಧಿಕಾರಕ್ಕೆ ಏರಿದ ಮೇಲೆ ಈ ರಾಜ್ಯದಲ್ಲಿ ಏನು ಆಯಿತು, ಏನೇನು ನಡೆಯಿತು ಎಂದು ಹೇಳಿ ನನ್ನ ಹತ್ತಿರ ಒಂದು ಪಟ್ಟಿಯೇ ಇದೆ. ವಿದ್ಯಾರ್ಥಿಗಳ ಮುಷ್ಕರ ಆಯಿತು. ಉಪಾಧ್ಯಾಯರ ಮುಷ್ಕರ ಆಯಿತು, ಎನ್. ಜಿ. ಓ. ಗಳ ಮುಷ್ಕರ ಆಯಿತು, ಕರಭಾರ ಜಾಸ್ತಿ ಆಯಿತು, ನೀರಿನ ತೆರಿಗೆ ಜಾಸ್ತಿ ಆಯಿತು, ಎಲ್ಲಿ ನೋಡಿದರೂ ಅಸಮಾಧಾನ, ಎಲ್ಲಿ ನೋಡಿದರೂ ಡಿಸ್‌ಆರ್ಡರ್. ವರ್ತಕರನ್ನು ತೆಗೆದುಕೊಳ್ಳಿ, ಅಸಮಾಧಾನ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಿ ಅಸಮಾಧಾನ, ಉಪಾಧ್ಯಾಯರನ್ನು ತೆಗೆದುಕೊಳ್ಳಿ ಅಸಮಾಧಾನ, ಅಧಿಕಾರಿಗಳನ್ನು ತೆಗದುಕೊಳ್ಳಿ ಅಸಮಾಧಾನ, ಶಾಸನಸಭಾಸದಸ್ಯರನ್ನು ತೆಗೆದುಕೊಳ್ಳಿ ಅಸಮಾಧಾನ, ಸಾಮಾನ್ಯ ಜನರನ್ನು ತೆಗೆದುಕೊಳ್ಳಿ ಅಸಮಾಧಾನ. ಶ್ರೀಮಾನ್ ಗಾಂಜಿ ವೀರಪ್ಪನವರು ಹೇಳುತ್ತಾ ಇದ್ದರು ಈ ರಾಜ್ಯ ಕಟ್ಟುವುದಕ್ಕೆ ನಾವು, ನೀವು ಸತತವಾಗಿ ಪ್ರಯತ್ನ ಮಾಡೋಣ ಎಂದು. ನಿಮ್ಮ ಜೊತೆಯಲ್ಲಿ ಸೇರಿ ಒಳ್ಳೆಯ ರಾಜ್ಯವನ್ನು ಕಟ್ಟುವುದಕ್ಕೆ, ಒಳ್ಳೆಯ ಬುನಾದಿಯ ಮೇಲೆ ರಾಜ್ಯವನ್ನು ಕಟ್ಟುವುದಕ್ಕೆ ಎಷ್ಟು ಬೇಕಾದರೂ ನಾವು ದುಡಿಯುವುದಕ್ಕೆ ಸಿದ್ಧ: ಆದರೆ ಇವತ್ತು ಅಧಿಕಾರದಲ್ಲಿರತಕ್ಕ ಪಕ್ಷ ಯಾವ ದಿಕ್ಕಿನಲ್ಲಿ, ಎಷ್ಟು ವೇಗದಲ್ಲಿ ಓಡುತ್ತಾ ಇದೆ, ಅಧಿಕಾರದಲ್ಲಿರುವ ಮಂತ್ರಿಗಳು ಎಷ್ಟು ಜವಾಬ್ದಾರಿಯಿಂದ ಕೆಲಸಮಾಡುತ್ತಾ ಇದ್ದಾರೆ ಎಂಬುದನ್ನು ನೋಡಿದರೆ ನಮ್ಮ ಆಶಾ ಗೋಪುರವೆಲ್ಲಾ ಕಳಚಿ ಬಿದ್ದು ಹೋಗಿದೆ. ಅವತ್ತಿನ ದಿವಸ ಅರಿಕೆ ಮಾಡಿಕೊಂಡೆ. ಆರ್ಥಿಕ ಸಚಿವರು ಹೇಳಿದ ರೀತಿಯಲ್ಲಿ 4 ಕೋಟಿ ರೂಪಾಯಿಗಳ ಖೋತಾ ಇರತಕ್ಕ ಖೋತಾ ಬಡ್ಜೆಟ್ಟನ್ನು ಚರ್ಚೆ ಮಾಡುವಾಗ ಈ ದಿನ ಒಬ್ಬ ಮಂತ್ರಿಇಲ್ಲ. ಉಪಮಂತ್ರಿ ಒಬ್ಬರ ಕೈಗೆ ನಿಮ್ಮ ಎಲ್ಲಾ ಆಡಳಿತವನ್ನೂ ಕೊಟ್ಟು ಈ ದೇಶದ ಹಿತವನ್ನು ಎಷ್ಟು ಅಲಕ್ಷ್ಯದಿಂದ, ನಿರ್ಲಕ್ಷ್ಯದಿಂದ ನೋಡುತ್ತಾ ಇದ್ದೀರಿ ಎಂಬುದನ್ನು ಹೇಳುವುದಾದರೆ, ನಿಮ್ಮ ಸ್ನೇಹಿತರು ನಿಮ್ಮ ಪಕ್ಷದವರೇ ಹೇಳಿದಂತಹ ಮಾತನ್ನು ಮನದಟ್ಟು ಮಾಡಿಕೊಳ್ಳಿ. ಈಗಾಗಲೇ ಶ್ರೀಮಾನ್ ಆರ್. ಎಸ್. ಪಾಟೀಲ್ ಅವರು ನಿಮಗೆ ಆಡಳಿತವನ್ನು ನಡೆಸುವುದಕ್ಕೆ ಯೋಗ್ಯತೆ ಇಲ್ಲ ಎಂದು ಹೇಳಿದರು. ನಿಮಗೆ ಯೋಗ್ಯತೆ ಇಲ್ಲ ಎಂದು ಹೇಳಿದ ಮೇಲೆ ನಿಮ್ಮಲ್ಲಿ ಆತ್ಮಗೌರವ ಇದ್ದಲ್ಲಿ ಅಧಿಕಾರದಲ್ಲಿ ಇರಬೇಡಿ. ಈಗಲೇ ಅಧ್ಯಕ್ಷರ ಕಡೆಗೆ ತಮ್ಮ ರಾಜೀನಾಮೆ ಪತ್ರವನ್ನು ಕೊಟ್ಟು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಿ. ಇವತ್ತು ರಾಜ್ಯದಲ್ಲಿ ಎಲ್ಲೂ ಕೂಡ ಸಮಾಧಾನ ಇಲ್ಲ. ಒಂದು ಕಡೆ ಎನ್. ಜಿ. ಓ. ಗಳು ಕೆಲಸ ಮಾಡುತ್ತಾ ಇಲ್ಲ, ಮೌನವ್ರತ ಮಾಡುತ್ತಾ ಇದ್ದಾರೆ, ಮತ್ತೊಂದು ಕಡೆ ಯಾವ ಕೆಲಸವನ್ನು ಮಾಡುವುದಕ್ಕೂ ಕೂಡ ತಮ್ಮ ಹತ್ತಿರ ದುಡ್ಡು ಇಲ್ಲ ಎಂದು ಹೇಳುತ್ತಾ ಇದ್ದೀರಿ, ದೇಶದಲ್ಲಿ ಎಲ್ಲಾ ಅಭಿವೃದ್ಧಿಕಾರ್ಯಗಳೂ ಅಸ್ತವ್ಯಸ್ತವಾಗಿವೆ. ಆದ್ದರಿಂದ ನಾನು ತಮಗೆ ಇವತ್ತಿನ ದಿವಸ ಹೇಳುವುದಾದರೆ ತಮಗೇನಾದರೂ ಈ ದೇಶ ಉಳಿಸಬೇಕೆಂದು ಇದ್ದರೆ ತಾವು ತಮ್ಮ ಕೆಲಸಕ್ಕೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ರಾಜೀನಾಮೆ ಕೊಡಬೇಕು. ರಾಜೀನಾಮೆ ಕೊಟ್ಟು ಸರ್ಕಾರದ ಆಡಳಿತವನ್ನು ಗವರ್ನರ್ ಅವರಿಗೆ ಒಪ್ಪಿಸಿ. ಗವರ್ನರ್ ಅವರು ತಮಗೆ ಬೇಕಾದ ಮೂರು ನಾಲ್ಕು ಜನ ಅಡ್ವೈಸರ್ಸ್‌ನ್ನು ಇಟ್ಟು ಕೊಂಡು ಈ ದೇಶದ ರಾಜ್ಯಭಾರವನ್ನು ಎರಡು ವರ್ಷಗಳ ಕಾಲ ಮಾಡಲಿ. 1967ರಲ್ಲಿ ಹೊಸ ಚುನಾವಣೆಯಾದಾಗ ಮತ್ತೆ ಏನಾದರೂ ಮಾಡುವುದಕ್ಕೆ ಸಾಧ್ಯವಾಗಬಹುದು. ಈಗಂತೂ ರಾಜೀನಾಮೆ ಕೊಟ್ಟು ಈ ಶಾಸನ ಸಭೆಯ ಕಾರ್ಯಕಲಾಪಗಳನ್ನು ಗವರ್ನರ್ ಅವರಿಗೆ ಒಪ್ಪಿಸಿ. ಇವತ್ತು ಪಾರ್ಲಿಮೆಂಟರಿ ಸೆಕ್ರೆಟರಿಗಳು ಇಬ್ಬರು ಇದ್ದಾರೆ. ಮುನಿಸಿಪಲ್ ಅಡ್ಮಿನಿಸ್ಟ್ರೇಷನ್‌ಗೆ ಒಬ್ಬರು ಮಂತ್ರಿಗಳು, ಒಬ್ಬರು ಉಪಮಂತ್ರಿಗಳು ಇದ್ದಾರೆ, ಪಿಡಬ್ಲ್ಯುಡಿಗೆ ಒಬ್ಬರು ಮಂತ್ರಿಗಳು, ಮೈನರ್ ಇರಿಗೇಷನ್‌ಗೆ ಒಬ್ಬರು ಉಪಮಂತ್ರಿಗಳು ಇದ್ದಾರೆ, ಈ ರೀತಿ ನೀವು ಯಾರಿಗೆ ಏನೂ ಕಡಿಮೆ ಇಲ್ಲ. ಆ ಕಡೆ ಇರುವವರಿಗೆ ಹೇಳುತ್ತೇನೆ ಈ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಈ ದೇಶಕ್ಕೆ ಒಳ್ಳೆಯದು ಮಾಡಬೇಕೆಂದು ಹೇಳಿ ಎಷ್ಟೋ ಜನ ಎದೆತಟ್ಟಿಕೊಂಡು ಗುಂಡಿನ ಏಟಿಗೆ ಎದೆ ಕೊಟ್ಟರು. ತಾವೆಲ್ಲರೂ ಕೂಡ ದೇಶದ್ರೋಹಿಗಳು ಎಂದು ನಾನು ಹೇಳುವುದಿಲ್ಲ. ದೇಶದ ಸ್ವಾತಂತ್ರ್ಯಕ್ಕೆ ಹೋರಾಟ ಮಾಡಿದಂತಹವರು ಅಲ್ಲಿ ಇದ್ದಾರೆ. ಆದರೆ ಈಚೆಗೆ ಆ ದಿವಸ ಇದ್ದಂತಹ ಮನೋವೃತ್ತಿ ಅವರಲ್ಲಿ ಕಾಣಬರುತ್ತಾ ಇಲ್ಲ. ತಮ್ಮ ಸ್ವಂತ ಮಗ, ತಮ್ಮ, ಅಳಿಯ ಮತ್ತು ನೆಂಟರಿಷ್ಟರಿಗೆ ಈ ದೇಶದ ಆಸ್ತಿ ಇದೆ ಎಂದು ಹೇಳಿ ಮಾಡಿಕೊಳ್ಳುವುದಾದರೆ ಅದಕ್ಕಿಂತಲೂ ಪಾಸ್ಟಿಟ್ಯೂಷನ್ ಇನ್ನು ಯಾವುದು ಇದೆ ? ಪಾಸ್ಟಿಟ್ಯೂಷನ್ ಎಂದರೆ :

Prostitution means, they are making use of their position to benefit their own people ಇದನ್ನು ಏಕೆ ಹೇಳುತ್ತೇನೆ ಎಂದರೆ, ಬಹಳ ನೊಂದ ಮನಸ್ಸಿನಿಂದ ಹೇಳುತ್ತಾ ಇದ್ದೇನೆ. ಶ್ರೀಮಾನ್ ಜತ್ತಿಯವರನ್ನು ಸ್ವಾಮಿ, ಶಿವರಾತ್ರಿ ದಿವಸ ಬಜೆಟ್ ಇಡಬೇಡಿ ಎಂದು ನಾನು ಕೇಳಿಕೊಂಡೆ. ಅವತ್ತು ಬಜೆಟ್ ಕೊಟ್ಟರು. ಅದನ್ನು ಕೇಳಿದವರು ಎಷ್ಟು ಜನ ! ಶಿವರಾತ್ರಿ ದಿವಸ ಎಷ್ಟೋ ಜನ ಮೆಂಬರುಗಳು ಇರಲಿಲ್ಲ. ಸಮಾಧಾನ ಇರುವವರು ಕೇಳಿಕೊಂಡು ಹೋಗಲಿ, ನಾನು ಮಾಡಬೇಕಾದ ಕೆಲಸವನ್ನು ನಾನು ಮಾಡಿದೆ ಎಂದು ಹೇಳಿದರೆ ಇದು ಎಂತಹ ವಿಚಿತ್ರ ! ಇದು ಹೇಗೆ ಇದೆ ನೋಡಿ ಖಜಾನೆಯಲ್ಲಿ ಹಣ ಹೇಗೆ ಖಾಲಿಯಾಗುತ್ತದೆಯೋ ಹಾಗೆ ಅವರು ಪ್ರಿಂಟ್ ಮಾಡಿಸಿದ ಬಜೆಟ್ ಭಾಷಣದ ಪುಸ್ತಕದಲ್ಲಿ ಹಾಳೆಗಳೇ ಖಾಲಿ. ನಮ್ಮ ದೇಶದ ಸ್ಥಿತಿಗತಿಗಳು ಚೆನ್ನಾಗಿವೆ ಎಂದು ಹೇಳುತ್ತಾರೆ. ಜತ್ತಿಯವರು ರಿಸರ್ವ್‌ಬ್ಯಾಂಕ್‌ನಿಂದ ಎಷ್ಟು ಓವರ್ ಡ್ರಾ ಮಾಡಿದ್ದಾರೆ ? ಸ್ಟೇಟ್‌ರೀ ಆರ್ಗನೈಸೇಷನ್ ಆಕ್ಟ್ ಪ್ರಕಾರ ಎಷ್ಟು ಕೋಟಿ ರೂಪಾಯಿ ತೆರಿಗೆಯನ್ನು ಹಾಕಬೇಕಾಗಿತ್ತು, ಹೊರಗಡೆಯಿಂದ ಸಾಲ ಮಾಡಿ ತಂದ ಹಣಕ್ಕೆ ಎಷ್ಟು ಬಡ್ಡಿ ಕೊಡಬೇಕು ಇದೆಲ್ಲಾ ಲೆಕ್ಕಾಚಾರ ಹೇಗೆ ? ಈ ಎಲ್ಲ ಲೆಕ್ಕಾಚಾರವನ್ನೂ ಹಾಗೆ ಉಳಿಯತಕ್ಕ ಹಣವನ್ನು ತೆಗೆದುಕೊಂಡರೆ ಎಷ್ಟು ಹಣ ಡೆವಲಪ್‌ಮೆಂಟ್ ಕಾರ್ಯಕ್ರಮಗಳಿಗೆ ಸಿಕ್ಕುತ್ತದೆ ಎಂಬುದನ್ನು ನೋಡುವುದಾದರೆ 1965-66ನೇ ಸಾಲಿಗೆ ಯಾವ ಡೆವಲಪ್‌ಮೆಂಟ್ ಕಾರ್ಯಗಳೂ ಕೂಡ ಕಾಣುತ್ತಾ ಇಲ್ಲ, ಏನು ಮಾಡುವುದಕ್ಕೂ ಸಾಧ್ಯವಿಲ್ಲ. ಈಗ ಕಟ್ಟುತ್ತಾ ಇರತಕ್ಕ ಕೆರೆಗಳನ್ನು ಪೂರೈಸುವುದಕ್ಕೆ ಸಾಧ್ಯವಿಲ್ಲ, ಪಿಕ್ ಅಪ್‌ಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ರಸ್ತೆಗಳನ್ನು ಮಾಡುವುದಕ್ಕೆ ಹಣ ಇಲ್ಲ. ತಾವು ಶುರು ಮಾಡಿರುವ ಶಾಲೆಗಳನ್ನು ನಡೆಸುವುದಕ್ಕೆ, ಶಾಲೆಯ ಉಪಾಧ್ಯಾಯರುಗಳಿಗೆ ಸಂಬಳಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಶ್ರೀಮಾನ್ ಜತ್ತಿಯವರ ಪ್ರಕಾರ 4 ಕೋಟಿ ರೂಪಾಯಿ ಖೋತಾ ಬಜೆಟ್ ಎಂದು ಹೇಳುತ್ತಾರೆ. ನಾನು ಇವತ್ತು ಸಾಬೀತು ಮಾಡಿಕೊಡುತ್ತೇನೆ ಇದು 4 ಕೋಟಿ ರೂಪಾಯಿ ಖೋತಾ ಅಲ್ಲ 40 ಕೋಟಿ ರೂಪಾಯಿ ಖೋತಾ ಬಜೆಟ್ಟು. 1965ನೇ ಜೂನ್ ಮತ್ತೊಂದು ಸಪ್ಲಿಮೆಂಟರಿ ಬಜೆಟ್‌ನ್ನು ಅವರು ತರುತ್ತಾರೆ 20 ಕೋಟಿ ರೂಪಾಯಿಗಳನ್ನು ಕೇಳುತ್ತಾರೆ, ಅದೇ ರೀತಿ ನವೆಂಬರ್ ಡಿಸೆಂಬರ್ ಹೊತ್ತಿಗೆ ಮತ್ತೊಂದು ಸಪ್ಲಿಮೆಂಟರಿ ಬಜೆಟ್‌ನ್ನು 20 ಕೋಟಿ ರೂಪಾಯಿಗಳಿಗೆ ತರುತ್ತಾರೆ ಹಣವನ್ನು ಕೇಳುತ್ತಾರೆ. 1962 ರಿಂದ 1965ರ ವರೆಗೂ ಎಷ್ಟು ಸಪ್ಲಿಮೆಂಟರಿ ಬಜೆಟ್‌ನ್ನು ತಂದಿದ್ದಾರೆ ಎಷ್ಟು ಹಣವನ್ನು ತೆಗೆದುಕೊಂಡಿದ್ದಾರೆ ಎಂಬುದನ್ನು ಲೆಕ್ಕ ಹಾಕಿದರೆ ಮೈಸೂರು ಸಂಸ್ಥಾನದ ಖಜಾನೆಯಲ್ಲಿ ಇರತಕ್ಕ ಹಣ ನಮಗೆ ಬರತಕ್ಕ ರೆವಿನ್ಯೂ ನೋಡಿದರೆ ಮೈಸೂರು ಸಂಸ್ಥಾನದ ಬಜೆಟ್ ನಲ್ವತ್ತು ಕೋಟಿ ರೂಪಾಯಿಗಳ ಖೋತಾ ಬಜೆಟ್ಟು ಆಗಿದೆ. 40 ಕೋಟಿ ರೂಪಾಯಿಗಳ ಖೋತಾ ಬಜೆಟ್ ಇರತಕ್ಕ ಈ ರಾಜ್ಯದಲ್ಲಿ 30 ಜನ ಅಧಿಕಾರ ಸ್ಥಾನದಲ್ಲಿದ್ದು ದೇಶಕ್ಕೆ ಹೊರೆಯಾಗಿ ಕುಳಿತಿದ್ದಾರೆ. ದಿನ ಬೆಳಗಾದರೆ ಒಬ್ಬ ಚೀಫ್ ಇಂಜನಿಯರು, ದಿನ ಬೆಳಗಾದರೆ ಒಬ್ಬ ಜಾಯಿಂಟ್ ಡೈರೆಕ್ಟರು, ದಿನ ಬೆಳಗಾದರೆ ಒಂದು ಕಮಿಟಿ, ದಿನ ಬೆಳಗಾದರೆ ಒಂದು ಕಮಿಷನ್, ದಿನ ಬೆಳಗಾದರೆ ಒಂದು ಬೋರ್ಡು ಮಾಡಿಕೊಂಡು ಹೋಗುತ್ತಾ ಇದ್ದಾರೆ. ಈ ರಾಜ್ಯದಲ್ಲಿ ಅಧಿಕಾರಕ್ಕೆ ಆಸೆ ಪಡತಕ್ಕ ಈ

ಪೊಲಿಟಿಕಲ್ ಸಫರರ್ಸ್ ಯಾರಿದ್ದಾರೆ ಅವರನ್ನು ಬೋರ್ಡುಗಳಲ್ಲಿ, ಕಮಿಟಿಗಳಲ್ಲಿ, ಕಮಿಷನ್‌ಗಳಲ್ಲಿ ಚೇರ್ಮನ್‌ರನ್ನಾಗಿ ನೇಮಕ ಮಾಡುತ್ತಾ ಇರುವುದರಿಂದ ಎಷ್ಟು ಹಣ ತಮಗೆ ಖರ್ಚಾಗುತ್ತದೆ ಎಂಬುದನ್ನು ತಾವೇ ಅರ್ಥ ಮಾಡಿಕೊಳ್ಳಬೇಕು. ಮೊನ್ನೆ ತಾನೆ ಒಂದು ವಿಜಿಲೆನ್ಸ್ ಕಮಿಷನ್ ಅಂತ ಮಾಡಿದ್ದೀರಿ. ವಿಜಿಲೆನ್ಸ್ ಕಮಿಷನ್ನಿಗೆ ಹೈಕೋರ್ಟಿನ ಒಬ್ಬ ನಿವೃತ್ತ ನ್ಯಾಯಾಧೀಶರನ್ನು ನೇಮಕ ಮಾಡಿದ್ದಾರೆ. ಅವರ ಸಂಬಳವೇನು ಎನ್ನುವುದು ಗೊತ್ತಿಲ್ಲ, ಅವರ ಸಿಬ್ಬಂದಿ ವಿಷಯವೂ ಗೊತ್ತಿಲ್ಲ.

ಇತ್ತೀಚೆಗೆ ಒಬ್ಬ ಡಿ.ಐ.ಜಿ. ಅವರನ್ನು ನೇಮಕ ಮಾಡಿದ್ದಾರೆ. ಅವರ ಕೈಕೆಳಗೆ ಎಷ್ಟು ಜನ ಅಧಿಕಾರಿಗಳಿದ್ದಾರೆ ಎನ್ನುವುದು ಗೊತ್ತಿಲ್ಲ. ದಿನ ಬೆಳಗಾದರೆ ಅಧಿಕಾರಿಗಳ ಒಂದು ಹೊರೆಯೇ ಆಗಿದೆ. ಈ ಸರ್ಕಾರ ಇನ್ನೂ ಒಂದು ಕೆಲಸ ಮಾಡಿದೆ. ಬೇಳೆಯನ್ನು ಕೊಂಡುಕೊಳ್ಳುವುದಕ್ಕಾಗಿ ಉತ್ತರ ಪ್ರದೇಶ, ಒರಿಸ್ಸ, ಹೈದರಾಬಾದು ಇಲ್ಲಿಂದ ಕೊಂಡುಕೊಳ್ಳುವುದಕ್ಕಾಗಿ ಒಂದು ಕೋ-ಆಪರೇಟಿವ್ ಫೆಡರೇಷನ್ ಎಂದು ಮಾಡಿದರು. ಇದಕ್ಕೆ ಚೇರ್ಮನರು ಈ ಶಾಸನ ಸಭೆಯ ಒಬ್ಬ ಸದಸ್ಯರು. ಅವರಿಗೆ ಕೊಡತಕ್ಕ ಸನ್ಮಾನ ಎಲ್ಲ ಇದೆ. ಈ ಕನ್‌ಸ್ಯೂಮರ್ಸ್ ಫೆಡರೇಷನ್ನಿಗೆ ಒಬ್ಬ ಮಾಜಿ ಮಂತ್ರಿ ಉಪಾಧ್ಯಕ್ಷರು. ಈ ರಾಜ್ಯದಲ್ಲಿ ನಡೆಸತಕ್ಕ ಪ್ರತಿಯೊಂದು ಕರ್ತವ್ಯವೂ ರೈತನ ಹಿತದಿಂದ ನಡೆಯುತ್ತಿದೆಯೇ, ದೇಶದ ಕಲ್ಯಾಣಕ್ಕಾಗಿ ನಡೆಯುತ್ತಿದೆಯೇ ಎಂದು ಕೇಳಬೇಕಾಗಿದೆ.

ಆಹಾರದ ವಿಷಯವಾಗಿ ಬಹಳ ಮಾತನಾಡಿದ್ದಾರೆ. ಆ ಬಗ್ಗೆ ನಾನು ಒಂದು ಮಾತನ್ನೂ ಆಡುವುದಿಲ್ಲ. ವ್ಯವಸಾಯ ಇಲಾಖೆಯಲ್ಲಿ ಒಬ್ಬ ಜಾಯಿಂಟ್ ಡೈರೆಕ್ಟರನ್ನು ಕಾನೂನಿಗೆ ವಿರುದ್ಧವಾಗಿ ನೇಮಕ ಮಾಡಿ ಅದನ್ನು ಸರಿಪಡಿಸಲು ಇನ್ನೂ ಐದು ಜನರಿಗೆ ನೇಮಕ ಮಾಡಿದರು. ವ್ಯವಸಾಯ ಇಲಾಖೆಯಲ್ಲಿ ಬೆಳೆದಂಥ ಅಧಿಕಾರಿಗಳ ಸಂಖ್ಯೆಯನ್ನು ನೋಡಿದರೆ ಯಾವ ಗದ್ದೆಯಲ್ಲಿ ಬತ್ತ ಬೆಳೆಯುವುದಿಲ್ಲ, ಕಡಲೆಕಾಯಿ ಬೆಳೆಯುವುದಿಲ್ಲ, ಯಾವುದೂ ಬೆಳೆಯುವುದಿಲ್ಲ. ಯಾವ ಭೂಮಿಯಲ್ಲಿಯೂ ಬೆಳೆ ಬೆಳೆಯುವುದಿಲ್ಲ. ಶ್ರೀಮಾನ್ ಮಾದಪ್ಪ ಗೌಡರು ಹೇಳಿದರು ಈ ಇಲಾಖೆಯ ಡೈರೆಕ್ಟರನ್ನು ವಜಾ ಮಾಡಿ ಎಂದು. ಅವರನ್ನು ವಜಾ ಮಾಡಬೇಕಾಗಿಲ್ಲ ಎಂದು ನಾನು ಹೇಳುತ್ತೇನೆ. ಇದರ ಆಡಳಿತವೆಲ್ಲ ಯಾರ ಕೈಯಲ್ಲಿದೆ ಅವರು ಹಾಗೆ ಮಾಡಬೇಕು. ಹೈಕೋರ್ಟಿನವರು ಒಂದು ತೀರ್ಮಾನವನ್ನು ಕೊಟ್ಟಿದ್ದಾರೆ. ಅದರಲ್ಲಿ ಡಿಸಿಪ್ಲಿನ್ ವಿಷಯದಲ್ಲಿ ಹೀಗೆ ಹೇಳಿದ್ದಾರೆ. 'Demoralisation has already crept in. The Agricultural Department will collapse......' ಇದನ್ನು ವ್ಯವಸಾಯ ಮಂತ್ರಿಗಳು ತಿಳಿದುಕೊಂಡು ಮುಖ್ಯಮಂತ್ರಿಗಳೇ ನನ್ನ ರಾಜಿನಾಮೆಯನ್ನು ತೆಗೆದುಕೊಳ್ಳಿ, ಈ ಖಾತೆಯನ್ನು ಇಟ್ಟುಕೊಳ್ಳುವುದಕ್ಕೆ ನಾನು ಲಾಯಖ್ ಆಗಿಲ್ಲ. ನಾನು ಒಬ್ಬ ಸಾಮಾನ್ಯ ಸದಸ್ಯನಾಗಿ ಸಭೆಯಲ್ಲಿರುತ್ತೇನೆ ಎಂದು ಹೇಳಬೇಕಾಗಿತ್ತು. ಹೆಚ್ಚು ಆಹಾರವನ್ನು ಬೆಳೆಯಲು ಬೆಟ್ಟ, ಗುಡ್ಡ, ನದಿ, ಕಾಲುವೆ, ಅಮೃತಮಹಲ್ ಕಾವಲು, ಅರಣ್ಯ, ಗೋಮಾಳ, ಎಲ್ಲವನ್ನೂ ಕೊಟ್ಟಿರಿ. ಆದರೆ ಇನ್ನೂ ನಾಲ್ಕು ಲಕ್ಷ ಟನ್ ಆಹಾರ ನಮಗೆ ಬೇಕು ಎಂದು ರೆವೆನ್ಯೂ ಮಂತ್ರಿಗಳು ಹೇಳುತ್ತಿದ್ದಾರೆ. ಲಕ್ಷಾಂತರ ಎಕರೆ ಭೂಮಿಯನ್ನು ಕೊಟ್ಟು ಲಕ್ಷ ಟನ್ ಆಹಾರವನ್ನು ಬೆಳೆದರೆ ನಮಗೆ ಇನ್ನೂ ಎಷ್ಟು ಲಕ್ಷ ಟನ್ ಆಹಾರ ಬೇಕು ? ಮೈನರ್ ಇರಿಗೇಷನ್ ಯಾವ ರೀತಿಯಾಗಿ ಅಭಿವೃದ್ಧಿ ಮಾಡಿದ್ದಾರೆ, ಅದರಿಂದ ಎಷ್ಟು ಲಕ್ಷ ಎಕರೆ ಭೂಮಿ ಬಂತು, ಅದನ್ನು ಯಾವ ರೀತಿ ಉಪಯೋಗಿಸಿಕೊಂಡರು ಎಂದು ಹೇಳಬೇಕು. ತುಂಗಭದ್ರ ನೀರನ್ನು ಆಂಧ್ರಕ್ಕೆ ಹೇಗೆ ಕೊಟ್ಟಿರಿ ಎಂದರೆ ಇಂಥಿಂಥ ಕಂಡಿಷನ್‌ಗಳನ್ನು ಹಾಕಿ ಕೊಟ್ಟಿದ್ದೇವೆಂದು ಹೇಳಿದರು. ಇದರಿಂದ ಅವರಿಗೆ ಒಂದು ಹಕ್ಕು ಬಂದಂತಾಗುತ್ತದೆ, ಟೆಂಪೊರರಿಯಾಗಿಯೋ ಅಥವಾ ಹೇಗೋ. ಅಧಿಕಾರಕ್ಕೆ ಅಂಟಿಕೊಳ್ಳಬೇಕು ಎಂದು ಕೇಂದ್ರದಲ್ಲಿ ಉಕ್ಕು ಶಾಖೆಯ ಮಂತ್ರಿಗಳಾಗಿರುವವರನ್ನು ಒಪ್ಪಿಸುವುದಕ್ಕೋಸ್ಕರವಾಗಿ ಇದನ್ನೆಲ್ಲ ಮಾಡಿದ್ದಾರೆ. ಇದು ನ್ಯಾಯವೇ, ಇದು ದೇಶ ಪ್ರೇಮವೇ, ಎಂದು ಕೇಳುತ್ತೇನೆ.

ತುಂಗಭದ್ರ ನೀರು ಗುಲ್ಬರ್ಗ ಮತ್ತು ರಾಯಚೂರು ಭಾಗಗಳಿಗೂ ಬರುತ್ತದೆ. ಅದರಿಂದ ಹೈದರಾಬಾದು ಕರ್ಣಾಟಕಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತಾರೆ. ಆದರೆ ಇಷ್ಟು ವರ್ಷವಾದರೂ ಎಲ್ಲ ಭೂಮಿಯನ್ನೂ ಉಪಯೋಗ ಮಾಡಿಕೊಳ್ಳುವುದಕ್ಕೆ ನಮ್ಮ ವ್ಯವಸಾಯ ಇಲಾಖೆಯಿಂದ ಆಗಿಲ್ಲ. ಹೀಗಾದರೆ ಇವರು ಮಾಡುವುದಾದರೂ ಏನು ಎಂದು ಕೇಳುತ್ತೇನೆ. ಇಲ್ಲಿ ಒಬ್ಬ ಪಾರ್ಲಿಮೆಂಟರಿ ಸೆಕ್ರೆಟರಿ ಇರುತ್ತಾರೆ. ಅವರು ನಾವು ಕೇಳಿದ ಪ್ರಶ್ನೆಗಳಿಗೆ ಉತ್ತರ ಹೇಳುತ್ತಾರೆ. ಮಂತ್ರಿಗಳು ಯಾರೂ ಇರುವುದಿಲ್ಲ. ಪಾರ್ಲಿಮೆಂಟರಿ ಸೆಕ್ರೆಟರಿಯವರ ವಿಷಯದಲ್ಲಿ ನನಗೆ ವ್ಯಕ್ತಿಶಃ ಗೌರವವಿದೆ. ಅವರಿಗೆ ಏನು ಅಧಿಕಾರವನ್ನು ಕೊಟ್ಟಿದ್ದೀರಿ ? ಚೀಫ್ ಸೆಕ್ರೆಟರಿ ಅಥವಾ ಯಾವ ಸೆಕ್ರೆಟರಿ ಅವರ ಮಾತನ್ನು ಕೇಳುತ್ತಾರೆ ? ಮಂತ್ರಿಗಳು ಸಭೆಯಲ್ಲಿಲ್ಲದೆ ಇರುವಾಗ ಉತ್ತರ ಹೇಳುವುದಕ್ಕೆ ತಡಬಡಿಸುತ್ತಾರೆ. ನಾವೇನಾದರೂ ಕೇಳಿದರೆ ಅಧ್ಯಕ್ಷರು ಗಂಟೆ ಬಡಿಯುತ್ತಾರೆ. ನಾವು ಬಾಯಿ ಮುಚ್ಚಿಕೊಳ್ಳಬೇಕಾಗುತ್ತದೆ.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ವ್ಯವಸಾಯ, ರೆವಿನ್ಯೂ ವಿದ್ಯಾಭ್ಯಾಸ, ಆಹಾರ, ಪೋಲೀಸ್, ಸಮಾಜಕಲ್ಯಾಣ ಹೀಗೆ ಯಾವ ಇಲಾಖೆಗಳನ್ನೇ ತೆಗೆದುಕೊಳ್ಳಿ ಎಲ್ಲಿಯಾದರೂ ಸ್ವಲ್ಪವಾದರೂ ನೆಟ್ಟಗಿದೆಯೇ ಎಂದು ಕೇಳುತ್ತೇನೆ. ಈ ದೇಶದಲ್ಲಿ ನಾಲ್ಕೂವರೆ ಕೋಟಿ ರೂಪಾಯಿ ದುಡ್ಡಿಲ್ಲ ಎಂದರೆ ಗುಲ್ಬರ್ಗದಲ್ಲಿ ಭಾಷಣವನ್ನು ಮಾಡಿ ಸೆಕೆಂಡರಿ ವಿದ್ಯಾಭ್ಯಾಸವನ್ನು ಮಾಫಿ ಮಾಡುತ್ತೇವೆ ಎಂದು ವಿದ್ಯಾಮಂತ್ರಿಗಳು ಹೇಳಿದ್ದಾರೆ. ಇದನ್ನು ಏಕೆ ಹೇಳುತ್ತಾರೆಂದರೆ ಈ ದೇಶದ ಪರಿಸ್ಥಿತಿಯನ್ನು ಚೆನ್ನಾಗಿ ಅರಿವು ಮಾಡಿಕೊಂಡಿಲ್ಲದೆ ಇರುವ ಜನ ಅಧಿಕಾರದಲ್ಲಿದ್ದಾರೆ. ನಾನು ಭರತ, ರಾಮನಿಗೆ ರಾಜ್ಯವನ್ನು ಒಪ್ಪಿಸಿದೆ, ಎನ್ನುವ ಒಂದು ನೆಪವನ್ನು ಮಾಡಿಕೊಂಡು ತಾನು ಹೇಳುವುದೆಲ್ಲ ನಡೆಯುತ್ತದೆ ಎಂದರೆ ನ್ಯಾಯವಲ್ಲ. ಅವರು ಮಾಡಿರುವುದನ್ನೆಲ್ಲ ವಿದ್ಯಾ ಖಾತೆಯ ವಿಷಯಕ್ಕೆ ಬಂದಾಗ ಹೇಳುತ್ತೇನೆ. ಒಂದರಘಳಿಗೆಯೂ ಅವರು ರಾಜ್ಯದ ಮಂತ್ರಿಯಾಗಿ ರಾಜ್ಯದಲ್ಲಿ ಯಾವ ಅಧಿಕಾರ ಸ್ಥಾನದಲ್ಲಿರುವುದಕ್ಕೂ ಲಾಯಖ್ ಅಲ್ಲ ಎನ್ನುವುದು ನನ್ನ ಅಭಿಪ್ರಾಯ. ಈ ಸಭೆಯಲ್ಲಿ ಶ್ರೀ ಮುಕ್ಕಣ್ಣಪ್ಪನವರು ಒಬ್ಬರು ನನ್ನ ವಿರೋಧವಾಗಿ ಹೇಳುತ್ತಾರೆ ಎಂದು ಅವರು ಹೇಳಬಹುದು. ಅವರಿಗೆ ವಿರೋಧವಾಗಿ ಹೇಳುವವರು ಈ ಸಭೆಯಲ್ಲಿ ಬಹಳ ಜನರಿದ್ದಾರೆ. ಅವರು ನನಗೆ ವೋಟು ಹಾಕುತ್ತಾರೆ. ಎಷ್ಟರ ಮಟ್ಟಿಗೆ ಈ ದೇಶದ ವಿದ್ಯಾಭ್ಯಾಸದ ಸ್ಥಿತಿಗತಿಗಳನ್ನು ತಂದಿದ್ದಾರೆ ಎಷ್ಟು ಅಸ್ತವ್ಯಸ್ತ ಮಾಡಿದ್ದಾರೆ ಮಕ್ಕಳ ತಲೆಯ ಮೇಲೆ ಎಷ್ಟು ಹೊರೆ ಹಾಕಿದ್ದಾರೆ ಎಂಬುದನ್ನು ಪರಿಶೀಲಿಸಿದರೆ ಗೊತ್ತಾಗುತ್ತದೆ.

[Mr. SPEAKER in the Chair].

ಇನ್ನು ಅಪಾಯಿಂಟ್‌ಮೆಂಟ್ಸ್ ವಿಷಯ. ಎಸ್. ಎಸ್. ಎಲ್. ಸಿ., ಬಿ.ಎಸ್‌ಸಿ., ಎಂ.ಎಸ್‌ಸಿ., ಪಾಸ್ ಮಾಡುತ್ತಾರೆ, ಪಿ.ಎಚ್.ಡಿ., ಪಾಸ್ ಮಾಡುತ್ತಾರೆ. ಅಂಥವರಿಗೆಲ್ಲ ಈ ರಾಜ್ಯದಲ್ಲಿ ಕೆಲಸ ಸಿಕ್ಕುವುದಿಲ್ಲ. ಅವರು ಒರಿಸ್ಸಾಕ್ಕೊ, ರಾಜಾಸ್ಥಾನಕ್ಕೊ ಅಥವಾ ಉತ್ತರ ಪ್ರದೇಶಕ್ಕೊ ಕೆಲಸಕ್ಕೆ ಹೋಗುತ್ತಾರೆ. ಇದಕ್ಕೆಲ್ಲ ಕಾರಣರು ಯಾರು ? ಈಗಿನ ಮಂತ್ರಿಗಳೇ ಕಾರಣ. ಡಿವಿಷನ್ ಮಟ್ಟದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ಕಮಿಟಿಗಳನ್ನು ಮಾಡಿದ್ದಾರೆ. ಸಬ್ ಇನ್‌ಸ್ಪೆಕ್ಟರನ್ನು ನೇಮಕ ಮಾಡುವುದಕ್ಕೆ ಒಂದು ಕಮಿಟಿ, ದಫೇದಾರರನ್ನು ನೇಮಕ ಮಾಡುವುದಕ್ಕೆ ಒಂದು ಕಮಿಟಿ ಹೀಗೆ ಒಂದೊಂದು ದರ್ಜೆಯ ಅಧಿಕಾರಿಗಳನ್ನೂ ನೇಮಕ ಮಾಡುವುದಕ್ಕೆ ಕಮಿಟಿಗಳನ್ನು ಮಾಡುವುದರಿಂದ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಏನೂ ಕೆಲಸವಿಲ್ಲದಂತಾಗಿದೆ. ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ಐದು ಜನ ಸದಸ್ಯರಿದ್ದಾರೆ. ಅವರಲ್ಲಿ ಒಬ್ಬರು ಚೇರ್ಮನ್ ಇದ್ದಾರೆ. ಈಗ ರಾಜ್ಯ ಮಟ್ಟದ ಮತ್ತು ಡಿವಿಷನ್ ಮಟ್ಟದ ಕಮಿಟಿಗಳು ಮಾಡುತ್ತಿರುವ ಕೆಲಸವನ್ನೆಲ್ಲ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಕೊಡಿ ಇಲ್ಲದೆ ಹೋದರೆ ಪಬ್ಲಿಕ್ ಸರ್ವಿಸ್ ಕಮಿಷನ್ನಿನಲ್ಲಿ ಒಬ್ಬರೇ ಸದಸ್ಯರನ್ನಿಟ್ಟುಕೊಂಡು ಉಳಿದವರನ್ನು ತೆಗೆದು ಹಾಕಿ. ಇಲ್ಲವೆ ಹೋದರೆ ದೇಶಕ್ಕೆ ಅನ್ಯಾಯ ಮಾಡುತ್ತಿದ್ದೀರಿ ಎಂದು ಹೇಳುತ್ತಿದ್ದೇನೆ.

ಈಗ ರಾಜ್ಯಮಟ್ಟದಲ್ಲಿ ಮತ್ತು ಡಿವಿಷನ್ ಮಟ್ಟದಲ್ಲಿ ಕೆಲಸಗಳು ನಡೆಯುತ್ತಿರುವುದರಿಂದ ಕೆಲವು ಅನ್ಯಾಯಗಳು ನಡೆಯುತ್ತವೆ. ಇದರಿಂದ ಏನಾಗಿದೆ ಎನ್ನುವುದು ಗೊತ್ತೇ ? ನಮ್ಮ ರಾಜ್ಯಾಂಗದ ಘಟನಾವಳಿಯಲ್ಲಿ ಜಾತೀಯತೆ ಇಲ್ಲ ಎಂದು ಹೇಳಿದ್ದಾರೆ. ಆದರೆ ಈ ಕಮಿಟಿಗಳು ರಿಕ್ರೂಟ್ ಮಾಡಿರುವವರ ಜಾತಿ ಯಾವುದು ಎಂದು ತೆಗೆದು ನೋಡಿದರೆ ಅಲ್ಲಿ ನೂರಕ್ಕೆ 80 ಭಾಗ ಒಂದೇ ಜಾತಿಯವರು ಇರುತ್ತಾರೆ. ಇನ್ನು 20 ಭಾಗದ ಜನರು ಎಲ್ಲ ಜಾತಿಯವರೂ ಹಂಚಿಕೊಂಡಿರುತ್ತಾರೆ. ಆದುದರಿಂದ ರಾಜ್ಯ ಮಟ್ಟದ ಮತ್ತು ಡಿವಿಷನ್ ಮಟ್ಟದ ಕಮಿಟಿಗಳನ್ನು ಕೂಡಲೇ ರದ್ದುಮಾಡಿ ಇಲ್ಲವೇ ಪಬ್ಲಿಕ್ ಸರ್ವಿಸ್ ಕಮಿಷನ್ ಅನ್ನು ಏಕ ಸದಸ್ಯ ಕಮಿಷನ್ ಆಗಿ ಮಾಡಿ ಎಂದು ಮತ್ತೊಮ್ಮೆ ಸರ್ಕಾರವನ್ನು ಕೇಳುತ್ತೇನೆ.

5-30 P. M.

ಹಣಕಾಸಿನ ಸಚಿವರು ಎನ್. ಜಿ. ಒ. ಗಳಿಗೆ ಸಂಬಳಗಳನ್ನು ಜಾಸ್ತಿ ಮಾಡಬೇಕಾದರೆ ಆ ರೀತಿ ಮಾಡುವುದಕ್ಕೆ ಸಾಧ್ಯವಿಲ್ಲ ಸ್ವಲ್ಪ ರಿಟ್ರೆಂಚ್ ಮಾಡಬೇಕಾಗಿದೆಯೆಂಬುದಾಗಿ ಹೇಳಿದರು. ನಾನು ಅವರನ್ನು ಕೇಳುತ್ತೇನೆ. ಚೀಫ್ ಸೆಕ್ರೆಟರಿಯವರಿಗೆ 3 ಸಾವಿರ, ಡೆಪ್ಯುಟಿ ಸೆಕ್ರೆಟರಿಗಳಿಗೆ ಒಂದೂವರೆ ಸಾವಿರ, ಐ. ಎ. ಎಸ್. ಮತ್ತು ಐ. ಪಿ. ಎಸ್. ಎಂಬ ಶಬ್ದಕ್ಕೋಸ್ಕರ ಮರ್ಯಾದೆಗಾಗಿ ಅದನ್ನು ಪಡೆದಂತಹವರಿಗೆ, ಸಾವಿರ, ಒಂದೂವರೆ ಸಾವಿರ, 2 ಸಾವಿರ, 3 ಸಾವಿರ ರೂಪಾಯಿಗಳಂತೆ ಒಂದು ಕಡೆ ಸಂಬಳ ಕೊಡುವುದು, ಇನ್ನೊಂದು ಕಡೆ ಬಡ ನೌಕರರು ಸಂಬಳ ಜಾಸ್ತಿ ಬೇಕು ಎಂಬುದಾಗಿ ಕೇಳಿದರೆ ಕೆಲವರನ್ನು ಕೆಲಸದಿಂದ ತೆಗೆದು ಸಿಬ್ಬಂದಿಯನ್ನು ಕಡಿಮೆ ಮಾಡುತ್ತೇವೆಂದು ಹೇಳುವುದು

ಇದು ಯಾವ ನ್ಯಾಯವೆಂದು ನಾನು ಕೇಳಬೇಕಾಗಿದೆ. ಅಂತಹ ದೊಡ್ಡ ದೊಡ್ಡ ಸಂಬಳಗಾರರು ಏನು ಮಾಡುತ್ತಾರೆಂದರೆ, ಸಿನಿಮಾ ಮಂದಿರಗಳಲ್ಲಿಯೋ ಅಥವಾ ವೆಸ್ಟ್‌ಎಂಡ್ ಮತ್ತು ಬ್ರಾಡ್‌ವೆ ಹೋಟಲುಗಳಲ್ಲಿಯೋ ಹೋಗಿ ರೆಸ್ಟ್ ತೆಗೆದುಕೊಳ್ಳುವುದು—ಈ ರೀತಿಯಾಗಿ ಅವರು ತಮ್ಮ ಕಾಲವನ್ನು ಕಳೆದುಬಿಡುತ್ತಾರೆ. ಆದರೆ ಒಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಕೊಡಬೇಕಾಗಿದೆ. ನಾಗಮಂಗಲಕ್ಕೆ ಒಬ್ಬ ರೈತ ಒಕ್ಕಲಿಗನಾದವನು ರಾತ್ರಿ ಮಾಡಿದ ಹಿಟ್ಟನ್ನು ಕಟ್ಟಿಕೊಂಡು ಒಬ್ಬ ಆಫೀಸರ ಮನೆಯಲ್ಲಿ ಕೆಲಸ ಮಾಡುತ್ತಿದ್ದಾನೆ, ಅವನ ಪರಿಸ್ಥಿತಿ ಹೇಳಬೇಕಾಗಿಲ್ಲ......

**Mr. SPEAKER.**—Is the Member concerned as to how officers spend their time ?

**Sri C. J. MUCKANNAPPA.**—I am appealing to the sentiments of the Government how a poor Vokkaliga working in Vidhana Souda bring one ragi ball prepared in night and eat it at one O'clock near Vidhana Soudha. Is it not a heart-rendering situation ? What is the Government doing ? What is this Congress Party doing ? I am appealing to their sentiments. You say retrenchment ? Is it the way of dealing with the finances of the State ? ಇದು ತಮಗೆ ಯೋಗ್ಯವಾಗುವುದಿಲ್ಲ. ಈಗ ಇವರನ್ನು ರಿಟ್ರೆಂಚ್ ಮಾಡುತ್ತೀರಿ. ಶ್ರೀಮಾನ್ ನಿಜಲಿಂಗಪ್ಪನವರೂ ಸೇರಿ ಮಂತ್ರಿಮಂಡಲದಲ್ಲಿ 27 ಜನರಿದ್ದಾರೆ. ಆದರೆ ಅವರೇ ಮುಂದೆ ಬಂದು ನಾವೇ ಹೋಗುತ್ತೇವೆ. ಎಂದು ಏಕೆ ಹೇಳಬಾರದು, ಆ ಮಾತನ್ನು ಶ್ರೀಮಾನ್ ನಿಜಲಿಂಗಪ್ಪನವರು ಮೊದಲು ಹೇಳಬಹುದಾಗಿತ್ತು. ದೇಶಪ್ರೇಮವಿದ್ದರೆ ಈ ಸಭೆಯ ಸದಸ್ಯನಾಗಿರುತ್ತೇನೆ. ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿ ಬಹಳ ಗಂಭೀರವಾಗಿದೆ. ದೇಶ ನನ್ನಮೇಲೆ ಆಶೆ ಇಟ್ಟರೆ ಪುನಃ ರಾಜ್ಯದ ಮುಖ್ಯ ಮಂತ್ರಿಯಾಗುತ್ತೇನೆಂದು ಅವರು ಹೇಳಬಹುದು. ಶ್ರೀ ವೀರೇಂದ್ರ ಪಾಟೀಲರೂ ಸಹ ನಮಗೆ ಬೇಡ ನೀವೇ ನೋಡಿಕೊಳ್ಳಿ ಎಂದು ಹೇಳಲಿ.

**Mr. SPEAKER.**—Which portion of the Budget the Member is dealing with ?

**Sri C. J. MUCKANNAPPA.**—I am dealing with the finances of the State ?

**Mr. SPEAKER.**—I do not think by this Budget speech he is going to persuade any Minister to resign.

**Sri C. J. MUCKANNAPPA.**—Under the General discussion of the budget speech of the Finance Minister, we have to enunciate policies how to spend money, what will be the form of Government and how to implement the policies ?

**Mr. SPEAKER.**—The Hon'ble Memer is doing something else. He is asking the Minister to resign ?

**Sri C. J. MUCKANNAPPA.**—It is just to provide money for NGOs, construction of pick-ups etc. Let it be a small sized Ministry containing 8 or 10 people. It is enough. When there is no money, when there is so much burden on the exchequer, that is my appeal through the Hon'ble Speaker to these 27 Ministers and Deputy Ministers and Parlimentary Secretaries : please realise where we are ? What is the position of our finances ? ಆದಕ್ಕೋಸ್ಕರವಾಗಿ ನಾನು ಅವರಲ್ಲಿ ಅಪೀಲು ಮಾಡುತ್ತಿದ್ದೇನೆ. ನಾವು ಇವರ ಮುಂದೆ ನಿಂತು ಮಾತನಾಡುವುದು ಸಮುದ್ರದ ಮುಂದೆ ಅರವಂಟ್ಟಿಗೆ ಇಟ್ಟಹಾಗೆ ಆಗಿದೆ. ತಮಗೆ ಇರುವ ಅನುಭವದ ಮುಂದೆ ನಾನು ಮಾತನಾಡುವುದು ಅಲ್ಪವಾಗುತ್ತದೆ. ನಾನು ಬಡ್ಜೆಟ್ ಎಲ್ಲಾ ನೋಡಿದ್ದೇನೆ. 1965-66 ರಲ್ಲಿ ಏನು ಕಾಂಗ್ರೆಸ್‌ನವರು ಸುಖೀರಾಜ್ಯ ಹಾಗೂ ರಾಮರಾಜ್ಯವನ್ನು ನಮ್ಮ ದೇಶದಲ್ಲಿ ಕಟ್ಟುತ್ತೇವೆಂದು ಹೇಳುತ್ತಿದ್ದರೋ ಅದೇ ಪ್ರಕಾರ ಶ್ರೀಮಾನ್ ಟಿ. ಮಾದಯ್ಯಗೌಡರು ಇವತ್ತು ಹೇಳಿ ಸ್ವಿಟ್ಜರ್‌ಲೆಂಡ್, ಅಮೆರಿಕಾ ಇಂಗ್ಲೆಂಡ್ ಮುಂತಾದ ದೇಶಗಳಿಗೆ ಹೋಗುತ್ತೇವೆ, ಅಲ್ಲಿನ ಸ್ಥಿತಿಗತಿಗಳನ್ನು ಕಂಡು ಇಲ್ಲಿ ರಾಮರಾಜ್ಯ ಮಾಡುತ್ತೇವೆಂದು ಹೇಳುತ್ತಿದ್ದಾರೆ, ಏತಕ್ಕೆ ಹೀಗೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮಾಡುತ್ತಿದ್ದಾರೆಂದರೆ ಈಗ ದೇಶದಲ್ಲಿ ಎಲ್ಲೂ ಸಮಾಧಾನವಿಲ್ಲ. ಆದ್ದರಿಂದ ಮಂತ್ರಿಮಂಡಲವನ್ನು ಕಡಿಮೆಮಾಡಿ, ದೊಡ್ಡ ದೊಡ್ಡ ಅಧಿಕಾರಿಗಳನ್ನು ಕಿತ್ತುಹಾಕಿ. ಈಗ ಎಷ್ಟು ಜನ ಅಸಿಸ್ಟೆಂಟ್ ಕಮೀಷನರ್ಸ್, ಎಷ್ಟು ಜನ ಡೆಪ್ಯೂಟಿ ಸೆಕ್ರಟರಿಗಳು, ಹೆಡ್ಸ್ ಆಫ್ ಡಿಪಾರ್ಟ್‌ಮೆಂಟ್ ಎಷ್ಟು ಜನ ಡಿ. ಐ.ಜಿ.ಗಳು ಮತ್ತು ಎಸ್. ಪಿ.ಗಳು ಎಷ್ಟು ಜನ—ಇಷ್ಟೆಲ್ಲಾ ಜಾಸ್ತಿ ಏತಕ್ಕೆ ಎಂಬುದಾಗಿ ನಾನು ಕೇಳುತ್ತೇನೆ. ಮಹಾತ್ಮಾಗಾಂಧಿಯವರೇ ಹಿಂದೆ ಎಷ್ಟೋ ಸಾರಿ ರಾಜ್ಯದಲ್ಲಿ ಪೋಲೀಸ್ ಬಲ ಕಡಿಮೆ ಇರಬೇಕೆಂಬುದಾಗಿ ಹೇಳಿದ್ದಾರೆ. ಇವತ್ತು ಮಾತೆತ್ತಿದರೆ ಪೋಲೀಸ್ ಸೂಪರಿಂಟೆಂಡೆಂಟ್ಸ್, ಐ. ಜಿ. ಮತ್ತು ಡಿ. ಐ. ಜಿ. ವಿಜಿಲೆನ್ಸ್ ಕಮಿಷನರುಗಳು, ಬೆಂಗಳೂರು ಸಿಟಿಗೇ ಒಬ್ಬರು, ರಸ್ತೆ ತುಂಬ ಬಿಳೀನಾಮ ಬರೆಯುವುದಕ್ಕೇ ಒಬ್ಬರು, ರಸ್ತೆಯಲ್ಲಿ ದಾರಿ ತೋರಿಸುವುದಕ್ಕೇ ಒಬ್ಬರು—ಹೀಗೆ ಏತಕ್ಕೆ ವೃಥಾ ಹಣವನ್ನು ಖರ್ಚುಮಾಡುತ್ತಾರೋ ಗೊತ್ತಿಲ್ಲ. ಆದರೆ ಇವರಿಗೆ ದೇಶಾಭಿಮಾನವಿಲ್ಲವೆಂದು ಹೇಳುವುದಿಲ್ಲ. ಇವರು ಎಷ್ಟರಮಟ್ಟಿಗೆ ದರ್ಪ ಮಾಡುತ್ತಿದ್ದಾರೆಂಬುದನ್ನು ನಾವು ಗಮನಿಸಬೇಕು. ಇವರು ಆ ವಿಚಾರವನ್ನು ಎಷ್ಟರಮಟ್ಟಿಗೆ ನಮಗೆ ತೋರಿಸುತ್ತಾರೆ. ಜಪಾನ್ ರಾಜ್ಯ, ಬೊಂಬಾಯಿ ರಾಜ್ಯ ಮತ್ತು ಮೈಸೂರು ರಾಜ್ಯಗಳ ಚಿತ್ರವನ್ನೂ ಸಹ ತೋರಿಸುತ್ತಾರೆ. ಮಂತ್ರಿಗಳು ಏನು ತೋರಿಸುತ್ತಾರೆ ಅಂದರೆ ನಮ್ಮ ರಾಜ್ಯದಲ್ಲಿ ಇವರು ಬೇರೆಬೇರೆ ಪ್ರದೇಶಗಳಲ್ಲಿ ಟೂರ್ ಮಾಡಿದಾಗ ಟಿ.ಎ. ಮತ್ತು ಡಿ.ಎ. ಎಷ್ಟಾಯಿತು ಎಂಬುದನ್ನು ತೋರಿಸುತ್ತಾರೆ. ಗುಲ್ಬರ್ಗಾಕ್ಕೆ ಹೋಗಿ ಬೇಕಾದಷ್ಟು ಹಣ ಖರ್ಚುಮಾಡಿದ್ದೇವೆ. ದೆಹಲಿಗೆ ಹೋಗಿ ಇಷ್ಟನ್ನು ತಂದಿದ್ದೇವೆಂದು ಬಾಯಲ್ಲಿ ಹೇಳುತ್ತಾರೆಯೇ ಹೊರತು ದೇಶದ ಅಭಿವೃದ್ಧಿಗೋಸ್ಕರ ಇವರು ಮಾಡಬೇಕಾದಷ್ಟು ಕೆಲಸವನ್ನು ಮಾಡಿಲ್ಲ. ನಮ್ಮ ದೇಶದ ಅಭಿವೃದ್ಧಿಗೋಸ್ಕರ ದೆಹಲಿಯಿಂದ ಇಷ್ಟು ಕೋಟಿ ರೂಪಾಯಿಗಳನ್ನು ತಂದಿದ್ದೇವೆಂದು ಹೇಳುವುದಕ್ಕೆ ಇವರಿಗೆ ಸಾಧ್ಯವಿಲ್ಲ. ಇದರಿಂದ ನನ್ನ ಮನಸ್ಸಿಗೆ ಬಹಳ ನೋವಾಗುತ್ತದೆಂದು ನಾನು ಹೇಳುತ್ತೇನೆ. ಇನ್ನು ಮಂಗಳೂರು ಬಂದರಿಗಾಗಿ ದುಡ್ಡು ತಂದಿದ್ದೇವೆ ಎಂದು ಹೇಳುತ್ತಾರೆ—ಇದೆಲ್ಲವನ್ನೂ ಹೇಳಿ ಇವರು ನಮಗೆ ಸಮಾಧಾನ ಏಕೆ ಮಾಡಬೇಕು ಎಂದು ನಾನು ಕೇಳುತ್ತೇನೆ. ಸಾಮಾನ್ಯ ಪ್ರಾಜೆಕ್ಟುಗಳಿಗಾಗಿ ರೆವಿನ್ಯೂ ಸೆಟಲ್‌ಮೆಂಟ್‌ನಲ್ಲಿ ಒಂದು ಎಕರೆಗೆ 440 ರೂಪಾಯಿಗಳೆಂದರೆ ಹೇಗೆ ಕೊಡುತ್ತಾರೆ? ನಾನೇ ಅಲ್ಪಸ್ವಲ್ಪ ಜಮೀನನ್ನು ಹೊಂದಿದ್ದೇನೆ. ಒಂದು ಎಕರೆಗೆ 200 ರೂಪಾಯಿಗಳಂತೆ ಕೊಡಿ. ನಾನೇ ಒಪ್ಪುತ್ತೇನೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ, ಚಿಂತಾಜನಕವಾಗಿದೆ. ಈ ರಾಜ್ಯದ ಅಭಿವೃದ್ಧಿಗೆ ಹಾಗೂ ಈ ರಾಜ್ಯದ ಕಲ್ಯಾಣಕ್ಕೆ ಈ ಕಾಂಗ್ರೆಸ್ ಪಕ್ಷ ಎಲ್ಲಿ ಕುಠಾರಪ್ರಾಯವಾಗುತ್ತದೋ ಎಂಬ ಭಯವಿದೆ. ನಾನಾ ತರಹ ಅಕ್ಕಿಯನ್ನು ನನ್ನ ಮುಂದೆ ಇಟ್ಟುಕೊಂಡಿದ್ದೇನೆ. ಅವನ್ನು ತೋರಿಸುವುದಕ್ಕೆ ಅಪ್ಪಣೆಯಾದರೆ ತೋರಿಸುತ್ತೇನೆ. ನಿಮಗೇ ಕೊಡುತ್ತೇನೆ. ನಾಲ್ಕು ವೆರೈಟಿಗಳನ್ನು ಒಂದೇ ಡಿಪೋನಲ್ಲಿ ಮಾರಾಟ ಮಾಡುತ್ತಿದ್ದಾರೆ. ಕಾಂಗ್ರೆಸ್‌ನವರು ಹೋದರೆ ಒಂದು ಅಕ್ಕಿ, ನಾನು ಹೋದರೆ ಒಂದು ಅಕ್ಕಿ ಪಿ.ಎಸ್.ಪಿ.ಯವರು ಹೋದರೆ ಒಂದು ಅಕ್ಕಿ, ಕಮ್ಯೂನಿಸ್ಟ್ ಅವರು ಹೋದರೆ ಒಂದು ಅಕ್ಕಿ—ಇದು ದೇಶದಲ್ಲಿ ಯಾವ ರೀತಿ ನ್ಯಾಯವೆಂಬುದನ್ನು ಈ ಸಭೆ ಮನಗಾಣಬೇಕು. ಒಂದೊಂದು ರಾಜಕೀಯ ಪಕ್ಷಕ್ಕೆ ಒಂದೊಂದು ರೀತಿ ಅಕ್ಕಿಯನ್ನು ಮಾರಾಟ ಮಾಡುವುದು ದೇಶದಲ್ಲಿ ನ್ಯಾಯವೇ ಎಂದು ಪ್ರಶ್ನೆ ಮಾಡುತ್ತೇನೆ. ಇವರು ದೇಶದಲ್ಲಿರುವವರೆಲ್ಲರನ್ನೂ ಒಂದೇ ದೃಷ್ಟಿಯಿಂದ ನೋಡುತ್ತೇವೆಂದು ಬಾಯಲ್ಲಿ ಹೇಳುವುದು. ಈ ರೀತಿಯಾಗಿ ವರ್ತಕರಿಗೆ ಪ್ರೋತ್ಸಾಹ ಕೊಡುವುದು. ಇದರಿಂದ ಈ ಸರ್ಕಾರಕ್ಕೆ ಖಂಡಿತವಾಗಿ ಮರ್ಯಾದೆ ಬರುವುದಿಲ್ಲ. ಈಗ ಮುಖ್ಯವಾಗಿ ದೊಡ್ಡದೊಡ್ಡ ಹುದ್ದೆಗಳನ್ನು ಕೂಡಲೇ ಅಬಾಲಿಷ್ ಮಾಡಬೇಕು. ಇರತಕ್ಕ ಹುದ್ದೆಗಳಲ್ಲಿಯೇ ಆ ದೊಡ್ಡದೊಡ್ಡ ಹುದ್ದೆಗಳನ್ನು ವಿಲೀನ ಮಾಡಿ ಹಣವನ್ನು ಉಳಿಸಿ ಸರ್ಕಾರದವರು ಒಳ್ಳೆಯ ಹೆಸರನ್ನು ಪಡೆಯಲಿ ಎಂದು ನಾನು ಹೇಳುತ್ತೇನೆ. ಹಸಿದು ಇರತಕ್ಕ ಎನ್.ಜಿ.ಒ.ಗಳಿಗೆ ಮತ್ತು ಆಫೀಸರುಗಳ ಮನೆ ಬಾಗಿಲು ಕಾಯುತ್ತಿರತಕ್ಕ ಸಣ್ಣ ನೌಕರರಿಗೆ ಸಾಕಷ್ಟು ಅನ್ನ ಹಾಕಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

**Sri B. P. KADAM** (Karwar).—Mr. Speaker, Sir, during the general discussion on the Budget, there have been strongly worded speeches, charges and counter-charges. All this, in my opinion at this stage is quite welcome because a stage has come in the history of the State and the country where there must be very serious thinking. We have been rather indifferent and almost idle for the last so many years and we have in a manner almost carrying on the legacy of the British with the result

that we have been facing a severe strain and stress and almost convulsions in day to day life of the country. Sir, so far the economic advancement and the food front are concerned, we are nowhere. It is stated what was grown in 1947 has not been grown even now, but it must be admitted that what was grown in 1953-54 was not grown in the year 1962-63 or 1963-64. The Planning Commission's fugures for 1963-64 come to 7½ crores of tons of foodgrains but according to sample survey, it is 8½ crores of tons. Even our figures at such a high level do not agree. It is stated that the population has gone up. But certainly the population has gone up. Have we been in a position to produce what the country produced in the 1953-54? Have we been able to produce what has been produced in the year 1962-63? It must be admitted that the country's leadership in the food front has failed. Sir, what is the cause for all this? Ministers are going on in their usual routine, with their pomp and unfortunately the legion of officers are doing nothing. They are going on in the same way in which they have pursued during the British regime. Sir, a stage has come when there must be some sort of dynamism on the food front. Either the country must survive or suffer extinction in the next few years. Sir, Government must have a crash programme by which this problem can be solved. Simply stating that the Government cannot do any thing more nobody can help, will lead us nowhere. Serious thinking must come from the top men in the country. The late Prime Minister NEHRU used to say; every educated person whether in offiice or elsewhere, whether he occupied a high position in public life or he is a common man, must think that he is a trustee for the country. Therefore, I think a sense of seriousness must be created in the mind of everybody and I suggest that the Ministers both at the Government of India level and at the State level must take it seriously. Sir, why have we failed? There must to be a speedy answer. Simply saying that so many wells have been dug, so many pumpsets have been set up, will lead us nowhere. Therefore, I suggest that there must be serious thinking at this stage. We must think of a definite programme to grow more vegetables, horticulture, milk-prodction, to produce poultry, meot production and concentrate attention of the subsidiary foods......

Mr. SPEAKER.—What about fish?

Sri B. P. KADAM.—It is bound to be there. Without that the coastal population will vanish.

Mr. SPEAKER.—In Karwar there was plenty of sardines this time.

Sri B. P. KADAM.—But after November. We suffered completely. It was there till November.

Sir, I was saying that these subsidiary foodstuffs which are as good as the main food, they are rich in protein, must be developed. Great stress must be laid on growing more vegetables and more fruit. I appeal to the Revenue Department, the Forest Department to see that as quickly as possible vegetables and fruits are grown in as large a quantity as possible, in all areas, whether it is a major forest, or

(SRI B. P. KADAM)

minor forest. They must be fortwith released for this purpose. Wherever there is perennial source of water supply, such places may be selected for the purpose. I am sure these things can be grown in the matter of a few months and its impact on the Subsidiary food front will not be a small thing.

Sir, the other thing also, regardig the growing of cocount and cashew nuts, areca nuts, pulses. These things are also necessary. Sir, Mysore is the second largest coconut growing State in the whole country, but the entire country is in deficit so far as coconut is concerned to the tune of 1·50 crores and more. If we step up coconut production, I am sure we cannot step up production in a year or two, it is a long term crop. At least by five per cent, within a period of ten years.

Mr. SPEAKER.—Our extra planting every year of coconut is in the order of 2 lakhs.

Sri B. P. KADAM.—Inspite of that, we are in deficit in coconut and we have to import from South East Asian countries, chiefly from Ceylon. Cashewnut is also one of the items in which this country has a monoply. With all that, the progress made is not great. In Maharashtra, the present Chief Minister, when he was the Agriculture Minister he had a crash programme. In a period of 2½ years, he brought nearly 2½ lakhs of acres under cashewnut cultivation. In the State of Maharashtra it is a great achievement, and Gujarath and Maharashtra have within a period of six or seven years gone ahead in all the subsidiary foods with self-confidence and determination. In Cashewnuts, this State must go ahead of Maharashtra. That is may wish. Sir, not only for domestic consumption, but for external markets also, cardamom, pepper, arecanut, and such other spices—in this also this State must have a very broad-based programme so that we can have greater export.

Sir, I will just make a reference to the one serious problem and that is agitation against Hindi. Sir, this is a very great upheaval that the country has faced. At least, when we were college boys, we thought that within a short time, within the time we reach our forties, we would see full national integration. I for one was of the firm opinion that national integration would be easy thing and we felt that the idea, that this whole country would have one national language, peacefull quietly steadily. Because apart from the culture which India has, to a large extent if we had one culture from north to south, we thought we could have one language and integration would be full. Unfortunately, I do not want to take sides or go into the merits. In the southern States and also in certain places in this State, there was so much of ferocity that I must say the younger generation was on war-path. The opposition to Hindi could have been understood. Unfortunately hatred for Hindi developed which is the worst of it. Therefore, I respectfully urge upon everybody, not only here but also outside to take this question seriously and have a

dispassionate view of this question so that if not in the immediate future, at least in the forseeable future or in a generation, this country can be bound by one national language. I never meant that Hindi should be forced on unwilling minds. It should be voluntary and there should be a good deal of devotion to it. At the same time, I am also conscious of the fact that in the northern States, Hindi enthusiasts must not be unduly zealous or furious. That ferocity will bring disunity and misery and I appeal to them also that they must make up their minds to study one of the southern languages and there is no harm in it. We have reports from Russia that there not only Hindi is taught, but as our Union Education Minister said the other day in Lok Sabha, the Russians are masters of Hindi and some of them have written authoritative grammar in that language and not only that, some of them are speaking South Indian languages and it is said that in some Universities, there are taught Telugu, Tamil, Malayalam. We have to believe it. The reports are there. If Russians could take to Tamil, Telugu and Marathi, I do not see why the Hindi zealots should not have perseverence enough to study some of the South Indian languages, it is no use asking my neighbour to know me, it is also our duty to see that I know my neighbour also. So, in my humble opinion, this is a serious question because it has a bearing on national integration and without that national integration, our future will be very dark which we cannot imagine.

Sir, about the question of land revenue, it has been ably dealt with by Sri M. R. Patil. He can safely believe that I support him.

Then, Sir, there is the question of N.G.Os. It is a thing which must be taken up seriously. The N.G.Os are the poor servants of the Government. The prices are going up. From July onwards, the prices of foodstuffs have shot up to an unimaginable extent and the grant of a mere five rupees is nothing. That question must be seriously considered.

There is another question connected with the N.G.Os., and that is about the village peons or Ugranis, as they are called in North Kanara District. I have put a question, and I also referred to it while participating in the general discussion on the Budget in 1963. The poor people, the Ugranis, who are peons attached to village officers in North Kanara, are full-time servants. They have to work for the whole day and all days of the months, and they are paid 26 or 27 rupees. After having served for ten years, they get one rupee increment. Can we imagine in a democratic set-up a poorly paid staff like this? It is a shame to our democracy, with due respect to everybody. I have repeated these things, and I repeat again that Government should consider this question dispassionately. As a matter of fact these poor servants, the Ugranis, have written to this Government very recently that they would resort to hunger strike unless the Government does something for these poor people if we have to call ourselves a democratic state.

I would like to stress one more point. We have great love for the Kannada language and we also admire all our zealots. We request the Government to see that all Kannada areas are brought in the State as expeditiously and as quickly as possible. Even now elections are going

(SRI B. P. KADAM)

on in Kerala. Kasargod is there. The President of All-India Congress has said that soon after the present elections, he would take steps to see that Kasargod is merged in the neighbouring State. That, of course, is a welcome statement.

**Mr. SPEAKER.**—Why bring in politics in Debate here?

**Sri B. P. KADAM.**—That comes, Sir. That will also help the State's revenues. As soon as Kannada areas come here, psychological satisfaction is there and that will help for a speedy growth. While everybody should see that all Kannada areas are brought into the State, as speedily, let it be the endeavour of everybody to see that the neighbouring Marathi areas are merged in the neighbouring Maharashtra, because these events will help national integration. With these words, I resume my seat.

ಶ್ರೀಮತಿ ಸುಶೀಲಾಬಾಯಿ ಹಿರಾಚಂದ್ ಷಾ (ಬಾಗೇವಾಡಿ).—ಮಾನ್ಯ ಸಭಾಪತಿಗಳೇ 1965-66ನೇ ಸಾಲಿನ ಬಜೆಟ್ಟನ್ನು ಸ್ವಾಗತ ಮಾಡುತ್ತಾ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ.

ಹಿಂದಿನ ವರ್ಷ ಆಹಾರ ಪರಿಸ್ಥಿತಿ ಕೆಟ್ಟಿತ್ತು. ಆಗ ನಮ್ಮ ಸರ್ಕಾರದವರು ಗೋಧಿ ಮತ್ತು ಅಕ್ಕಿಯನ್ನು ದೇಶದ ಎಲ್ಲ ಕಡೆಗಳಿಂದಲೂ, ತಂದು ಸಮರ್ಪಕವಾಗಿ ಎದುರಿಸಿದರು. ಅದಕ್ಕೆ ಸರ್ಕಾರಕ್ಕೆ ಅಭಿನಂದನೆ ಕೋರುತ್ತೇನೆ. ಈಗ ಪುನಃ ಮತ್ತೆ ಅದೇ ಅಭಾವ ಪರಿಸ್ಥಿತಿ ಬಂದರೆ, ಅದನ್ನು ಎದುರಿಸಲು ಅಕ್ಕಿ ಮತ್ತು ಜೋಳದ ಸ್ಟಾಕ್ ಇಡಬೇಕು. ಅವುಗಳನ್ನು ವಸೂಲು ಮಾಡಿ ಸಂಗ್ರಹಿಸಿದ್ದರೆ ಮತ್ತೆ ಆಹಾರಧಾನ್ಯ ಕೊರತೆ ಬಂದಾಗ, ಜನಗಳಿಗೆ ಜಾಸ್ತಿ ತೊಂದರೆಯಾಗುತ್ತದೆ ಅದೂ ಅಲ್ಲದೆ, ಹೆಚ್ಚು ಆಹಾರ ಬೆಳೆಯಲು ರೈತರಿಗೆ ಹೆಚ್ಚಿನ ಸಹಾಯವನ್ನು ಕೊಡಬೇಕು. ಇದರಲ್ಲಿ ಮುಖ್ಯವಾಗಿ ಅವರಿಗೆ ಪಂಪು ಸೆಟ್ಟುಗಳನ್ನು ಒದಗಿಸುವ ಬಗ್ಗೆ ತ್ವರಿತ ಗಮನ ಕೊಟ್ಟು, ದೇಶಕ್ಕೆ ಒಳ್ಳೆಯದು ಮಾಡಬೇಕು. ಮೈನರ್ ಇರ್ರಿಗೇಶನ್ನಿಗೆ ಹೆಚ್ಚಿಗೆ ಲಕ್ಷ್ಯ ಕೊಡಬೇಕು. ಬಿಜಾಪುರ ಜಿಲ್ಲೆಯೊಳಗೆ 18 ಇಂಚು ಮಳೆಯಾಗುತ್ತದೆ. ಒಂದೆರಡು ಮಳೆ ತಪ್ಪಿದರೂ, ಇಡೀ ಮೈಸೂರು ರಾಜ್ಯಕ್ಕೆ ಜೋಳ ಮತ್ತು ಹತ್ತಿಯ ಕೊರತೆ ಬರುತ್ತದೆ. ಅಲ್ಲಿ ಅಷ್ಟು ಒಳ್ಳೆಯ ಭೂಮಿ ಇದೆ. ಆದ್ದರಿಂದ ಬಿಜಾಪುರದ ಜಿಲ್ಲೆಯೊಳಗೆ ಮೈನರ್ ಇರ್ರಿಗೇಶನ್ ಬಗ್ಗೆ ಸರ್ವೆ ನಡೆಸಿ, ಎಸ್ಟಿಮೇಟ್ ಮಾಡಿ, ಮೈನರ್ ಇರ್ರಿಗೇಶನ್ನಿಗೆ ಉತ್ತೇಜನ ಕೊಟ್ಟು ಕಿರಿ ವ್ಯವಸಾಯ ಮಾಡುವಂತೆ ಮಾಡಬೇಕು.

ಬಾವಿಗಳ ಬಗ್ಗೆ ಹೇಳಬೇಕಾದರೆ, ರೈತರಿಗೆ ಸಣ್ಣ ಸಣ್ಣ ನೀರಾವರಿಗಳನ್ನು ಹಳ್ಳಿಗಳಲ್ಲಿ ಮಾಡಿಕೊಟ್ಟರೆ ರೈತರಿಗೆ ಕಷ್ಟಪಟ್ಟು ಕೆಲಸ ಮಾಡಿ ಹೆಚ್ಚಿಗೆ ಆಹಾರ ಪದಾರ್ಥಗಳನ್ನು ಬೆಳೆಯಲು ಅನುಕೂಲವಾಗುತ್ತದೆ. ಆದ್ದರಿಂದ ಬಾವಿಗೆ ಸಹಾಯ ಮಾಡಬೇಕು. 500 ರೂಪಾಯಿ ಸಬ್‌ಸಿಡಿ ಬಾವಿಗೆ ಕೊಡುತ್ತಿದ್ದುದನ್ನು ಬಂದ್ ಮಾಡಿದ್ದೀರಿ. ಬರೇ ಲೋನ್ ಇಟ್ಟಿದ್ದೀರಿ. ಬರೀ ಲೋನ್‌ನಿಂದ ಸಹಾಯವಾಗುವುದಿಲ್ಲ. ಲೋನ್ ತೆಗೆದುಕೊಂಡರೆ ಅದಕ್ಕೆ ಬಡ್ಡಿ ಕೊಡಬೇಕು. ಆದ್ದರಿಂದ ಮೊದಲನಂತೆ ಸಬ್‌ಸಿಡಿ ಕೊಡುವ ಸ್ಕೀಮನ್ನು ಮತ್ತೆ ಜಾರಿಗೆ ಕೊಡಬೇಕು.

ಬಿಜಾಪುರ ಜಿಲ್ಲೆಯೊಳಗೆ ಪಂಪು ಸೆಟ್ಟುಗಳಿಗೋಸ್ಕರ ಹಾಕಿದ 400 ಅರ್ಜಿಗಳು ಹಾಗೆಯೇ ಎರಡು ವರ್ಷದಿಂದ ಉಳಿದಿವೆ. ಪಂಪ್ ಸೆಟ್ಟನ್ನು ಎಲ್ಲರಿಗೂ ಕೊಡಬೇಕು. ಈಗ ಒಂದು ಎತ್ತಿನ ಜೋಡಿಗೆ ಎರಡು ಸಾವಿರ ರೂಪಾಯಿ ಆಗುತ್ತದೆ. ರೈತನಿಗೆ ಇಷ್ಟು ಹೆಚ್ಚು ಖರೀದಿಯಲ್ಲಿ ಎತ್ತನ್ನು ಕೊಂಡು ನೀರನ್ನು ಎತ್ತುವುದಕ್ಕಾಗುವುದಿಲ್ಲ. ಬಾವಿ ಕೆಲಸ ಪೂರೈಕೆ ಮಾಡುವುದಕ್ಕೋಸ್ಕರ ಈಗ ರಾಜ್ಯದಲ್ಲಿ ಪಂಪು ಸೆಟ್ಟಿಗೋಸ್ಕರ ಎಷ್ಟು ಅರ್ಜಿಗಳು ಪೆಂಡಿಂಗ್ ಇವೆಯೋ, ಅವುಗಳನ್ನೆಲ್ಲಾ ಫೈಸಲ್ ಮಾಡಲು, ಬೇಕಾದ ಹಣವನ್ನು ಒದಗಿಸಿಕೊಟ್ಟು, ಎಲ್ಲರಿಗೂ ಪಂಪ್‌ಸೆಟ್ ಸರಬರಾಯಿಯಾಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ವ್ಯವಸಾಯದ ಅಭಿವೃದ್ಧಿಗೆ ಹೆಚ್ಚು ಹೆಚ್ಚು ಗಮನ ಕೊಡಬೇಕೆಂದು ಎಲ್ಲರೂ ಹೇಳುತ್ತಾರೆ. ಹೀಗೆ ಹೇಳುವಾಗ ಅಗ್ರಿಕಲ್ಚರ್ ಇನ್‌ಕಂಟಾಕ್ಸ್

ರೈತರಮೇಲೆ ಹಾಕುವುದು ಬಹಳ ಅನ್ಯಾಯ. ರೈತರ ಕಡೆಯಿಂದ ಈ ಬಗ್ಗೆ ಲೆಕ್ಕ ಇಡುವುದು ಸಾಧ್ಯವಿಲ್ಲ. 10 ಎಕರೆಯಲ್ಲಿ ಹತ್ತಿ, 10 ಎಕರೆಯಲ್ಲಿ ಜೋಳ ಹಾಕಿ ಇಷ್ಟೇ ಆದಾಯ ಬಂತೆಂದು ಸರಿಯಾದ ಲೆಕ್ಕ ಕೊಡಿ ಎಂದು ರೈತರನ್ನು ಹೇಳಿದರೆ ಅವರಿಗೆ ತ್ರಾಸು ಆಗುತ್ತದೆ. ಅವರು ವಿದ್ಯಾವಂತರಲ್ಲದ್ದರಿಂದ, ಲೆಕ್ಕ ಇಡಲು ಇತರರ ಸಹಾಯ ಪಡೆಯಬೇಕಾಗುತ್ತದೆ. ಇದರ ಬಗ್ಗೆ ಏನಾದರೂ ಕಿರುಕುಳಗಳು ಬಂದರೆ ವಕೀಲರ ಕಡೆಗೆ, ಅವರಿಗೆ 200-300 ರೂಪಾಯಿ ಕೊಡಬೇಕಾಗುತ್ತದೆ. ಈ ಅಗ್ರಿಕಲ್ಚರ್ ಇನ್‌ಕಂಟಾಕ್ಸ್ ರೈತರಿಗೆ ಬಹಳ ಕಷ್ಟದಾಯಕವಾಗಿದೆ. ಸರ್ಕಾರ ಟ್ಯಾಕ್ಸ್ ತೆಗೆದುಕೊಳ್ಳಬೇಕು ; ಆದರೆ ಇನ್ನು ಯಾವುದಾದರೂ ಬೇರೆ ರೀತಿಯಿಂದ ಅವಶ್ಯವಾದ ತೆರಿಗೆಯನ್ನು ಹಾಕಿ ತೆಗೆದುಕೊಳ್ಳಬಹುದು. ರೈತನಮೇಲೆ ಈ ಅಗ್ರಿಕಲ್ಚರ್ ಇನ್‌ಕಂಟ್ಯಾಕ್ಸ್ ಹೇರುವುದು ಅಂತೂ ಅನ್ಯಾಯ. ಶ್ರೀ ಜತ್ತಿಯವರು ಹಿಂದೆ ಒಂದು ಸಲ ಉತ್ತರ ಕೊಡುತ್ತಾ, ಈ ಬಾಬಿನಿಂದ 80 ಲಕ್ಷ ರೂಪಾಯಿ ಬರುತ್ತದೆಂದು ಹೇಳಿದ್ದರು. ಇಷ್ಟು ಸಣ್ಣ ಆದಾಯದಿಂದ ಸರ್ಕಾರಕ್ಕೆ ಏನು ಬಹಳ ಉಪಯೋಗವಾಗುತ್ತದೆ? ಈ ಉತ್ಪತ್ತಿಯಲ್ಲಿ ಎಷ್ಟೋ ಹಣವನ್ನು ಸ್ಟ್ಯಾಫ್, ಆಫೀಸು, ವಗೈರೆಗೆ ವೆಚ್ಚ ಮಾಡುತ್ತೀರಿ. ಅದ್ದರಿಂದ ಅದರಲ್ಲಿ ನಿಮಗೆ ಉಳಿಯುವುದು ಎಷ್ಟು? ಎಷ್ಟು ಬರುತ್ತದೆ? ಈ ಅಗ್ರಿಕಲ್ಚರ್ ಇನ್‌ಕಂಟ್ಯಾಕ್ಸನ್ನು ರೈತರಿಂದ ತೆಗೆದು ಬಿಡಬೇಕು. ಬೇಕಾದರೆ ಬೇರೆ ರೂಪದಲ್ಲಿ ತೆರಿಗೆ ಹಾಕಬಹುದು.

6-00 P.M.

ಹಿಂದಿನ ವರ್ಷ ಆಹಾರ ಪರಿಸ್ಥಿತಿ ಬಹಳ ಕಠಿಣವಿತ್ತು. ಆಹಾರ ಧಾನ್ಯದ ಕೊರತೆಯಿಂದ ಜನ ಬಹಳ ತ್ರಾಸು ಪಟ್ಟರು. ಪ್ರಾಂತ್ ಬಂದ್ ಇದ್ದುದರಿಂದ ನಮಗೆ ಪಂಜಾಬಿನಿಂದ ಕಡಲೆ ಬರಲಿಲ್ಲ. ಅದೇ ರೀತಿ ಪಂಜಾಬಿನಿಂದ ಬೇಳೆ ಬರುವುದು ಕಷ್ಟವಾಯಿತು. ಸೆಂಟ್ರಲ್‌ನವರು ಪ್ರಾಂತ್ ಬಂದ್ ತೆಗೆದು ಬಿಟ್ಟು, ಗೋಧಿ ಪ್ರಮಾಣ ನಮ್ಮ ರಾಜ್ಯಕ್ಕೆ ಹೆಚ್ಚಿಸಬೇಕು. ಈ ಜಿಲ್ಲಾ ಬಂದಿನಿಂದಲೂ ಜನ ಬಹಳ ಕಷ್ಟ ಪಡುತ್ತಿದ್ದಾರೆ. ಬಿಜಾಪುರಕ್ಕೆ ಒಬ್ಬ ಹೈ ಕೋರ್ಟ್ ಜಡ್ಜರು ಬಂದರು. ಅವರಿಗೆ ಡಿನ್ನರ್ ಕೊಡಬೇಕಾಯಿತು. ಆದರೆ ಅಕ್ಕಿ ಇರಲಿಲ್ಲ. ಹತ್ತು ಕಿಲೋ ಅಲ್ಲಿ ಸಿಗಲಿಲ್ಲ. ನಾನು ಸೋಲಾಪುರದಿಂದ ಅಕ್ಕಿಯನ್ನು ತಂದು ಕೊಡುವ ಪರಿಸ್ಥಿತಿ ಬಂದಿತು. ನಮ್ಮ ಕಡೆಯಿಂದ ನಿಮ್ಮ ಕಡೆಗೆ ಅಕ್ಕಿ ಬರುವ ಹಾಗಿಲ್ಲ. ಇದರಿಂದ ಬಹಳ ಕಷ್ಟವಾಗಿದೆ. ಆದ್ದರಿಂದ ಈ ಜಿಲ್ಲಾ ಬಂದ್ ಆಜ್ಞೆಯನ್ನು ತೆಗೆದು ಬಿಟ್ಟರೆ ಕಷ್ಟ ತಪ್ಪುತ್ತದೆ.

ಆಮೇಲೆ ಜಿಂಕ್ ಶೀಟುಗಳು ಸಿಗುವುದಿಲ್ಲ. ನಮ್ಮಲ್ಲಿ ಹೋದ ಸಲ 50 ಇಂಚ್ ಮಳೆ ಆಯಿತು. ರೈತರು ಹೆಚ್ಚು ಮಳೆಯಿಂದ, ಜಿಂಕ್ ಶೀಟಿಲ್ಲದೆ ಬಹಳ ತೊಂದರೆ ಪಟ್ಟರು. ಪ್ರತಿಯೊಬ್ಬ ರೈತನಿಗೆ 4-4 ಜಿಂಕ್ ಶೀಟು ಒದಗಿಸುವ ಏರ್ಪಾಡು ಮಾಡಬೇಕು. ಪಿ. ಡಬ್ಲ್ಯು. ಡಿ. ಮಿನಿಸ್ಟರರವರ ಕಡೆಗೆ ಕೆಲವು ವಿಚಾರಗಳನ್ನು ಇಲ್ಲಿ ಹೇಳಬೇಕಾಗಿದೆ. ನಮ್ಮ ಕಡೆಯಲ್ಲಿ ರೋಡುಗಳನ್ನು ಮಾಡಬೇಕೆಂದು ಮಾಡುತ್ತಿದ್ದಾರೆ. ನಾನು ಸೂಚಿಸುವುದು ಇರುವ ಹಳೇ ರೋಡುಗಳ ಕೆಲಸಗಳನ್ನು ಮೊದಲು ಮಾಡಿ ಪುರೈಸಿದ ನಂತರದಲ್ಲಿ ಬೇಕಾದರೆ ಹೊಸ ರೋಡುಗಳ ಕೆಲಸವನ್ನು ಮಾಡಬಹುದು. ನಮ್ಮ ಭಾಗದಲ್ಲಿ ಐದು ಮೈಲಿ ರಸ್ತೆಗಳು ಊರಿನೊಳಕ್ಕೆ ಸೇರಿಸುವಂತಹವುಗಳನ್ನೆಲ್ಲಾ ಪಿ. ಡಬ್ಲ್ಯು. ಡಿ. ಇಲಾಖೆಯವರಿಂದಲೇ ಮಾಡಿಸಿದರೆ ನಮ್ಮ ಜನಕ್ಕೆ ಅನುಕೂಲವಾಗುತ್ತದೆ. ಇದರ ಕಡೆಗೆ ಗಮನ ಕೊಡಬೇಕು.

ಸಾರಿಗೆ ಮಂತ್ರಿಗಳ ಕಡೆಗೆ ಕೆಲವು ವಿಚಾರಗಳನ್ನು ಹೇಳಿ ಅವರ ಗಮನಕ್ಕೆ ತರಬೇಕಾಗಿದೆ. ನಮ್ಮ ಬೆಳಗಾಂ ಭಾಗದಲ್ಲಿ ಬರುವ ಬಸ್ಸುಗಳೆಲ್ಲಾ ವೇಳೆಗೆ ಸರಿಯಾಗಿ ಬರುವುದಿಲ್ಲ ಮತ್ತು ಅವರು ಪ್ರತಿಯೊಂದು ತಾಲೂಕಿಗೆ ಬಸ್ ಸ್ಟ್ಯಾಂಡ್ ಕೊಟ್ಟಿದ್ದಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಅಲ್ಲದೆ ನಮ್ಮ ಭಾಗಕ್ಕೆ ಓಡಾಡಲು ಬರುವ ಬಸ್ಸುಗಳನ್ನು ನೋಡಿದರೆ ಬರೀ ಹಳೆಯ ಬಸ್ಸುಗಳೇ ಬರುತ್ತಿವೆ. ಅವುಗಳು ಕೂಡ ಸರಿಯಾಗಿ ಓಡದೇ ದಾರಿಯಲ್ಲಿ ನಿಂತು ಹೋಗುತ್ತವೆ. ಇದರಿಂದ ಜನಕ್ಕೆ ಓಡಾಡಲು ಬಹಳ ತ್ರಾಸು ಆಗುತ್ತಿದೆ. ನಮ್ಮ ಭಾಗಕ್ಕೆ ಪ್ರೈವೇಟ್ ಬಸ್ಸುಗಳಿಲ್ಲ ಇದನ್ನು ತಪ್ಪಿಸಿ ಹೊಸದಾಗಿರುವ ಬಸ್ಸುಗಳನ್ನು ನಮ್ಮ ಭಾಗದಲ್ಲಿ ಓಡುವ ವ್ಯವಸ್ಥೆ ಮಾಡಬೇಕೆಂದು ಇಲ್ಲಿ ಸೂಚನೆ ಕೊಡುತ್ತೇನೆ. ಅಲ್ಲದೆ ಬೆಂಗಳೂರು ಸಿಟಿ ಬಸ್ಸಿನಲ್ಲಿ ಓವರು ಲೋಡು ಬೇರೆ ಮಾಡುತ್ತಾರೆ. 50-60 ಜನರನ್ನು ಬಸ್ಸಿನಲ್ಲಿ ಒಬ್ಬ ಕಂಡಕ್ಟರಾದವರು ಕೂರಿಸಿ ಜನಕ್ಕೆ ಸರಿಯಾದ ಟಿಕೆಟ್ಟುಗಳನ್ನೇ ಕೊಡುವುದಿಲ್ಲ. ಬೇಡಿದವರಿಗೆ ಮಾತ್ರ ಟಿಕೆಟ್ಟು ಕೊಡುತ್ತಾರೆ. ಈ ರೀತಿ ಎಷ್ಟೋ ಹಣ ಸರಕಾರಕ್ಕೆ ಲುಕ್ಸಾನು ಆಗುತ್ತಿದೆ. ಇದರೊಳಗೆ ಪೋಲೀಸು ಅಧಿಕಾರಿಗಳು ಕಂಡಕ್ಟರು ಗಳೊಳಗೆ ಶಾಮೀಲು ಮಾಡಿಕೊಂಡು ಸರಕಾರಕ್ಕೆ ಲುಕ್ಸಾನು ಮಾಡುತ್ತಲಿದ್ದಾರೆ. ಅದರಿಂದಾಗಿ

(ಶ್ರೀಮತಿ ಸುಶೀಲಾಬಾಯಿ ಹಿರಾಚಂದ್ ಷಾ)

ಲಕ್ಷಗಟ್ಟಲೆ ಹಣ ಸರಕಾರಕ್ಕೆ ನಷ್ಟವಾಗುತ್ತದೆ. ಇದನ್ನು ತಪ್ಪಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಇಷ್ಟು ಹೇಳಿ ನನಗೆ ಹತ್ತು ನಿಮಿಷಗಳು ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳು.

ಅಧ್ಯಕ್ಷರು.—ಈಗ ಸಭೆ ಮುಕ್ತಾಯವಾಗಿ (ಸಭೆ) ನಾಳೆ ಬೆಳಗ್ಗೆ 8-30 ಗಂಟೆಗೆ ಮತ್ತೆ ಸೇರಲಿದೆ.

---

*The House adjourned at Five Minutes past Six of the Clock to meet again at Thirty Minutes past Eight of the Clock on Saturday, the 6th March 1965.*

---